ನಿರತರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ" 1992ನೇ ಸಾಲಿನ ಕರ್ನಾಟ ಆಯುರ್ವೇದ ಮತ್ತು ಯುನಾನಿ ವೃತ್ತಿನಿರತ ವೈದ್ಯರ ನೋಂದಣಿ ಮತ್ತು ವೈದ್ಯಕೀಯ ವೃತ್ತಿನಿರತರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಜಿ. ಪುಟ್ಟಸ್ವಾಮಿ ಗೌಡ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ, 1992ನೇ ಸಾಲಿನ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೃತ್ತಿ ನಿರತ ವೈದ್ಯರ ನೋಂದಣಿ ಮತ್ತು ವೈದ್ಯಕೀಯ ವೃತ್ತಿನಿರತರ ಸಂಕೀರ್ಣ ಉಪ ಬಂಧಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, 1991-92ನೇ ಜಂಟಿ ಅಧಿವೇಶನದಲ್ಲಿ ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರು ದಯಪಾಲಿಸಿರತಕ್ಕಂಥ ಭಾಷಣದ ವಂದನಾನಿರ್ಣಯಕ್ಕೆ ನಾನು ನನ್ನ ವಿರೋಧವನ್ನು ವ್ಯಕ್ತಪಡಿಸುವುದಕ್ಕೆ ನಿಂತಿದ್ದೇನೆ. ಮೊದಲನೆಯದಾಗಿ ಇದಕ್ಕೆ ಕಾರಣ ಈ ವಂದನಾ ನಿರ್ಣಯವನ್ನು ಸಭೆಯಲ್ಲಿ ಮಂಡನೆ ಮಾಡಿದವರಾಗಲಿ, ಸೂಚಿಸಿದವರಾಗಲಿ, ಅನುಮೋದನೆ ಮಾಡಿದವರಾಗಲಿ ಯಾರೂ ಇಲ್ಲ. ಇಂಥ ಒಂದು ದುರಂಥ ಈ ರೀತಿ ಸಾಂಪ್ರದಾಯಿಕವಾಗಿ ರಾಜ್ಯಪಾಲರ ಭಾಷಣದ ವಂದನಾನಿರ್ಣಯಕ್ಕೆ ನಾವು ಮಾಡುತ್ತಿರತಕ್ಕಂಥ ಪ್ರವೃತ್ತಿ ಸಲ್ಲದೆಂದು ತಮ್ಮಲ್ಲಿ ಹೇಳಲು ಇಚ್ಚೆ ಪಡುತ್ತೇನೆ.

ಮಾನ್ಯ ರಾಜ್ಯಪಾಲರ ಜಂಟಿ ಅಧಿವೇಶನವನ್ನು ಕರೆದು ಮಾಡುವಂಥ ಭಾಷಣ : ಆಳುವ ಸರ್ಕಾರದ ನೀತಿ ನಿರೂಪಣೆಯನ್ನು ಮತ್ತು ಆ ವರ್ಷದ ಕಾರ್ಯಕ್ರಮಗಳನ್ನು ದಾಖಲು ಮಾಡತಕ್ಕಂಥ ಒಂದು ದಾಖಲೆಯ ಪತ್ರವಾಗಬೇಕು. ಅಷ್ಟೆ ಗಂಭೀರವಾಗಿ ಆಳತಕ್ಕಂಥ ಪಕ್ಷ ಮತ್ತು ಆಳುವ ಮಾನ್ಯ ಸದಸ್ಯರು ಅದನ್ನು ಗಂಭೀರವಾಗಿ ಗಮನಿಸಬೇಕು. ಆದರೆ ಸಭೆಯ ಹಾಜರಾತಿಯನ್ನು ನೋಡಿದರೆ ಅದರ ಗಂಭೀರತೆ ಮಹತ್ವ ಎಷ್ಟೆಂಬುದು ನಮಗೆ ಅರಿವಾಗುತ್ತದೆ.

ಇಂಥ ಸಾಂಪ್ರದಾಯಿಕ ಭಾಷಣಗಳನ್ನು ಮುಂದೆ ರಾಜ್ಯಪಾಲರಿಂದ ಮಾಡಿಸಬೇಕೆ ಇದು ಅನಿವಾರ್ಯವೇ, ಅಗತ್ಯವೇ ಎಂಬ ಮೂಲ ಪ್ರಶ್ನೆ ಕೂಡ ಉದ್ಭವವಾಗುತ್ತದೆ. ನಾನು ಅದಕ್ಕಾಗಿ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ನನ್ನ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಾ ಒಂದು ಮಾತನ್ನು ಹೇಳಿದ್ದೆ. ಇದು ನೀತಿ ನಿರೂಪಣೆ ನಿರೂಪಿಸತಕ್ಕ

ದಾಖಲೆ ಪತ್ರ ಆಗದೆ ಬರೀ ಒಂದು ರಾಜಕೀಯ ಭಾಷಣವಾಗಿದೆ. ಆ ದಿನ ಆ ಭಾಷಣವನ್ನು ಕೇಳುವುದಕ್ಕೆ ಎಷ್ಟು ಜನ ಬಂದಿದ್ದರು ಅವರೆಲ್ಲ ಕೇಳಿ ಮನೆಗೆ ಹೋದರು. ಅದರ ಎತ್ತರ, ಗೌರವ ಘನತೆಯನ್ನು ಕಾಪಾಡುವುದಕ್ಕೆ ಪ್ರಯತ್ನ ಆಳುವ ಪಕ್ಷದಿಂದ ಆಗುತ್ತಿಲ್ಲವೆಂದು ನಾನು ಈ ಸಭೆಗೆ ವಿಷಾದದಿಂದ ಹೇಳಬೇಕಾಗಿದೆ. ಒಟ್ಟಾರೆ ಮಾನ್ಯ ರಾಜ್ಯಪಾಲರ ಈ ಸಾರಿಯ ಭಾಷಣ ನಡೆದ ಮೇಲೆ ಈ ಸರ್ಕಾರ ಏನು? ನನ್ನ ದೃಷ್ಟಿಯಲ್ಲಿ This is a Govenment of Scandal this is a Government of lobbies, this is a Government of the Excise lobby, by the Excise lobby and for the excise lobby.

ಎನ್ನುವಂಥ ಮಾತನ್ನು ಹೇಳಬೇಕಾಗುತ್ತದೆ. ಉಳಿದ ವಿಚಾರಗಳ ಬಗ್ಗೆ ನಾನು ಸುದೀರ್ಘವಾಗಿ ಒಂದೊಂದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇಂಥ ಒಂದು ಬೇಜವಾಬ್ದಾರಿತನಕ್ಕೂ ಇತಿಮಿತಿ ಇದೆ. ಎಲ್ಲಾ ಇತಿಮಿತಿಗಳನ್ನು ಮೀರಿ ಜವಾಬ್ದಾರಿ ಯಾರದ್ದು ಎಂದು ಇವತ್ತು ನಾವು ಪ್ರಶ್ನೆ ಮಾಡಬೇಕಾಗಿದೆ. ಯಾರದ್ದಾದರೂ ಜವಾಬ್ದಾರಿ ಇದೆಯೇ? ಇದ್ದರೆ ಸರ್ಕಾರ ಈ ರೀತಿ ನಡೆದುಕೊಳ್ಳುತ್ತದೆಯೇ? ವಿರೋಧ ಪಕ್ಷದವರು ಮಾತನಾಡುವುದು ಕೂಡ ಮಾನ್ಯರಾಜ್ಯಪಾಲರು ಮಾತನಾಡಿದ ಹಾಗೆ ಒಂದು ಸಂಪ್ರದಾಯವಾಗಿದೆ. ಅವರು ಒಂದು ಸಂಪ್ರದಾಯ ಮಾಡುತ್ತಾರೆ, ನಾವು ಒಂದು ಸಂಪ್ರದಾಯ ಮಾಡೋಣ. ನನಗೆ ಬಹಳ ನಿರಾಶೆ ಆಯಿತು. ಏಕೆಂದರೆ, ಈ ಭಾಷಣದ ವಂದನಾ ನಿರ್ಣಯದ ಸೂಚಕರು, ಅನುಮೋದಕರು ಈ ರಾಜ್ಯದ ವಿಶಿಷ್ಟ ಸಮಸ್ಯೆಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿಸುವುದು ಸಾಧ್ಯವಿಲ್ಲವಿದ್ದರೂ ನಮ್ಮ ಗಮನಕ್ಕೆ ತರುತ್ತಾರೆಂದು ಭಾವಿಸಿದ್ದೆ. ನಮ್ಮಿಂದ ಬೆಂಬಲ ಕೇಳುವಾಗ ಸಶಕ್ತವಾಗಿ ಈ ಭಾಷಣದ ಬಗ್ಗೆ ತಮ್ಮ ಅಭಿಪ್ರಾಯವನ್ನು ಅಭಿವ್ಯಕ್ತ ಮಾಡುತ್ತಾರೆಂಬ ನನ್ನ ನಿರೀಕ್ಷೆ ಹುಸಿಯಾಯಿತು. ಈ ಒಟ್ಟು ಭಾಷಣದಲ್ಲಿ ನಾನು ಹಿಂದಿನ ವರ್ಷಕ್ಕೆ ಹೋಲಿಸಿ ಅನೇಕ ವಿಚಾರಗಳನ್ನು ಮುಂದೆ ಪ್ರಸ್ತಾಪ ಮಾಡುತ್ತೇನೆ. ಕನಿಷ್ಟ ಪಕ್ಷ ಕಳೆದ ವರ್ಷ ರಾಜ್ಯಪಾಲರ ಭಾಷಣದಲ್ಲಿ ಘೋಷಣೆ ಮಾಡಿದಂಥ ವಿಷಯಗಳನ್ನು, ಪ್ರಸ್ತಾಪಗಳನ್ನು ಯಾವ ರೀತಿ ಇವರು ಕಾರ್ಯಗತಗೊಳಿಸಿದ್ದಾರೆ ಅದನ್ನಾದರೂ ಇಲ್ಲಿ ಪ್ರಸ್ತಾಪ ಮಾಡಿದ್ದಾರೆಯೇ? ಒಂದು ಫರ್‌ಫಾರ್ಮೆನ್ಸ್ ಡಾಕ್ಯುಮೆಂಟ್ ಕೊಟ್ಟಿದ್ದಾರೆಯೇ? ಇಲ್ಲ. ನಾವು ರಾಜ್ಯದ ಉದ್ದಗಲಕ್ಕೆ ಪ್ರವಾಸ ಮಾಡಿ ಹಿಂದಿನ ವರ್ಷದ ರಾಜ್ಯಪಾಲರ ಭಾಷಣದ ಅನುಷ್ಠಾನ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ನಮ್ಮದೇ ಆದ ರೀತಿಯಲ್ಲಿ ಅಳೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಮುಂದೆ ಆ ವಿಚಾರವನ್ನು ಹೇಳುತ್ತೇನೆ. ಮೊದಲಿಗೆ ಈ ರಾಜ್ಯದಲ್ಲಿ ಒಂದು ಆಡಳಿತ ವ್ಯವಸ್ಥೆ ಇದೆಯೆ, ಅದು ಏನಾದರೂ ಇದ್ದರೆ ಅದಕ್ಕೆ ಯಾವುದಾದರೂ ಸರ್ಕಾರದ ಮಾರ್ಗದರ್ಶನ, ಮಾರ್ಗಸೂಚಿಗಳು ಇವೆಯೇ? ಹಾಗೆ ಮಾರ್ಗಸೂಚಿಗಳು ಇದ್ದರೆ ಎಂತರ ಮಾರ್ಗಸೂಚಿಗಳನ್ನು ಇವರು ಕೊಟ್ಟಿದ್ದಾರೆಂಬುದನ್ನು ನೋಡಬೇಕು. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಪದೇ ಪದೇ ಆಡಳಿತದ ಬಗ್ಗೆ ಮುತ್ತಿನಂತ ನಾಲ್ಕು ಮಾತುಗಳನ್ನು ಆಡಿದ್ದರು. ಹಿಂದಿನ ರಾಜ್ಯಪಾಲರ ಭಾಷಣದಲ್ಲಿ ಅಂದರೆ ಮಾರ್ಚ್ 15, 1990ರಲ್ಲಿ ಆಡಳಿತ ತೀರಾ ಕೆಳಕ್ಕೆ ಕುಸಿದು ಹೋಗಿದೆ ಹಿಂದಿನ ಸರ್ಕಾರದ ಅಪರಾಧದಿಂದ ಎಂದು ಹೇಳಿ ಅದನ್ನು ಸರಿಪಡಿಸುವುದಕ್ಕೆ ಅವರ ಭಾಷಣದ ಪುಟ 3 ಪ್ಯಾರಾ 8 ರಲ್ಲಿ ಹೀಗೆ ಹೇಳುತ್ತಾರೆ.

"ಆಡಳಿತದ ವಿವಿಧ ಕ್ಷೇತ್ರಗಳಲ್ಲಿ ಸರ್ಕಾರದ ಕಾರ್ಯಗಳು ದಕ್ಷ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಲು ದಕ್ಷತಾ ಪರಿಶೋಧನಾ ಮತ್ತು ಜಾಗೃತ ಮಂಡಲಿಯನ್ನು ರಚಿಸುವುದು"

ಇದು ಏನಾದರೂ ಆಯಿತೆ? ದಕ್ಷತಾ ಪರಿಶೋಧನೆ ಆಯಿತೆ? ಅದಕ್ಕೆ ಜಾಗೃತ ಮಂಡಲಿಯ ರಚನೆ ಆಯಿತೆ? ಮುಖ್ಯ ಮಂತ್ರಿಗಳ ಬದಲಾವಣೆ ಆಯಿತು ಅಂದಕೂಡಲೇ ಈ ಸರ್ಕಾರ ಬದಲಾವಣೆ ಆಯಿತು ಎಂದು ತಿಳಿದುಕೊಳ್ಳೋಣವೆ? ಮುಖ್ಯ ಮಂತ್ರಿಗಳ ಮೇಲೆ ಸರ್ಕಾರ ಅವಲಂಬಿಸಿದೆಯೇ ಅಥವಾ ಆಳುವ ಪಕ್ಷದ ಮೇಲೆ ಅವಲಂಬಿಸಿದೆಯೇ? ಪಕ್ಷದ ಸರ್ಕಾರವಾದರೆ ಅಂದು ಕೊಟ್ಟ ಮಾತಿನಂತೆ ನಡೆದುಕೊಂಡಿದ್ದೀರಾ? ಪರಿಶೋಧನೆ ಮತ್ತು ಜಾಗೃತ ಮಂಡಲಿ ಅಸ್ತಿತ್ವಕ್ಕೆ ಬರಲಿಲ್ಲ. ಮಾನ್ಯ ರಾಜ್ಯಪಾಲರ ಎರಡನೆಯ ಮಾತು ಅಂದರೆ, 'ಭ್ರಷ್ಟಾಚಾರ, ಅಲಕ್ಷ್ಯ, ಕರ್ತವ್ಯಲೋಪ, ಅದಕ್ಷತೆ ಮತ್ತು ದುಂಡು ವೆಚ್ಚ ಹಾಗೂ ಹೊಣೆಗಾರಿಗೆ' ಹೀಗೆ ಕನ್ನಡದ ಶಬ್ದ ಕೋಶದಲ್ಲಿ ಇರತಕ್ಕ ಎಲ್ಲಾ ಶಬ್ದಗಳನ್ನು ಬಳಸಿ ಇವುಗಳನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಆ ಮಂಡಲಿಗೆ ಒಪ್ಪಿಸುವುದು.

3.15 ಪಿ.ಎಂ.

ಹಿರಿಯರಾದ ಶ್ರೀ ರಾಜಶೇಖರ ಮೂರ್ತಿಯವರು ಇಲ್ಲಿ ಕುಳಿತಿದ್ದಾರೆ.ನಾನು ಅವರನ್ನೂ ಪ್ರಸ್ತಾಪ ಮಾಡುತ್ತೇನೆ. ಅವರು ಇವತ್ತು ಮಂತ್ರಿಗಳು ಅಲ್ಲದೆ ಇರಬಹುದು. ಆದರೆ ನಿಮ್ಮ ಮಂತ್ರಿ ಮಂಡಲ ಘೋಷಣೆ ಮಾಡಿದ ಈ ಒಂದು ಆಡಳಿತ ವ್ಯವಸ್ಥೆ ಏನಾಯಿತು? ಇದಕ್ಕೇನಾದರೂ ಮಾನ್ಯತೆ ಬಂತೋ? ಏತಕ್ಕೆ ಹೇಳುತ್ತೀರಿ? ಶಾಸನ ಸಭೆಯ ದುರುಪಯೋಗ ಏತಕ್ಕೆ ಮಾಡುತ್ತೀರಿ? ನಾಲ್ಕೂವರೆ ಕೋಟಿ ಕನ್ನಡಿಗರನ್ನು ಪ್ರತಿನಿಧಿಸುವ ಈ ಶಾಸನ ಸಭೆಯ ದುರ್ಬಳತೆ ಏತಕ್ಕಾಗುತ್ತದೆ? ಮೂರನೇ ಮಾತು. ಆಡಳಿತವನ್ನು ಹೆಚ್ಚು ದಕ್ಷತೆ ಹೊಣೆಗಾರಿಕೆ ಮತ್ತು ಸ್ಪಂದನೀಯವಾಗಿ.. ಕನ್ನಡ ಶಬ್ದಕೋಶದಲ್ಲಿ ಇನ್ನು ಯಾವ ಪದವೂ ಉಳಿಯಲಿಲ್ಲ, ಹೆಚ್ಚು ದಕ್ಷತೆ ಹೊಣೆಗಾರಿಕೆ, ಸ್ಪಂದನೀಯ, ಸೌಜನ್ಯಯುತವಾದ ಯಂತ್ರವನ್ನಾಗಿ ಮಾಡುವ ಉದ್ದೇಶದಿಂದ ಕಾರ್ಯವಿಧಾನವನ್ನು ಮರು ವಿನ್ಯಾಸಗೊಳಿಸಲು ತಜ್ಞರ ಸಮಿತಿಯನ್ನು ರಚಿಸುವುದು. ಇದು ಏನಾದರೂ ಆದವೋ? ಇದಾದಮೇಲೆ ಬದಲಾದಂಥ ಮಂತ್ರಿಗಳು ಮುಖ್ಯಮಂತ್ರಿಗಳು ಎಲ್ಲಾ ಕಡೆ ಹೋದಾಗ ಆಡಳಿತ ಯಂತ್ರದ ಬಗ್ಗೆ ಇದಕ್ಕಿಂತಲೂ ತೀಕ್ಷ್ಣವಾದ ಭಾಷೆಯನ್ನು ಬಳಸಿದ್ದಾರೆ. ಅವೆಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ, ಕಡೆಗೆ ಆಡಳಿತ ಯಂತ್ರವನ್ನು ಚುರುಕೊಗೊಳಿಸಲು ಕಳೆದ ವರ್ಷದ ಭಾಷಣ ಅದು. ಪಂಚಸೂತ್ರವನ್ನು ಘೋಷಿಸಿದ್ದಾರೆ. ಜನತೆಯ ಆಶೋತ್ತರಗಳಿಗೆ ಸ್ಪಂದಿಸುವಂತೆ ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ? ಪಂಚಸೂತ್ರ ಕಾಗದದಲ್ಲೇ ಉಳಿಯಿತು. ಈ ಸೂತ್ರಕ್ಕೆ ಸೂತ್ರಧಾರರು ಯಾರು? ಯಾರಾದರೂ ಸೂತ್ರಧಾರರ ಇದ್ದಾರೋ? ಹಾಗಿದ್ದರೆ ಈ ಪಂಚಸೂತ್ರದ ಬಗ್ಗೆ ಮುಂದಿನ ವರ್ಷ ಮತ್ತೆ ಚರ್ಚೆ ಮಾಡುವುದೆ? ಕಳೆದ ವರ್ಷದ್ದು ಈಗ ಚರ್ಚೆ ಮಾಡುತ್ತಿದ್ದೇವೆ. ಈ ವರ್ಷದ ಭಾಷಣದ ಬಗ್ಗೆ ಮುಂದಿನ ವರ್ಷ ವಿಚಾರ ಮಾಡುತ್ತೀರಾ? ಏನಾಯಿತು ಆಡಳಿತ? ಈ ಆಡಳಿತ ಯಂತ್ರಕ್ಕೆ ಯಾರಾದರೂ ಎಣ್ಣೆ ಹಾಕುವ ಪ್ರಯತ್ನ ಮಾಡಿದ್ದಾರೋ? ಏನಾಗಿದೆ ಆಡಳಿತ ಯಂತ್ರ? ಸ್ವಲ್ಪ ಪರಿಶೀಲನೆ ಮಾಡೋಣ. ಮಾನ್ಯ ಉಪಾಧ್ಯಕ್ಷಿಣಿಯವರೆ, ಇಷ್ಟೆಲ್ಲಾ ಭಾಷೆಯನ್ನು ಬಳಸಿದ ಮೇಲೆ ಆಡಳಿದ ಯಂತ್ರದ ಸ್ಥಿತಿ ಏನಾಗಿದೆ? ಇದು ನೋಡಬೇಕು? ಡಿಸೆಂಬರ್ 13ನೇ ತಾರೀಖು ನಾವೆಲ್ಲರೂ ಸೇರಿ ಈ ರಾಜ್ಯದ 20-25 ಲಕ್ಷ

ಜನತೆ ತಲೆತಲಾಂತರಗಳವರೆಗೆ ನೋವು ದುಃಖವನ್ನು ಅನುಭವಿಸಬೇಕಾಗುತ್ತದೆ ಎಂಬ ದೃಷ್ಟಿಯಿಂದ ಗಡಿ ವಿವಾದ ಜಲ ವಿವಾದ ಇಂಥ ಪ್ರಶ್ನೆಗಳನ್ನು ನಾವು ರಾಜಕೀಯ ಪ್ರಶ್ನೆಗಳನ್ನಾಗಿ ಮಾಡುವುದು ಬೇಡ ಎಂದು ಬೆಂಬಲವನ್ನು ಕೊಟ್ಟು ಎಲ್ಲರೂ ಒಟ್ಟಿಗೆ ಸೇರಿ ಬಂದ್‌ಗೆ ಕರೆ ಕೊಟ್ಟೆವು. ಆಮೇಲೆ ನಡೆದ ಪ್ರಸಂಗ ಏನು? ಕರ್ನಾಟಕ ರಾಜ್ಯದಲ್ಲೆಲ್ಲಾ ಶಾಂತಿಯುತವಾಗಿ ಆಗುತ್ತದೆ.

ಆದರೆ, ಬೆಂಗಳೂರು ನಗರದಲ್ಲಿ ದಾರುಣವಾದ ಹತ್ಯೆಕನ್ನಡಿಗರ ಕೊಲೆ. ಆಡಳಿತ ಯಂತ್ರ ಏನಾಗಿದೆ? ಬೀಗ ಹಾಕಿಕೊಂಡು ಬಂದ್ ಮಾಡಿಕೊಂಡು ಹೋದ ಜನರು ಅಲ್ಲಿ ಕೆಲಸ ಮಾಡುತ್ತಾ ಇರತಕ್ಕ ನೌಕರರು ಮನೆಗೆ ಹೋದ ಮೇಲೆ ರಕ್ಷಣೆ ಇಲ್ಲದೇ ಇರತಕ್ಕ ಶಾಲೆ ನಡೆಸತಕ್ಕ ಶಾಲೆಗಳನ್ನು ಒಡೆಯತಕ್ಕದ್ದು ಮತ್ತು ಬಾಗಿಲು ಮುಚ್ಚಿದಂಥ ಕೈಗಾರಿಕೆಗಳನ್ನು ಬಾಗಿಲು ಬಿಚ್ಚಿ ಸುಟ್ಟು ಹಾಕತಕ್ಕದ್ದು ಆಗಿದೆ. ಎಲ್ಲಿ ಹೋಗಿತ್ತು ಆಡಳಿತ ಯಂತ್ರ? ಆಡಳಿತ ಯಂತ್ರ ಏನಾಗಿತ್ತು? ಸಂಪೂರ್ಣ ಕುಸಿತ, ನಿರ್ಲಕ್ಷ್ಯ. ಮೈಸೂರು ಜಿಲ್ಲೆಯೊಳಗೆ ನಾವು ಇತ್ತೀಚೆಗೆ ನಡೆದ ಕಾವೇರಿ ಗಲಭೆಗಳಲ್ಲಿ ಹೋಗಿದ್ದೆವು. ಆಡಳಿತ ಯಂತ್ರ ಇದೆಯೆ? ಯಾರಾದರೂ ಪ್ರಶ್ನೆ ಮಾಡಿದರೆ ನಾವು ಅನೇಕ ಕಡೆ ಹೋದಾಗ "ಏನೂ ಬೇಡ ಸ್ವಾಮಿ, ಒಬ್ಬ ಪೋಲೀಸರು ಬಂದು ಹೋಗಿದ್ದರೆ ಸಾಕಾಗಿತ್ತು' ಎಂದು ಹೇಳಿದರು. ಆದರೆ ನಾವು ಇದನ್ನು ಹೇಳುವುದಕ್ಕೆ ಹೋಗಲಿಲ್ಲ. ಆಡಳಿತದ ಕುಸಿತಕ್ಕೆ ಪ್ರಸ್ತಾಪ ಮಾಡಲಿಲ್ಲ. ಕಾರಣ ಏನು? ನಮ್ಮ ರಾಜ್ಯಕ್ಕೆ ಧಕ್ಕೆಯಾಗುತ್ತದೆ ಎಂದು ಮುಚ್ಚಿಟ್ಟುಕೊಂಡಿದ್ದೆವು. ಅದರಲ್ಲಿ ನಡೆದ ತಾಂಡವ ನೃತ್ಯ ಯಾವ ರಾಜ್ಯಕ್ಕೆ ಯಾವ ಆಡಳಿತಕ್ಕೆ ಒಳ್ಳೆಯ ಹೆಸರು ತರುತ್ತದೆ? ನಾನು ಈ ಪ್ರಶ್ನೆಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, 10-11-1991ರಂದು ರಾಜ್ಯದ ಪ್ರತಿಷ್ಠಿತ ಒಬ್ಬ ಅರಣ್ಯ ಅಧಿಕಾರಿಯ ತಲೆಯನ್ನು ಹಗಲು ಹೊತ್ತಿನಲ್ಲೇ ಕತ್ತರಿಸಿದರು. ರುಂಡ ಒಂದು ಕಡೆ, ಮುಂಡ ಒಂದು ಕಡೆ. ಆಮೇಲೆ ರಾಷ್ಟ್ರಪತಿಯ ಬಹುಮಾನ ಕೊಡಿಸಿದಿರಿ. ಹೆಂಡತಿಗೆ ಗಂಡನನ್ನು ಒದಗಿಸಿದೆವೋ? ತಂದೆಗೆ ಮಗನನ್ನು ಒದಗಿಸಿದೆವೋ? ಮಕ್ಕಳಿಗೆ ತಂದೆ ಒದಗಿಸಿದೆವೋ? ಕನಿಷ್ಟ ಪಕ್ಷ ಶ್ರೀನಿವಾಸ್‌ರವರ ಮುಂಡಕ್ಕೆ ರುಂಡ ಕೊಟ್ಟಿದ್ದೇವೆಯೋ? ಆಡಳಿತ ಯಂತ್ರಕ್ಕೆ ಏನಾಗಿದೆ? ಶ್ರೀನಿವಾಸನ್‌ರವರ ಕೊಲೆಯಾಯಿತು. ಹೆಗ್ಗಡದೇವನ ಕೋಟೆಯಲ್ಲಿ ಜಾತಿ ವೈಷಮ್ಯದ ದಳ್ಳುರಿ.7 ಜನರು ಬೆಳಿಗ್ಗೆ ಐದೂವರೆ- ಆರು ಗಂಟೆ ಸಮಯದಲ್ಲಿ ಕೊಲೆಯಾದರು. ಆಡಳಿತ ಯಂತ್ರಕ್ಕೆ ಏನಾಗಿದೆ? ದಡದ ಹಳ್ಳಿಯಲ್ಲಿ ಹಸಿವಿನಿಂದ ಮಕ್ಕಳು ಸತ್ತವು. ಪ್ರತಿ ಸಾಮ್ರಾಜ್ಯದಲ್ಲೂ ಇದು ನಡೆಯುವುದಿಲ್ಲ. ಬಹುಶಃ ನಾವು ಇಂತಹ ಪ್ರಸಂಗವನ್ನು ಪ್ರಸ್ತಾಪ ಮಾಡಬೇಕಾದರೆ ಅಂತರರಾಷ್ಟ್ರೀಯ ವೇದಿಕೆಗೆ ಹೋಗಬೇಕಾಗಿತ್ತು. ಹ್ಯೂಮನ್‌ರೈಟ್ಸ್. ಮಕ್ಕಳು ಸತ್ತವು. ನಿನ್ನೆ ಪತ್ರಿಕೆ ನೋಡಿದೆ ಅದೇ ದಡದಹಳ್ಳಿಯಲ್ಲಿ ಕುಡಿಯುವುದಕ್ಕೆ ನೀರು ಇಲ್ಲದೇ ಸತ್ತಿದ್ದಾರೆ. ಒಂದು ಪತ್ರಿಕೆ ಪ್ರಸಿದ್ಧಿ ಮಾಡುತ್ತದೆ. ಬಡಬಗ್ಗರ ತುತ್ತಿನ ಚೀಲ ಎನ್ನುವ ವಿಷಯ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ನವೆಂಬರ್ 9ರ ಪತ್ರಿಕೆಯಲ್ಲಿ ಬಂದಿದೆ. ಹೆಗ್ಗಡದೇವನಕೋಟೆ ತಾಲ್ಲೂಕು ದಡದಹಳ್ಳಿ ಗಿರಿಜನ ಕಾಲೋನಿಯಲ್ಲಿ ಸಂಭವಿಸಿದ 8ಗಿರಿಜನ ಮಕ್ಕಳ ಸಾವು. ಈ ಸಾವಿಗೆ ನಾವೆಲ್ಲರೂ ನಾಚಿಕೆಯಿಂದ ತಲೆತಗ್ಗಿಸಬೇಕು. ಜನಪ್ರತಿನಿಧಿಗಳಾದ ನಾವು ಏಕೆ ಶಾಸನಸಭೆಗೆ ಬರಬೇಕು? ನಮಗೆ ಶಾಸನಸಭೆ ಏಕೆ ಬೇಕಾಗುತ್ತದೆ? ಯಾರ ಸಲುವಾಗಿ ಶಾಸನಸಭೆ ಬೇಕು. ಮಕ್ಕಳು ಹಸಿವಿನಿಂದ

ಸಾಯಬೇಕಾದರೆ ನಾವು ತಲೆತಗ್ಗಿಸಬೇಕು. ನಾನು ಇದರ ವಿವರಕ್ಕೆ ಹೋಗುವುದಿಲ್ಲ. ಇದಕ್ಕೆ ಕಾರಣರು ಯಾರು? ಈ ಸಾವಿಗೆ ಹಸಿವೇ ಖಚಿತ ಕಾರಣ ಎಂದು ನಿರ್ವಿವಾದವಾದ ಮಾತು. ನಾನು ಸರ್ಕಾರಿ ಅಧಿಕಾರಿ 5.11.91 ರಲ್ಲಿ ಕೊಟ್ಟ ವರದಿಯನ್ನು ಓದುತ್ತೇನೆ. ಹೆಗ್ಗಡದೇವನ ಕೋಟೆ, ಸರಗೂರು ಹೋಬಳಿ, ದಡದಹಳ್ಳಿ ಗಿರಿಜನ ಕಾಲೋನಿಯಲ್ಲಿ 9 ಜನರು ಹಸಿವಿನಿಂದ ಮೃತಪಟ್ಟಿರುವ ವರದಿ. ಇದು ನಿಮ್ಮ ಅಧಿಕಾರಿಯೇ ಕೊಟ್ಟಿದ್ದು. ಇದು ಹಸಿವಿನಿಂದ ಸತ್ತಿದ್ದು ಅಲ್ಲ ಎಂದು ಪದೇ ಪದೇ ಹೇಳುತ್ತಿದ್ದೀರಿ. ಇದಕ್ಕಿಂತ ನಾಚಿಕೆಗೇಡಿನ ಪ್ರಶ್ನೆ ಇನ್ನೊಂದಿಲ್ಲ. ಇದರ ವಿವರಕ್ಕೆ ನಾನು ಹೋಗುವುದಿಲ್ಲ. ಸಮಯ ಬಂದಾಗ ವಿವರವಾಗಿ ನಾನು ಚರ್ಚೆ ಮಾಡುತ್ತೇನೆ. ಅವರು ತಮ್ಮ ವರದಿಯಲ್ಲಿ ಹೇಳುತ್ತಾರೆ.

"ಕಾಡಿನಲ್ಲಿ ಗೆಡ್ಡೆ ಗೆಣಸು ಕೀಳಲು ಅರಣ್ಯ ಇಲಾಖೆಯವರು ಬಿಡುವುದಿಲ್ಲ. ಇದರಿಂದ ಅವರ ಜೀವನೋಪಾಯಕ್ಕೆ ಕಷ್ಟವಾಗಿದೆ ಎಂದು ತಿಳಿಸಿ, ತಮ್ಮ ಮಕ್ಕಳನ್ನು ಸಲಹುವುದಕ್ಕೆ ಸಹ ಕಷ್ಟವಾಗಿದೆ, ತಾವು ಇಲ್ಲದ ಸಮಯದಲ್ಲಿ ಮಕ್ಕಳು ಹಸಿವು ತಾಳಲಾರದೆ ಆ ಷೆಲ್‌ನಲ್ಲಿ ಸಿಕ್ಕಿದ ಗಿಡದ ತೊಪ್ಪಲುಗಳನ್ನು ತಿಂದು ಮೃತಪಟ್ಟಿವೆ."

ಎಂತಹ ಧಾರುಣ ಪ್ರಸಂಗ?

ಶ್ರೀ ಬಿ. ಶಿವಣ್ಣ : ತಾವು ಏನು ವಿಷಯ ಪ್ರಸ್ತಾಪ ಮಾಡುತ್ತಿದ್ದೀರಿ ಅದು ನಮ್ಮ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟಿದ್ದುದು. ಅದರಲ್ಲಿ ಹಸಿವಿನಿಂದ ಸತ್ತಿಲ್ಲ. ಅದಕ್ಕೆ ಬೇರೆ ಕಾರಣ ಇದೆ. ಅದನ್ನು ನಾನು ಮುಖ್ಯಮಂತ್ರಿಗಳಿಗೆ ತಿಳಿಸುತ್ತೇನೆ. ಅವರು ಉತ್ತರ ಕೊಡುವಾಗ ಅದನ್ನು ಹೇಳುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ದಯಮಾಡಿ ತಾವು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ನಿಮ್ಮ ದೃಷ್ಟಿಯಿಂದಲೇ ಹೇಳುತ್ತಿದ್ದೇನೆ. ನಿಮ್ಮ ಅಧಿಕಾರಿಗಳು ಕೊಟ್ಟ ವರದಿ ಇದೆ. ಅದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಆಡಳಿತದ ಬಗ್ಗೆ ಹತೋಟಿ ಇದೆಯೇ ನಿಮಗೆ? ಹಾಗೆ ಇದ್ದಿದ್ದರೆ ಈ ಪ್ರಕರಣ ಆಗುವುದಕ್ಕೆ ಸಾಧ್ಯವೇ? ನಾವು ಅಲ್ಲಿಗೆ ಹೋಗಿ ಬಂದಿದ್ದೇವೆ. ನೀವು ಹೋಗಿದ್ದೀರೋ ಇಲ್ಲವೋ ಗೊತ್ತಿಲ್ಲ. ನಾವು ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ಮಾತನಾಡಿದ್ದೇವೆ. ಇದನ್ನು ನಾನು ವಿಸ್ತಾರವಾಗಿ ಪ್ರಸ್ತಾಪ ಮಾಡುತ್ತಿಲ್ಲ. ನಿಮ್ಮ ಇಲಾಖೆ ಮೇಲೆ ಬೇಡಿಕೆ ಬಂದಾಗ ನಾನು ಪರಿಪೂರ್ಣವಾಗಿ ಓದುತ್ತೇನೆ. "ಈ ಗಿರಿಜನರ ಕಾಲೋನಿ ಬ್ಯಾಡಹಳ್ಳಿ ಗ್ರಾಮದಿಂದ 2 ಕಿ.ಮೀ. ಅಂತರದಲ್ಲಿ ಇದೆ. ಗಿರಿಜನರ ಹಾಡಿಗೆ ಒಂದು ಬೋರ್ವೆಲ್ ವ್ಯವಸ್ಥೆ ಇದೆ." ಅದು ಬಿಟ್ಟರೆ ಬೇರೆ ವ್ಯವಸ್ಥೆ ಇಲ್ಲ. ವಿದ್ಯುತ್ ವ್ಯವಸ್ಥೆ ಇಲ್ಲ, ರಸ್ತೆ ಇಲ್ಲ, ವೈದ್ಯಕೀಯ ವ್ಯವಸ್ಥೆ ಇಲ್ಲ. ಕೇಂದ್ರ ಸರ್ಕಾರದ ಸ್ಪೆಷಲ್ ಪ್ರೋಗ್ರಾಮ್ ಪ್ರಕಾರ ಕೊಟ್ಟ ವೈದ್ಯರು ಅಲ್ಲಿಗೆ ಹೋಗುವುದಿಲ್ಲ, ಇದೆಲ್ಲಾ ಆಯಿತು. ಸ್ವಾಮಿ, ಇತ್ತೀಚೆಗೆ ನಿನ್ನೆ ಮೊನ್ನೆಯ ಪತ್ರಿಕೆಯಲ್ಲಿ ನಾನು ನೋಡಿದ" ಬಾಯಾರಿಕೆ ತಾಳದೇ ಯುವತಿ ಸಾವು".

ಹೆಗ್ಗಡದೇವನಕೋಟೆ ಬಳಿ ನಡೆದ ಘಟನೆ. ಬಾಯಾರಿಕೆ ತಾಳಲಾರದೆ ಸಾವು ಎಂದು ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ದಿನಾಂಕ 24-2-92ರಂದು ಬಂದಿದೆ. ನಿನ್ನೆ ಅಲ್ಲ ಮೊನ್ನೆ. ದಯಮಾಡಿ ಕೇಳಿ ನಾನು ಹೇಳುತ್ತೇನೆ. ಹೆಗ್ಗಡದೇವನಕೋಟೆ ದಡದಹಳ್ಳಿ ಜೇನುಕುರುಬರ ಹಾಡಿಯಲ್ಲಿ ಇತ್ತೀಚೆಗೆ 9 ಮಂದಿ ಹಸಿವಿನಿಂದ ಸಾವು

ಎಂಬುದು ಹಸಿರಾಗಿರುವಾಗಲೇ ಇದೇ ತಾಲ್ಲೂಕಿನ ಅಣೆಗಟ್ಟೆಹಾಡಿಯಲ್ಲಿ ಪೌಷ್ಟಿಕಾಂಶದ ಕೊರತೆಯಿಂದ ಹಾಗೂ ಬಾಯಾರಿಕೆಯಿಂದ ಜೇನುಕುರುಬರ ಯುವತಿ ಸತ್ತಿರುವ ದುರ್ಘಟನೆ ಬೆಳಕಿಗೆ ಬಂದಿದೆ. ಯಾವ ಸ್ಥಿತಿಗೆ ಹೋಗಿದೆ ನಮ್ಮ ಆಡಳಿತ? ನಮ್ಮ ಅಧಿಕಾರಿಗಳಿಗೆ ಏನಾಗಿದೆ? ಏತಕ್ಕೆ ಹೀಗಾಗಿದ್ದಾರೆ? ವಿಚಾರಿಸುವವರು ಯಾರು ಇಲ್ಲವೆ? ಕೊನೆಯ ಉಸಿರು ಎಳೆದ ಯುವತಿಯ ಹೆಸರು ಕಾಳಮ್ಮ ಆ ಯುವತಿಗೆ 18 ವರ್ಷ. ಸುಮಾರು 15 ದಿವಸಗಳ ಹಿಂದೆ ಮೃತಪಟ್ಟಿದ್ದಾಳೆಂದು ಗೊತ್ತಾಗಿದೆ. ಆಗಲೂ ಪತ್ರಿಕೆಯಲ್ಲಿ ವರದಿ ಬಂದಾಗ ಪಸಿಪಿನಿಂದ ಸತ್ತರು ಅಂದಾಗ ದೊಡ್ಡ ದಾಂಧಲೆ ಮಾಡಿದರು. ಸರ್ಕಾರದವರು ಹೇಳಿಕೆಯ ಮೇಲೆ ಹೇಳಿಕೆ ಕೊಟ್ಟು ಜನ ಅಲ್ಲಿಗೆ ದೌಡಾಯಿಸಿದರು. ಮತ್ತೆ ಈಗ ಅಲ್ಲಿ ಹೆಣ್ಣುಮಗಳು ಸತ್ತಿದ್ದಾಳೆ. ಆ ಹಾಡಿಯನ್ನೇ ಕೊಂದುಬಿಡಿ ಒಟ್ಟಿಗೆ. ಏನಾಗಿದೆ ಆಡಳಿತಕ್ಕೆ? ಇದೇ ತಾಲ್ಲೂಕಿನಲ್ಲಿ ಹಂಟೇಪುರ ಇದೆ. ಇದೇ ತಾಲ್ಲೂಕಿನಲ್ಲಿ ಸರಗೂರು, ಅಲ್ಲಿ 7 ಜನರ ಮೇಲೆ ಹಗಲುಹೊತ್ತಿನಲ್ಲಿ ಅತ್ಯಾಚಾರ. ನಾವು ಅಲ್ಲಿಗೆ ಹೋದರೆ ಸ್ಮಶಾನ ಸದೃಶವಾದ ಜಾಗ. ಗಂಜಿ ಹಾಕುವವರು ಇಲ್ಲ. ಅವರ ಭೀತಿಯಿಂದ ಇವರು ಒಂದು ಕಡೆ ಹೋಗಿದ್ದಾರೆ, ಇವರ ಭೀತಿಯಿಂದ ಅವರು ಒಂದು ಕಡೆ ಹೋಗಿದ್ದಾರೆ. ಏನಾಗಿದೆ? ಯಾರೂ ಜವಾಬ್ದಾರರು ಇಲ್ಲವೆ? ಗುಲ್ಬರ್ಗದಲ್ಲಿ ಇತ್ತೀಚೆಗೆ ಗಲಭೆ ನಡೆಯಿತು. ನನ್ನ ಕ್ಷೇತ್ರದಲ್ಲಿ ರಾಣಿ ಎನ್ನತಕ್ಕ ಒಂದು ಸಣ್ಣ ಹಳ್ಳಿ. ಇಡೀ ಗ್ರಾಮವೆಲ್ಲ ಒಂದು ಕಡೆ. ಕಾಂಗ್ರೆಸ್ ಕೃಪಾಪೋಷಿತ ಮಂಡಲಿಯ ಒಬ್ಬನೇ ಒಬ್ಬ ನಾಲ್ಕು ಎಕರೆ ಜಮೀನಿಗೆ, ಅಲ್ಲಿ ಬೇಲಿ ಹಾಕಿಕೊಂಡಿದ್ದಾನೆ. ಭೂ ಹುಣ್ಣಿಮೆ ದಿವಸ ಇಡೀ ಗ್ರಾಮವನ್ನು ಅರೆಸ್ಟ ಮಾಡಿ ತೆಗೆದುಕೊಂಡು ಹೋದರು. ಜಿಲ್ಲಾಧಿಕಾರಿಗಳಿಗೆ ಹೇಳಿದ್ದು ಆಯಿತು. ಪೋಲೀಸ್ ಅಧಿಕಾರಿಗಳಿಗೆ ಹೇಳಿದ್ದು ಆಯಿತು. ಸ್ಥಳೀಯ ಅಧಿಕಾರಿಗಳಿಗೆ ಹೇಳಿದ್ದು ಆಯಿತು. ಇವತ್ತು ಅಲ್ಲಿ ಒಂದು ಮನೆಗೆ ಪೋಲೀಸ್ ಅಧಿಕಾರಿಗಳು ರಕ್ಷಣೆ ಕೊಟ್ಟು ಇಡೀ ಗ್ರಾಮವನ್ನು ಅರೆಸ್ಟ್ ಮಾಡಿದರು. ಅದರ ಬಗ್ಗೆ ವಿವರವಾಗಿ ಬೇರೆ ಕಡೆ ಹೇಳುತ್ತೇನೆ. ನನಗೆ ಯೋಗ್ಯತೆ ಇದ್ದರೆ ಆ ಜನರನ್ನು ರಕ್ಷಣೆ ಮಾಡುತ್ತೇನೆ. ನಿಮ್ಮಿಂದ ನಿರೀಕ್ಷೆ ಮಾಡುವುದಿಲ್ಲ. ಪೋಲೀಸ್ ಠಾಣೆಗಳು ಏನಾಗಿವೆ. ನಾನು ಹಿಂದೆ ಪೋಲೀಸ್ ಠಾಣೆಗಳು ಕಾಂಗ್ರೆಸ್ ಕಛೇರಿಗಳಾಗಿವೆಯೆಂದು ಹೇಳಿದ್ದೆ. ಇವತ್ತು ಕಾಂಗ್ರೆಸ್ ಕಛೇರಿಯಲ್ಲ. ಅಲ್ಲಿರತಕ್ಕ ಸ್ಥಳೀಯ ಶಾಸಕರು ಮುಖ್ಯಮಂತ್ರಿಗಳಿಗೆ ತೀರಾ ಹತ್ತಿರವಿದ್ದಾರೆಂದು ಗೊತ್ತಾದರೆ ಸಾಕು. ನಿಮ್ಮ ಗಮನಕ್ಕೆ ಬರುತ್ತದೋ ಇಲ್ಲವೋ ನಡೆಯತಕ್ಕ ಈ ಪ್ರಕರಣಗಳನ್ನು ದಯಮಾಡಿ ನಿಲ್ಲಿಸಿ. ಬಟ್ಟೆ ಮಲ್ಲಪ್ಪ ಸರ್ಕಲ್, ಠಾಣೆಯಲ್ಲಿ ಇದು ನನ್ನ ಕ್ಷೇತ್ರದಲ್ಲಿ ನಡೆದಿದೆ. ಬಟ್ಟೆ ಮಲ್ಲಪ್ಪ ಸರ್ಕಲ್ ನಿಮ್ಮ ಹೊಸ ನಗರ ತಾಲ್ಲೂಕಿನಲ್ಲಿ ಒಬ್ಬನೇ ಒಬ್ಬ ಶ್ರೀಮಂತ ಸರ್ಕಾರ ಕಟ್ಟಿಸಿದಂತಹ ಪಾರೆಸ್ಟ್ ಇಲಾಖೆಯವರು ಕಟ್ಟಿದಂತಹ ಒಂದು ಕಟ್ಟಡವನ್ನು ಕೆಡವಿ - ಆ ಕಟ್ಟಡದ ಕಲ್ಲುಗಳನ್ನು ತೆಗೆದುಕೊಂಡು ತೆಂಗಿನ ಸಸಿಗಳನ್ನು ಸುತ್ತಾ ಹಾಕಿ, ಪ್ರೊಟೆಕ್ಷನ್‌ಗೋಸ್ಕರ 20- 25 ಸಾವಿರ ರೂಪಾಯಿ ಖರ್ಚು ಮಾಡಿದ್ದಾನೆ. ಅವನಿಗೆ ಏನೂ ಮಾಡಲಿಲ್ಲ. ಫಾರೆಸ್ಟ್ ಇಲಾಖೆಯವರು. ಪಕ್ಕದಲ್ಲಿ ಒಬ್ಬ ಟೀ ಹೋಟೆಲ್ ಇಟ್ಟುಕೊಂಡಿದ್ದಾನೆ. ಅವನಿಗೆ ದಿನಕ್ಕೆ ವ್ಯಾಪಾರ 15-20 ರೂಪಾಯಿ. ದಿವಸಕ್ಕೆ ಎರಡು ಮೂರು ರೂಪಾಯಿ ಸಂಪಾದನೆ ಅವನ ಹೋಟೆಲ್ ಮನೆಯನ್ನು ಕಿತ್ತು ಬಿಸಾಡಿ ಇವತ್ತು ಅಲ್ಲಿ ಏನೇನು ಉಳಿದಿಲ್ಲ. ಆ ಫೋಟೋಗ್ರಾಫ್ ತಂದುಕೊಡುತ್ತೇನೆ. ಸಮಯ ಬಂದಾಗ ಎಲ್ಲವನ್ನು ಕೊಡುತ್ತೇನೆ. ಜಿಲ್ಲಾಧಿಕಾರಿಗಳಿಗೆ ರಿಕ್ವೆಸ್ಟ್ ಮಾಡಿಕೊಂಡಿದ್ದೇನೆ. ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿ ಈ

ಪ್ರಕಾರ ನಡೆದಿದೆ. ಏನಾಗಿದೆ ನಮ್ಮ ಆಡಳಿತ ಯಂತ್ರಕ್ಕೆ? ಇತ್ತೀಚೆಗೆ ವರ್ತೂರಿನಲ್ಲಿ ಜಮೀನು ಹಗರಣ. ನಿನ್ನೆ ನಡೆದಿರತಕ್ಕ ಪ್ರಕರಣ. ಅಲ್ಲಿ ಜಿಲ್ಲಾ ಜನತಾದಳದ ಅಧ್ಯಕ್ಷರು ಉಪವಾಸ ಕುಳಿತುಕೊಂಡಿದ್ದಾರೆ. ನಾನು ಮತ್ತು ಶ್ರೀಮಾನ್ ಸಿಂಧ್ಯಾರವರು ನಮ್ಮ ಸ್ನೇಹಿತರು ಹೋಗಿ ತಾವು ಉಪವಾಸ ಮಾಡಬೇಡಿ ಇನ್ನು ಸರ್ಕಾರ ಇದೆ, ರಕ್ಷಣೆ ಸಿಗುತ್ತದೆನ್ನುವ ಮಾತನ್ನು ಹೇಳಿದ್ದೇವೆ. ಅವರನ್ನು ಉಪವಾಸದಿಂದ ಎಬ್ಬಿಸಿ ಬಂದಿದ್ದೇವೆ. ಪೂರ್ಣ ಪ್ರಮಾಣದ ದಾಖಲೆಗಳನ್ನು ಒದಗಿಸುತ್ತೇನೆ. ಅಧಿಕಾರಿ ಅಲ್ಲಿಗೆ ಹೋದರು, ಆಶ್ರಯ ಯೋಜನೆಯಲ್ಲಿ ಸೈಟು ಕೊಡಬೇಕು. ಬೇರೆ ಸೈಟು ಇಲ್ಲದಿದ್ದರೆ ಕೊಡಿ.

ಅರ್ಧ ಎಕರೆ, ಒಂದು ಎಕರೆ, ಕೆಲವು ಗುಂಟೆಗಳು ಇವತ್ತು ತಾವು ಯಾರನ್ನಾದರೂ ಕಳಿಸಿ ಹೋಗಿ ನೋಡಿ. ವರ್ತೂರಿನಲ್ಲಿ ಏನಾಗಿದೆ? ನಿನ್ನೆ ಬೆಳೆದ ಮರಗಳನ್ನು, ಎಲ್ಲವನ್ನೂ ಕಿತ್ತು ಬಿಸಾಕಿದ್ದಾರೆ. ಅಲ್ಲಿ ಒಬ್ಬರು ತಹಸೀಲ್ದಾರರು, ಅಲ್ಲೊಬ್ಬರು ಜಿಲ್ಲಾಧಿಕಾರಿಗಳು, ಪೋಲೀಸ್ ಅಧಿಕಾರಿಗಳು. ನಾವು ಎಷ್ಟು ಅಂತ ಫೋನ್ ಮಾಡೋಣ? ಎಷ್ಟು ಸಾರಿ ಹೋಗಿ ಬಂದೆವು ನಾವು? ಒಂದು ಕಡೆ ಸಾಗುವ ಮಾಡಿದವರ ಜಮೀನನ್ನು ತಾವೇ ಮಾಡುತ್ತೇವೆ ಅಂತ ಹೇಳಿ ಅವರು ಒತ್ತುಸಾಗು ಮಾಡಿ ಗಲಾಟೆ ಹಚ್ಚುವುದು, ಇನ್ನೊಂದು ಕಡೆ ಕಾಂಗ್ರೆಸ್‌ನವರು ಅಲ್ಲ ಎನ್ನುವ ಕಾರಣಕ್ಕೋ ಅಥವಾ ಅಲ್ಲಿರತಕ್ಕಂಥ ಸ್ಥಳೀಯ ಶಾಸಕರ ಒತ್ತಡಕ್ಕಾಗಿಯೋ ಕಿತ್ತುಬಿಸಾಕುವುದು. ನಿನ್ನೆಯಲ್ಲ ಮೊನ್ನೆ ರಾತ್ರಿ ಹನ್ನೊಂದೂವರೆ ಗಂಟೆ ಸಮಯದಲ್ಲಿ ನಡೆದಿರತಕ್ಕಂಥ ಘಟನೆ ಇದು. ಜ್ಯೋತಿರೆಡ್ಡಿ ಎನ್ನತಕ್ಕಂಥ ಹೆಣ್ಣುಮಗಳು ಜಿಲ್ಲಾಪರಿಷತ್ತಿನ ಸದಸ್ಯರಾಗಿದ್ದರು. ರಾತ್ರಿ ಹನ್ನೊಂದೂವರೆ ಗಂಟೆಗೆ ಗುಂಡಾಗಳ ಹೋಗಿ ಅವರ ಮನೆಯನ್ನು ಒಡೆದಿದ್ದಾರೆ. ಫೋಟೋಗಳು ಎಲ್ಲಾ ಇವೆ ಇಲ್ಲಿ. ಅವುಗಳನ್ನು ತಮಗೆ ತೋರಿಸುತ್ತೇನೆ, ಸದನದ ಮೂಲಕ ಕಳಿಸಿ ಕೊಡುತ್ತೇನೆ. ನಿಮ್ಮ ಆಡಳಿತ ಯಂತ್ರಕ್ಕೆ ಏನಾಗಿದೆ? ಯಾರಾದರೂ ವಿಚಾರಣೆ ಮಾಡುವವರು ಇದ್ದಾರೋ? ನಾಳೆ ಇದರ ಬಗ್ಗೆ ಬೇರೆಯಾಗಿ ಪ್ರಸ್ತಾಪ ಮಾಡೋಣ. ಆಡಳಿತ ಬಹಳಮಟ್ಟಿಗೆ ಕುಸಿದಿದೆ. ಮುಖ್ಯಮಂತ್ರಿಗಳಿಗೆ ಸಮಯವೇ ಇಲ್ಲ, ಸಮಯ ಕೊಡುವುದಕ್ಕೆ. ಏಕೆಂದರೆ ಅವರ ಕುರ್ಚಿಯನ್ನು ಆ ಕಡೆಯಿಂದ ಭಿನ್ನಮತೀಯರು ಎಳೆಯುತ್ತಿದ್ದಾರೆ. ಇವರು ಅದನ್ನು ಉಳಿಸಿಕೊಳ್ಳುವುದಕ್ಕಾಗಿ ಆಡಳಿತದ ಕಡೆಗೆ ಗಮನ ಕೊಡುತ್ತಿಲ್ಲವೇ ಹೇಗೆ? ಇಷ್ಟೆ ದೊಡ್ಡ ಪ್ರಮಾಣದಲ್ಲಿ 190 ಜನ ಇದ್ದಾರೆ. ಇಷ್ಟು ದೊಡ್ಡ ಪ್ರಮಾಣದ ವ್ಯವಸ್ಥೆಯನ್ನು ಶಾಸನ ಸಭೆಯಲ್ಲಿ ಇಟ್ಟುಕೊಂಡು ಈ ಆಡಳಿತದ ಮೇಲೆ ನಿಯಂತ್ರಣ ಏಕೆ ಹಾಕುತ್ತಿಲ್ಲ? ನನ್ನ ಕೆಲಸ ನಾನು ಮಾಡಿದ್ದೇನೆ. ಇದಕ್ಕೆ ಯಾರಾದರೂ ಉತ್ತರ ಕೊಡುವರು ಇದ್ದಾರೆಯೇಯ ಇಲ್ಲವೆಂದರೆ ಗೋದಾ ಹೈ, ಮೈದಾನ್ ಹೈ...

ಶ್ರೀ ಎಂ. ಮಹಾದೇವ್ : ಸದನದೊಳಗೆ ನಾವು ಎಳೆದಾಡುತ್ತಿದ್ದೇವೆಯೇ? ನಾವೆಲ್ಲ ಒಗ್ಗಟ್ಟಾಗಿದ್ದೇವಲ್ಲ?

ಶ್ರೀ ಡಿ.ಬಿ. ಚಂದ್ರೇಗೌಡ: ಇದು ನಿಮ್ಮ ಊರಿನಲ್ಲಿ ನಡೆಯುವ ಆನೆ ಎಳೆದಾಟ ಅಲ್ಲ.

ಇಲ್ಲಿ ಎಳೆದಾಟ ಬೇರೆ. ಆದ್ದರಿಂದ ಇದು ಒಂದು ಕಾರಣ ಇರಬಹುದು. ಮತ್ತೊಂದು ಕಾರಣ, 365 ದಿವಸವೂ ವರ್ಗಾವರ್ಗಿ, ಏನು ಮಾಡುವುದು, ಕುರ್ಚಿ ಉಳಿಸಿಕೊಳ್ಳಬೇಕಿಲ್ಲ. ಶಾಸಕರು ಅರ್ಜಿ ತಂದರೆ ಮುಖ್ಯ ಮಂತ್ರಿಗಳು ಬರೆಯಲೇಬೇಕು. ಕೆಲವು ಎಕ್ಸಪೆಶನ್ಸ್ ಇರಬಹುದು, ವರ್ಗಾವಣೆಗೆ ಅರ್ಜಿ

ಹೋಗದ ಒಂದು ದಿನವಾದರೂ ಇದ್ದರೆ, ತಾವು ಹೇಳಿದ ಶಿಕ್ಷೆಯನ್ನು ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ಮುಖ್ಯಮಂತ್ರಿಗಳೇ, ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ. ಸರ್ಕಾರಿ ಕಚೇರಿಗಳಲ್ಲಿ ಬಿ.ಟಿ. ಟ್ಯಾಕ್ಸ್ ಕೊಟ್ಟಿದ್ದೀರಾ ಎಂದು ಕೇಳುತ್ತಾರೆ. ಬಿ.ಟಿ.ಟ್ಯಾಕ್ಸ್ ವಂದರೆ ಬಂಗಾರಪ್ಪ ಟ್ಯಾಕ್ಸ್ ಅಂತ. ಇಷ್ಟು ದೂರಕ್ಕೆ ಆಡಳಿತ ಹೋಗಿದೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಹೇಗೆ ಸರಿ ಮಾಡುತ್ತೀರೋ ಮಾಡಿ.

ಶ್ರೀ ಎಸ್. ಬಂಗಾರಪ್ಪ : ಇದೇನು ಹೊಸ ಪದ ಹೇಳಿಕೊಟ್ಟಿದ್ದಾರಲ್ಲ?

ಶ್ರೀ ಡಿ.ಬಿ. ಚಂದ್ರೇಗೌಡ: ಹೇಳಿಕೊಟ್ಟಿದ್ದಲ್ಲ, ಅಲ್ಲಿ ಹೋಗಿರತಕ್ಕಂಥ ಜನ ಹೇಳುವುದನ್ನು ಸದನದ ಮೂಲಕ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಯಾವ ರೀತಿ ಸರಿಪಡಿಸುತ್ತೀರೆಂದು ಹೇಳಿ. ಇದು ಒಂದು ಕಡೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ರಾಜ್ಯದ ಬಹಳ ಪ್ರಾಮುಖ್ಯವಾದ ಸಮಸ್ಯೆಗಳ ಬಗ್ಗೆ...

ಶ್ರೀ ಎಸ್. ಬಂಗಾರಪ್ಪ : ಇದು ಹೆಗಡೆ ಟ್ಯಾಕ್ಸ್ ಎಂದು ಬಂತೋ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ವಿರೋಧ ಪಕ್ಷದ ನಾಯಕರು ಸ್ವಲ್ಪ ಯೀಲ್ಡ್ ಆದರೆ... ಇದು ಬಿ.ಟಿ. ಟ್ಯಾಕ್ಸ್ ಅಂತ ಹೊಸದಾಗಿ ಇಂಟ್ರೋಡ್ಯೂಸ್ ಮಾಡಿದ್ದಾರೋ ಗೊತ್ತಿಲ್ಲ, ಮುಖ್ಯಮಂತ್ರಿಗಳು ಸದನದಲ್ಲಿ ಇದ್ದಾಗ ಸುಮ್ಮನೆ ಇದ್ದರೆ, ಇದು ಏನಾದರೂ ನಿಮ್ಮ ಕಾಲದಲ್ಲಿ ಆಗಿದೆಯೋ ಹೇಗೆ ಎಂದು ಒಂದು ಸ್ಪಷ್ಟೀಕರಣ ನೀಡಿದ್ದರೆ, ನಾವು ಜನತೆಗೆ ಯಾವ್ಯಾವ ಬಾಬಿನಲ್ಲಿ ಬಿ.ಟಿ. ಟ್ಯಾಕ್ಸ್ ಹೇಗೆ ಕೊಡಬೇಕೆನ್ನುವ ಬಗ್ಗೆ ತಿಳುವಳಿಕೆ ಕೊಡುವುದಕ್ಕೆ ಬಹಳ ಅನುಕೂಲವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ಹೆಗಡೆಯವರ ಕಾಲದಲ್ಲೂ ಇದರ ಬಗ್ಗೆ ತಮಗೆ ಪರಿಚಯ ಇರಬೇಕಲ್ಲ?

ಶ್ರೀ ಡಿ.ಬಿ. ಚಂದ್ರೇಗೌಡ: ಈಗ ಹೊಸದಾಗಿ ಜಿಲ್ಲಾ ಅಪೀಲ್ ನ್ಯಾಯಾಲಯ ಮಂಡಳಿಗಳು, ಪುಟ 10ಪ್ಯಾರಾ 16.ಪಂಚಸೂತ್ರ ಆಯಿತು. ಕನ್ನಡ ಶಬ್ದಕೋಶವನ್ನು ಬಳಸಿ 1990ನೇ ಇಸವಿಯಲ್ಲಿ ಹೇಳಿದ್ದು ಆಯಿತು. ಈಗ 1992ರಲ್ಲೂ ಬಳಸಿದ್ದೀರಲ್ಲ?

ಶ್ರೀ ಎಸ್. ಬಂಗಾರಪ್ಪ : ತಮಗೆ ಗೊತ್ತಿದೆ, ಅದು ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದೆ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ: ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಪಾಲಿಸಿ ಡಾಕ್ಯುಮೆಂಟ್ಸ್ ಬಗ್ಗೆ ನಾವು ಹೇಳುವಹಾಗಿಲ್ಲ, ಸಲಹೆ ಕೊಡಬಹುದು. ಆದರೆ, ನೀವು ಏನು ಮಾಡಿದ್ದೀರಿ. ಈ ಅಪೀಲು ನ್ಯಾಯಾಲಯಗಳು, ಇದು ಹೊಸದು. ಈಗ ಅವೆಲ್ಲಾ ಮುಗಿದುಹೋದವು. ಈ ಅಪೀಲು ನ್ಯಾಯಾಲಯಗಳು ಯಾವಾಗ ಜಾರಿಗೆ ಬರುತ್ತವೆ. ತಾವು ಇದನ್ನಾದರೂ ನಿಖರವಾಗಿ ಹೇಳುತ್ತೀರಾ? ಆಡಳಿತ ಸುಧಾರಣೆ ಬದಲು ಅಧಿಕಾರಿಗಳಲ್ಲಿ ಒಂದೇ ರೀತಿಯ ಸಾಮೂಹಿಕ ಭೀತಿ ಉಂಟಾಗಿದೆ. ನಮಗೆ ಎಲ್ಲಿಗೆ ವರ್ಗವಾಗುತ್ತದೆಯೋ, ನಾಳೆ ಮತ್ತೆ, ನಾವು ಇನ್ನೂ ಯಾರ ಹತ್ತಿರ ಹೋಗಬೇಕೋ ಎಂಬ ಭೀತಿ ಇದೆ. ಅವರು ಜನತೆಯ ಕೆಲಸ ಮಾಡುವ ಬದಲು ಶಾಸಕರ, ಮಂತ್ರಿಗಳ ಬಾಗಿಲು ಕಾಯುವ ಕೆಲಸ

ಹಚ್ಚಿದ್ದೀರಿ ಇದನ್ನು ಯಾವಾಗ ನಿಲ್ಲಿಸಿದ್ದೀರಿ. ಒಂದು ಸಾರಿ ನಿಲ್ಲಿಸಿ, ಈ ಸತ್ಯಾಸತ್ಯತೆಗಳನ್ನು ಪರೀಕ್ಷೆ ಮಾಡುವುದಕ್ಕೆ ಬೆಳಿಗ್ಗೆ ಒಂದು ದಿವಸಕ್ಕೆ ಆಟ ಬಿಡಿ. ಎಷ್ಟು ಜನ ಅಧಿಕಾರಿಗಳು ಶಾಸಕರು ಬಾಗಿಲು ಕಾಯ್ದುಕೊಂಡು ಇರುತ್ತಾರೆಂದು ನೋಡಿ. ಒಂದೇ ದಿವಸದಲ್ಲಿ ಇದು ನಿಮ್ಮ ಗಮನಕ್ಕೆ ಬರುತ್ತದೆ. ಆದ್ದರಿಂದ, ಈ ಆಡಳಿತ ಇಷ್ಟೊಂದು ಕೆಳಮಟ್ಟಕ್ಕೆ ಇಳಿದಿರುವಾಗ ಸರಿಪಡಿಸುವಂಥ ಕೆಲಸ ಮೊದಲು ಆಗದಿದ್ದರೆ, ಈ ದೇಶಕ್ಕೆ ಮುಕ್ತಿ ಇಲ್ಲ, ಕರ್ನಾಟಕ ರಾಜ್ಯಕ್ಕೆ ಆಡಳಿತದ ಸಲುವಾಗಿ ಇದ್ದಂಥ ಎಲ್ಲಾ ಗೌರವವೂ ಇವತ್ತು ನೀರು ಪಾಲಯಿತು. ಇದು ಆಡಳಿ ದೃಷ್ಟಿಯಿಂದ. ರಾಜ್ಯದಲ್ಲಿ ಇದ್ದಂಥ ಭೀಕರವಾದ ಬರಗಾಲ.ಬೀದರ್‌ನಲ್ಲಿ ಕುಡಿಯುವುದಕ್ಕೆ ನೀರು ಇಲ್ಲ, ಉಳಿದುದನ್ನು ಬಿಡಿ. ಈ ಭಾಷಣದಲ್ಲಿ ಇದರ ಪ್ರಸ್ತಾಪ ಬರುವುದಿಲ್ಲ, ಎಲ್ಲಿಯಾದರೂ ಚುನಾಯಿತವಾಗಿ ಬಂದ ಸರ್ಕಾರ ಈ ರೀತಿ ಹೇಳದೇ ಇರುತ್ತಾರೆಯೇ? ಇಡೀ ಒಂದು ಜಿಲ್ಲೆಯಲ್ಲಿ ಮತ್ತು ಗುಲ್ಬರ್ಗಾಜಿಲ್ಲೆಯ ಕೆಲವು ಭಾಗದಲ್ಲಿ ಭೀಕರವಾದ ಕ್ಷಾಮ ಇದೆ. ಇವರು ಜನರಲ್ ಆಗಿ ಒಂದು ಮಾತು ಹೇಳಿದ್ದಾರೆ. ನಾವು ಅಷ್ಟು ಖರ್ಚು ಮಾಡಿದ್ದೇವೆ. ಇಷ್ಟು ಖರ್ಚು ಮಾಡಿದ್ದೇವೆ, ನೈಸರ್ಗಿಕ ತೊಂದರೆಗೆ ಇಷ್ಟು ಖರ್ಚುಮಾಡಿದ್ದೇವೆ ಎಂದು.ಆದರೆ ಎಲ್ಲಿ ನೈಸರ್ಗಿಕ ತೊಂದರೆ ಇದೆ, ಇದರ ಪ್ರಸ್ತಾಪ ಆಗದಿರುವುದು ಅತ್ಯಂತ ದೊಡ್ಡ ಲೋಪ. ಈ ಲೋಪ ಇನ್ನು ಮುಂದೆ ಆಗದಹಾಗೆ, ಜವಾಬ್ದಾರಿಯನ್ನು ಹೊತ್ತು ಕೊಳ್ಳುತ್ತೀರೆಂದು ನಾನು ಭಾವನೆ ಮಾಡಿದ್ದೇವೆ. ಮಾನ್ಯ ಉಪಾಧ್ಯಕ್ಷಿಣಿಯರೇ, ಇನ್ನು ಬೆಲೆ ಏರಿಕೆ. ನನಗೆ ಕಾಂಗ್ರೆಸ್ ಪ್ರಣಾಳಿಕೆಯ್ನು ನೋಡಬೇಕೆಂದು ಅನಿಸಿತು. ನಾನೇ ಏನಾದರೂ ತಪ್ಪು ತಿಳಿದುಕೊಂಡಿದ್ದೇನೆಯೋ ಎಂದು, ಅವರ ಪ್ರಣಾಳಿಕೆ ನೋಡಿದೆ. ಅವರ ಪ್ರಣಾಳಿಕೆಯ ಪುಟ 60 ರಲ್ಲಿ ಹೇಳಿದ್ದಾರೆ. ಈ ಪ್ರಣಾಳಿಕೆಯನ್ನು ಯಾರಾದರೂ ಕಾಂಗ್ರೆಸ್ ಸದಸ್ಯರು ಓದದೇ ಇದ್ದರೆ, ಇದನ್ನು ಓದಿ. ಇದು 1991 ಜನರಲ್ ಎಲೆಕ್ಷನ್‌ನಲ್ಲಿ ಕೊಟ್ಟಿರುವಂಥಾದ್ದು. ನಾನು ಇದರ ಹೈಲೈಟ್ಸ್ ಮಾತ್ರ ಹೇಳುತ್ತೇನೆ, ನಾನು ಸುಧೀರ್ಘವಾಗಿ ಹೋಗುವುದಿಲ್ಲ. Ist hundred days, ಏನು First hundred days I quote " Arrest the price rise in essential commodities and in particular roll back prices to the levels obtaining in July. 1990."

ಈಗ ಒಂದು ವರ್ಷ 8 ತಿಂಗಳು ಕಳೆದಿದೆ. Arresting the Prize, rise 1990 ಜುಲೈ ಒಳಗೆ ಹಿಂದಿನ ಸ್ಥಿತಿಗೆ ವಾಪಸ್ ಹೋಗಬೇಕು. ಆದರೆ ಇವತ್ತು ಎಲ್ಲಿಗೆ ಹೋಗಿದ್ದೀರಿ. ನನಗೆ ತಿಳಿದಿರತಕ್ಕಂಥ ಮಾಹಿತಿ ಪ್ರಕಾರ, ನೀವು ಎಷ್ಟು ಬಡವರ ಹೊಟ್ಟೆಮೇಲೆ ಹೊಡೆದಿದ್ದೀರಿ, ಏಕೆ ಈ ಮೋಸ. ಒಂದು ಶತಮಾನಗಳ ಇತಿಹಾಸ ಇರತಕ್ಕಂಥ ಒಂದು ರಾಷ್ಟ್ರೀಯ ಪಕ್ಷ ತನ್ನ ಪ್ರಣಾಳಿಕೆಯನ್ನು ದೇಶದ ಜನರ ಮುಂದೆ ಇಟ್ಟು, ಮೋಸ ಮಾಡಿ ಮತ ಗಳಿಸಿದ್ದೀರಿ. ಅದರಂತೆ ನಡೆಯಬೇಕಲ್ಲ, ಪ್ರಯತ್ನ ಮಾಡಬೇಕಲ್ಲ. ನಾನು, ಸುಮ್ಮನೆ ಒಂದು ಅಂಗಡಿಗೆ ಹೋಗಿ ಕೇಳಿದೆ. ಅಕ್ಕಿ ಬೆಲೆ 9 ರಿಂದ 11 ರೂಪಾಯಿಯವರೆಗೆ ಇದೆ. ಬಾಸುಮತಿ ಅಕ್ಕಿ 45-46, ರೂಪಾಯಿ ಬೇಳೆ 24 ರೂಪಾಯಿ. ಎಣ್ಣೆ 44 ರಿಂದ 48 ರೂಪಾಯಿ, ಅಂತೂ ನರಸಿಂಹಮೂರ್ತಿಯವರ ಆಶೀರ್ವಾದದಿಂದ ಫಾಮೋಲಿನ್ ಎಣ್ಣೆ ಮಾರ್ಕೆಟ್‌ನಲ್ಲಿ ಮಾಯವಾಗಿ ಹೋಯಿತು. ಸೀಮೆಎಣ್ಣೆ ದೊರಕುವುದಿಲ್ಲ. ವಿದ್ಯುಚ್ಛಕ್ತಿ ವಿಚಾರ ಮಾತನಾಡಿದರೆ ಪ್ರಯೋಜನ ಇಲ್ಲ. ಜನ ಕೂಳು ಬೇಯಿಸುವುದು ಹೇಗೆ, ಜನ ಬದುಕುವುದು ಹೇಗೆ? ಈ ಒಂದು ಪ್ರಣಾಳಿಕೆಗೆ

ಅಷ್ಟು ಇಷ್ಟಾದರೂ ಗೌರವ ಇದೆಯೇ? ಈ ಪ್ರಶ್ನೆಗಳಿಗೆ ಉತ್ತರ ಹೇಳುತ್ತಾರೋ, ನನಗೆ ಗೊತ್ತಿಲ್ಲ.ಇದೇ ಪ್ರಣಾಳಿಕೆಯಲ್ಲಿ ಮತ್ತೊಂದು ಮಾತನ್ನು ಆಡಿದ್ದಾರೆ.

"To bring the Village Panchayats and Jawahar Rozgar Yojana, handover primary Health Centre to Panchayat Bodies at Taulka Samiti levels and provide funds directly."

ಪಂಚಾಯತ್ ರಾಜ್‌ಗೆ ಒಂದು ಮಸೂದೆಯನ್ನು ತರತಕ್ಕಂಥ ಮಾತನ್ನೂ ಆಡಿದ್ದಾರೆ. ಪ್ರೈಸಸ್ ಬಗ್ಗೆ ಪ್ರಣಾಳಿಕೆಯಲ್ಲಿ ಎಂಥ ಮಾತನಾಡಿದ್ದಾರೆ ಎಂಬುದನ್ನು ನೋಡಬೇಕು. The National Front made a promise in 1989 that the prices would be brought down within one month; Like so many other promises. This also turned out to be a false promise.

ನಿಮ್ಮದು ಡೆಫಿನೆಟ್, ಡೇಟ್ 100 ಡೇಸ್, 365 ಡೇಸ್, 760 ಡೇಸ್‌ಗೆ ಇಷ್ಟು ಎಂದು. ನಾನು ಅದರ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. Ordinance No. 1 of 1992.

ಅದರಂತೆ ಪಂಚಾಯತ್ ರಾಜ್ ಮತ್ತು ಜಿಲ್ಲಾಪರಿಷತ್ ಚುನಾವಣೆಗಳನ್ನು ಮಾಡುವುದಕ್ಕೆ ನಿಮಗೆ ತೊಂದರೆ ಏನು? ನೆಗಡಿ ನೆಪ ಹೇಳಿ ಮೂಗು ಕತ್ತರಿಸಿದರು ಎಂದು ಹೇಳಿದ ಹಾಗೆ ಆಯಿತು. 12 ವರ್ಷಗಳ ತರುವಾಯ ನಿನ್ನೆ ಮಹಾರಾಷ್ಟ್ರದಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗೆ ಚುನಾವಣೆ ನಡೆಯುತ್ತಿದೆ. ಕರ್ನಾಟಕದಲ್ಲಿ ಐದು ವರ್ಷಗಳ ಆಡಳಿತ ಅನುಭವ ಇರತಕ್ಕಂಥವರು ಇದ್ದಾರೆ, ಶಾಸನಬದ್ಧವಾಗಿ ನಿಮಗೆ 6 ತಿಂಗಳೂ ಅವರನ್ನು ಮುಂದುವರಿಸುವುದಕ್ಕೆ ಅವಕಾಶ ಇದೆ. ಈ ಅವಕಾಶವನ್ನು ಬಳಸಿಕೊಳ್ಳದೆ ಇದರ ಕತ್ತು ಹಿಸುಕುತ್ತೀರಿ. ಏನು ಹೇಳುತ್ತೀರಿ ಇದಕ್ಕೆ ಎಂದರೆ 1991ರ ಜನಗಣತಿ ಆಧಾರದ ಮೇಲೆ ಮತ ಕ್ಷೇತ್ರಗಳ ಪುನರ್ ವಿಂಗಡಣೆ ತರುವಾಯ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳಿಗೆ ಚುನಾವಣೆ ಎಂದು ಹೇಳುತ್ತೀರಿ. ಇದು ಒಂದು ಕಾರಣ ಅತಿಶೀಘ್ರವಾಗಿ ನಡೆಸಲು ಉದ್ದೇಶಿಸಲಾಗಿದೆ ಎಂದು ಹೇಳುತ್ತೀರಿ. ನಿಮ್ಮ ರಾಜ್ಯಪಾಲರ ಭಾಷಣದ ಪುಟ 13, ಪ್ಯಾರಾ 25ರಲ್ಲಿ ತಾವು, ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯಿತಿಗಳನ್ನು ರದ್ದು ಮಾಡುವಾಗ ಬಳಸಿರತಕ್ಕಂಥ ಪದಗಳು ಇವು. ಆರ್ಡಿನೆನ್ಸ್ ನಂಬರ್ ಒನ್ ಆಫ್ 1992. ಇದು ಕರ್ನಾಟಕ ರಾಜ್ಯಕ್ಕೆ ಪ್ರಥಮ ಕೊಡುಗೆ.

ನಿಮಗೆ ಜನತಂತ್ರದಲ್ಲಿ ವಿಶ್ವಾಸ ಇಲ್ಲವೇ? ಚುನಾಯಿತ ಪ್ರತಿನಿಧಿಗಳ ಮೇಲೆ ನಂಬಿಕೆ ಇಲ್ಲವೇಯ--ಆಯಾ ಭಾಗದಿಂದ ಆಯ್ಕೆಯಾದಂಥ ಜನ ಏನಿದ್ದಾರೆ ಆ ಜನ ನಿಮ್ಮ ವಿಶ್ವಾಸ ಕಳೆದುಕೊಂಡು ಬಿಟ್ಟರೆ, ಯಾರ ಪಾರ್ಟಿಯವರೋ ಅದು ನಮಗೆ ಗೊತ್ತಿಲ್ಲ, ವಿಕೇಂದ್ರಿಕರಣದಿಂದ ಆಯಾ ಹಂತದಲ್ಲಿದ್ದ ಜನ ಪ್ರತಿನಿಧಿಗಳ ಮೇಲೆ ವಿಶ್ವಾಸ ಕಳೆದುಕೊಂಡು ಅಧಿಕಾರಿಗಳೆಂಬ ಗೂಳಿಗಳನ್ನು ಬಿಟ್ಟಿದ್ದೀರಿ. ಹುಲ್ಲುಗಾವಲಿನಲ್ಲಿ ಮೇಯುತ್ತಿದ್ದಾರೆ ಮೇಯಲಿ. ಸ್ವಾತಂತ್ರ್ಯ ಬಂದ ನಂತರದ 44 ವರ್ಷಗಳ ಅನುಭವ ನಿಮಗೆ ಸಾಲದೇ, ಆ ಅನುಭವದಿಂದ ಆಗಿರತಕ್ಕಂಥ ಸಂಕಟವನ್ನು ಪರಿಹಾರ ಮಾಡುವುದಕ್ಕೆ ನೀವು ಯಾವ ಪಾರ್ಟಿಯನ್ನಾದರೂ ಮಾಡಿ, ಯಾವ ಪಾರ್ಟಿಯಾದರೂ ಗೆಲ್ಲಲಿ, ಚುನಾವಣೆ ಮಾಡುವುದಕ್ಕೆ ಏನು ಕಷ್ಟ, ಒಂದು ವೇಳೆ ಮಾಡುವುದಕ್ಕೆ ಸಾಧ್ಯ ಇಲ್ಲ ಎಂದರೆ, ಶಾಸನದಲ್ಲಿ

ಅವಕಾಶ ಇದೆ, 6 ತಿಂಗಳೂ ಇವರನ್ನೇ ಮುಂದುವರಿಸಿ ಚುನಾವಣೆಯ ಆಲೋಚನೆ ಮಾಡಿ, ಇದನ್ನು ಕೇಳಿದರೂ ಕೂಡಾ Ordinance No 1 of 1992.

"Whereas it is considered appropriate to appoint Administrate to Zilla Farishad and Mandal Panchayats..."

ಆಗ ಈ ಮಂಡಲ್ ಪಂಚಾಯತ್ ಮಸೂದೆಯನ್ನು ಜಾರಿಗೆ ತರುವಂತಹ ಪ್ರಯತ್ನ ನಡೆದಾಗ ನಾನು ವಿಧಾನಸಭಾ ಅಧ್ಯಕ್ಷನಾಗಿದ್ದೆ. ಕಾಂಗ್ರೆಸ್‌ಪಕ್ಷದಿಂದ ಕೆಲವು ಆಪಾದನೆಗಳು ಬಂದವು. ಮಸೂದೆ ಸರಿ ಇಲ್ಲ ಎಂದು ಆಪಾದನೆ ಬಂತು, ಆಗ ನಾನು ಸರಕಾರವನ್ನು ಕೇಳದೆ ಇದನ್ನು ಜಂಟಿ ಸಲಹಾ ಸಮಿತಿಗೆ ಹಾಕತಕ್ಕಂಥ ನಿರ್ಣಯ ಮಾಡಿದೆ, ಎಲ್ಲಾ ರಾಜ್ಯಗಳನ್ನೂ ತಿರುಗಾಡಿಕೊಂಡು ಬಂದಿರಿ, ಎಲ್ಲಿಯೂ ಲೋಪದೋಷಗಳು ಇಲ್ಲದಂಥ ಒಂದು ಮಸೂದೆಯನ್ನು ಜಾರಿಗೆ ತಂದು ಶಾಸನ ಸಭೆ ಒಮ್ಮತದಿಂದ ಅದನ್ನು ಜಾರಿಗೆ ಕೊಟ್ಟಿತು.

ಈ ಮಸೂದೆಯಲ್ಲಿ ನಿಮಗೆ ದೋಷ ಕಂಡರೆ ಎಲ್ಲಿ ದೋಷ ಇದೆ ಅಲ್ಲಿ ರೀ ಆರ್ಗನೈಜ್ ಆಗಬೇಕು. ಎಲ್ಲಿ ಕ್ಷೇತ್ರಗಳು ಆಗಬೇಕು ಅಲ್ಲಿ ಮಾಡಿ. ಇವತ್ತು ಅಸೆಂಬ್ಲಿ ರೀ ಆರ್ಗನೈಜ್ ಆಗಬೇಕು ಕ್ಷೇತ್ರಗಳು ಆಗಬೇಕು ಅಸೆಂಬ್ಲಿ ಚುನಾವಣೆಗಳು ನಿಂತು ಹೋಗಿದೆಯೇ? ಪ್ರತಿ 10 ವರ್ಷಗಳಿಗೆ ಒಂದು ಸಾರಿ ಲೋಕಸಭಾ ಚುನಾವಣೆ ಮುನ್ನ ಕ್ಷೇತ್ರಗಳ ರೀ ಆರ್ಗನೈಜ್ ಆಗುತ್ತದೆ. ಲೋಕಸಭೆ ಚುನಾವಣೆ ನಿಲ್ಲುತ್ತದೆಯೇ? ಜಿಲ್ಲಾ ಪರಿಷತ್ತು ಮಾತ್ರ ಏತಕ್ಕೆ ನಿಲ್ಲುತ್ತವೆ ಕಾರಣ ಶಾಸನ ಬದ್ಧವಾದಂತಹ ರಾಜ್ಯಾಂಗದತ್ತವಾದಂತಹ ಅಧಿಕಾರ ರಾಜ್ಯಾಂಗದ ಮೂಲಕವೇ ಬಂದಿದ್ದರೆ ಕುರಿ ಕೇಳಿ ಸಾಂಬಾರ್ ಅರಿಯಬೇಗಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ಕುರಿ ಅಲ್ಲ ಸ್ವಾಮಿ ಕೋಳಿ.

ಶ್ರೀ ಡಿ.ಬಿ. ಚಂದ್ರೇಗೌಡ: ನೀವು ಚಿಕ್ಕದ್ದನ್ನು ಯೋಚನೆ ಮಾಡಿದರೆ ನಾವು ದೊಡ್ಡ ದೊಡ್ಡದ್ದನ್ನು ಯೋಚನೆ ಮಾಡುತ್ತೇವೆ ಸ್ವಾಮಿ.

ಶ್ರೀ ಎಸ್. ಬಂಗಾರಪ್ಪ : ಅವರ ಲೆವಲ್‌ಗ ಅವರು ಹೇಳಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ: ಆದರೆ ಏನು ಮಾಡಿದ್ದೀರಿ. ಆರ್ಟಿಕಲ್ 40 ರಲ್ಲಿ ನಿರ್ದೇಶನ ಸೂತ್ರದಲ್ಲಿಟ್ಟಿದ್ದೀರಿ. ಸರ್ಕಾರದ ಮರ್ಜಿ, ಆಯಾಯಾ ರಾಜ್ಯ ಸರ್ಕಾರಗಳಿಗೆ ಬೇಕಾಗುತ್ತದೆ. ಚುನಾವಣೆ ಮಾಡುವುದು ಬೇಡವಾದರೆ ಕಿತ್ತು ಹಾಕುವುದು. ಮುಂದಿನ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಂದಾಜು ಎಷ್ಟು ಬರುತ್ತದೆಂದು. ನಮಗೆ ಗೊತ್ತಿಲ್ಲ. 10ಲಕ್ಷ ಸಹಸ್ರ ಕೋಟಿ ರೂಪಾಯಿಗಳಿಗೂ ಮೀರಿದಂತೆ 8ನೇ ಪಂಚವಾರ್ಷಿಕ ಯೋಜನೆಯ ಕರಡು ಸಿದ್ಧವಾಗುತ್ತಿದೆ. ಈ ಕರಡು ಜಾರಿಗೆ ಕೊಡತಕ್ಕಂಥ ಕೆಲಸ ಯಾರು ಮಾಡಬೇಕು. ಇವತ್ತು ನೀವು ಕೂಡ ಅಬ್ಬರದಿಂದ ಹೇಳಿದ್ದೀರಿ. 1992 ಕೋಟಿ ರೂಪಾಯಿಗಳು ಅಥವಾ ಅದಕ್ಕಿಂತ ಸ್ವಲ್ಪ 94 ಕೋಟಿ ರೂಪಾಯಿಗಳವರೆಗೆ ನಮ್ಮ ವಾರ್ಷಿಕ ಯೋಜನಾ ಗಾತ್ರ ಆಗಬಹುದೆಂದು. ಇದನ್ನು ಜಾರಿಗೆ ಕೊಡತಕ್ಕಂಥ ಜನರು ಯಾರು? ಯಾವ ಜನಗಳಿಗೆ ಆ ಲಾಭ ಹೋಗಬೇಕು, ಅದನ್ನು ಗುರುತಿಸುವವರು ಯಾರು? ಕನಿಷ್ಟ ನಾನು ತಮಗೆ ಹೇಳುತ್ತೇನೆ ಕಳೆದ 5-6 ವರ್ಷಗಳಲ್ಲಿ ಪರೀಕ್ಷೆಗೆ ಒಂದು ಶ್ವೇತಪತ್ರ ಹೊರಡಿಸಿ. 1987ನೇ ಇಸವಿಯಿಂದ ಪಂಚವಾರ್ಷಿಕ ಯೋಜನೆಗಳ ಮೂಲಕವೇ ಇರಲಿ ವಾರ್ಷಿಕ ಯೋಜನೆಗಳ ಮೂಲಕವೇ ಇರಲಿ ಜಿಲ್ಲಾ

ಪರಿಷತ್ತು ಮತ್ತು ಮಂಡಲ ಪಂಚಾಯತ್‌ಗಳು ಅಸ್ತಿತ್ವಕ್ಕೆ ಬಂದ ಮೇಲೆ ಗ್ರಾಮೀಣ ಪ್ರದೇಶಗಳಲ್ಲಿ ಆಗಿರತಕ್ಕಂಥ ಕೆಲಸ ಏನು? ಮತ್ತು ಅದಕ್ಕಿಂತ ಪೂರ್ವಭಾವಿಯಾಗಿ ಮಾಡಿರತಕ್ಕಂಥ ಕೆಲಸ ಎಷ್ಟು? ತನಿಖೆ ಮಾಡಿ. ಶ್ವೇತಪತ್ರ ಹೊರಡಿಸಿ. ಆ ಶ್ವೇತ್ರಪತ್ರದ ಮೂಲಕ ಅಭಿವೃದ್ಧಿ ಕಾರ್ಯದ ಒಂದು ಪಕ್ಷಿ ನೋಟ ನೋಡೋಣ. ಕನಿಷ್ಟ ಒಂದು ಗ್ರಾಮಕ್ಕೆ ಒಂದು ಕೆಲಸ ಆಗಿದೆ. ಶಾಲಾಕಟ್ಟಡಗಳು ಆದವು. ಆಸ್ಪತ್ರೆ ಕಟ್ಟಡಗಳು ಆದವು, ರಸ್ತೆಗಳು ಆದವು ಬಾವಿಗಳು ಆದವು. ನೀವು ಏನೇನು ಯೋಜನೆ ತರುತ್ತೀರಿ ಆ ಬಗ್ಗೆ ಒಂದು ಮಾತನ್ನು ಕೇಳುತ್ತೇನೆ ಈಗ ಆಶ್ರಯ ಯೋಜನೆ ಆವಾಧನ ಯೋಜನೆ ಮತ್ತು ಅಕ್ಷಯ ಯೋಜನೆ ಇವೆಲ್ಲಾ ತಂದಿದ್ದೀರಿ. ಫಲಾನುಭವಿಗಳನ್ನು ಗುರುತಿಸತಕ್ಕಂಥ ಜವಾಬ್ದಾರಿ ಯಾರಿಗೆ ಕೊಟ್ಟಿದ್ದೀರಿ ನೀವು. ಕೊನೆಗೆ ಒಂದು ನಾಲ್ಕು ಜನ ಸದಸ್ಯರನ್ನು ಮಾಡಿದ್ದೀರಿ. ಜಿಲ್ಲಾ ಮಟ್ಟದಲ್ಲಿ ಸಮಿತಿ ಮಾಡಿದ್ದೀರಿ. ಅದೇ ಮಂಡಲ ಪಂಚಾಯತ್ ಸದಸ್ಯರು ಇದ್ದಿದ್ದರೆ ಜಿಲ್ಲಾ ಪರಿಷತ್ತು ಸದ್ಯರು ಇದ್ದಿದ್ದರೆ ನಿಮಗೆ ಆ ಎಲ್ಲಾ ಮಾಹಿತಿ ಒಂದು ವಾರದಲ್ಲಿ ತರಿಸಬಹುದಾಗಿತ್ತು.

ಶ್ರೀ ಎಸ್. ಬಂಗಾರಪ್ಪ : ನೀವು ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ; ಅದು ಆಗುವುದಿಲ್ಲ. ಅದು ಆಗದೆ ಇರುವ ಕೆಲಸ ಏತಕ್ಕೆ ನೀವು ಅವರ ಮೇಲೆ ವಿಶ್ವಾಸ ಕಳೆದುಕೊಳ್ಳಬೇಕು. ಆ ಜನರು ಫಲಾನುಭವಿಗಳನ್ನು ಗುರುತಿಸತಕ್ಕಂಥ ಕೆಲಸ ಮಾಡುತ್ತಾರೆ. ವಿಕೇಂದ್ರಿಕರಣದ ಮತುಬಿಡಿ. ಏಕೆಂದರೆ ಬೆಂಗಳೂರಿನ ವಿಧಾನ ಸೌಧದ ಮೆಟ್ಟಲಿನ ಮೇಲೆ ಜನರನ್ನು ಏತಕ್ಕೆ ಸಜ್ಜು ಮಾಡುತ್ತೀರಿ? ಇದನ್ನು ಎನ್ಯಾಕ್ಟ್ ಮಾಡುವುದಕ್ಕೆ 91ರ ಜನಗಣತಿ ಆಧಾರದ ಮೇಲೆ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಯನ್ನು ಮಾಡಲು ಮರು ವಿಂಗಡಣೆ ಮಾಡಿ ನೀವು ಕ್ಷೇತ್ರಗಳ ವಿಂಗಡಣೆ ಮಾಡಿ ಚುನಾವಣೆ ಮಾಡುತ್ತೇವೆಂದರೆ ಅದನ್ನ ಗೋಡೆ ಮೇಲೆ ಬರೆದುಕೊಳ್ಳಿ ಸ್ವಾಮಿ. ಮರು ವಿಂಗಡಣೆ ಆಗುವುದಿಲ್ಲ, ಚುನಾವಣೆ ಮಾಡುವುದಿಲ್ಲ ಅಧಿಕಾರದ ಕೇಂದ್ರೀಕರಣ ಅಷ್ಟೇ.ಅದೇನು ಕಾಂಗ್ರೆಸ್ಸ್ ಪಕ್ಷಕ್ಕೆ ಕೇಂದ್ರಿಕರಣದ ಮೇಲೆ ಅಷ್ಟು ವಿಶ್ವಾಸ? ಪಾಪ ಏನಾಗಿದೆ? ಶಾಸಕರುಗಳಿಗೆ ಅಧಿಕಾರ ಇಲ್ಲ ಎನ್ನತಕ್ಕಂಥ ಭೀತಿ ಬಂದಿದೆ. ತಾವು ಒಂದು ತಪ್ಪು ಕಲ್ಪನೆ ಮಾಡಿಕೊಂಡಿದ್ದೀರಿ. ನಾನು ಒಬ್ಬ ಶಾಸಕನಾಗಿ ನಿಜವಾಗಿಯೂ ಸಂತೋಷ ಪಡುತ್ತೇನೆ. ನನ್ನ ಕೆಲಸ ಕಡಿಮೆ ಆಗಿದೆ. ನನ್ನ ಕೆಲಸವನ್ನು ವಿಕೇಂದ್ರಿಕರಣದ ಜನರು ಮಾಡುತ್ತಿದ್ದಾರೆ. ಅದನ್ನು ಕಿತ್ತು ಹಾಗಿದ್ದೀರಿ. ಕನಾನು ಸಂದರ್ಭ ಬಂದಾಗ ಆ ಬೇಡಿಕೆ ಬಂದಾಗ ವಿಷದವಾಗಿ ಹೇಳುತ್ತೇನೆ. ತಾವು ಮತ್ತೊಂದು ನೋಟಿಫಿಕೇಷನ್ಸ್ ಹೊರಡಿಸಿದ್ದೀರಿ. ನಂ.: ಆರ್‌ಡಿಪಿಆರ್ 6 ಜಡ್‌ಪಿ 92 ಬೆಂಗಳೂರು ದಿನಾಂಕ 13-1-92 ಇದರಂತೆ ವಿಭಾಗಾಧಿಕಾರಿಗಳಿಗೆ ಜಿಲ್ಲಾ ಪರಿಷತ್ತುಗಳ ಉಸ್ತುವಾರಿ ವಹಿಸಿದ್ದೀರಿ. ಈಗಾಗಲೇ ವಿಭಾಗಾಧಿಕಾರಿಗಳು ಕೆಲಸ ಎಷ್ಟರ ಮಟ್ಟಿಗೆ ಮಾಡಿದ್ದರೆ ಎನ್ನತಕ್ಕಂಥಾದ್ದನ್ನು ನಾವೆಲ್ಲ ನೋಡಿದ್ದೇವೆ. ನಾಲ್ಕು ನಾಲ್ಕು, ಐದೈದು ಜಿಲ್ಲೆಗೆ ಇವರ ಜವಾಬ್ದಾರಿ. ನನಗೆ ಹೊಸನಗರ ತಾಲ್ಲೂಕು, ನಗರ ಹೋಬಳಿ ಎಂದು ಬರುತ್ತದೆ. ಅದರಲ್ಲಿ 4 ಪಂಚಾಯಿತಿಗಳು ಇವೆ. ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರ ಯಜಮಾನಿಕೆ. 4 ಜನ ಮಂಡಲ ಪ್ರಧಾನರು ಮತ್ತು ಒಬ್ಬ ಜಿಲ್ಲಾಪರಿಷತ್ತಿನ ಸದಸ್ಯರು ಮಾಡುತ್ತಿದ್ದ ಕೆಲಸವನ್ನು ಒಬ್ಬ ಅಸಿಸ್ಟೆಂಟ್ ಇಂಜಿನೀಯರು ಮಾಡಬೇಕಾಗಿದೆ. ಯಾರನ್ನು ಕೇಳಿ ಹಾಕಿದ್ದೀರಿ. ಕನಿಷ್ಟ ಸೌಜನ್ಯ ಬೇಡವೇ? ನಮ್ಮ ನಮ್ಮ ಕ್ಷೇತ್ರಕ್ಕೆ

ಯಾವ ಅಧಿಕಾರಿಗೆ ಜವಾಬ್ದಾರಿ ವಹಿಸಿಕೊಡಬೇಕೆಂದು ಕೇಳುವ ಕನಿಷ್ಟ ಸೌಜನ್ಯ ಬೇಡವೇ? ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಬಗ್ಗೆ ನಿಮಗೆ ನಂಬಿಕೆ ಬರುತ್ತದೆ. ಚುನಾಯಿತ ಪ್ರತಿನಿಧಿಗಳ ಬಗ್ಗೆ ವಿಶ್ವಾಸ ಇಲ್ಲ. ಆ ಅಸಿಸ್ಟೆಂಟ್ ಇಂಜಿನಿಯರ್ 4 ಮಂಡಲಕ್ಕೆ ಅವನೇ ಪ್ರಧಾನ. ನಾನು ಹೋಗಿ ಅವನ ಹತ್ತಿರ ದಮ್ಮಯ್ಯ ಹಾಕಬೇಕು. ಅಪ್ಪಾ, ಈ ಕೆಲಸ ಮಾಡುವಂತೆ ಹೇಳಿ ಅವನಿಗೆ ರೆಪ್ರೆಸೆಂಟೇಷನ್ ತೆಗೆದುಕೊಂಡು ಹೋಗಬೇಕು. ಇದು 13ನೇ ಜನವರಿಯಲ್ಲಿ ಮಾಡಿರತಕ್ಕಂಥಾದ್ದು.

ಶ್ರೀ ಎಸ್. ಬಂಗಾರಪ್ಪ : ಒಂದು ನಿಮಿಷ ಕುಳಿತುಕೊಂಡರೆ, ತಾವು ಹೇಳಿದಿರಿ ಚುನಾಯಿತ ಪ್ರತಿನಿಧಿಗಳ ಬಗ್ಗೆ ಅಪಾರವಾದ ವಿಶ್ವಾಸ ಇರಬೇಕೆಂದು ಹೇಳಿ. ನಾವೂ ಕೂಡ ಅದರ ಬಗ್ಗೆ ನಂಬಿಕೆ ಇಟ್ಟಿದ್ದೇವೆ. ನಾವು ಕೂಡ ಚುನಾಯಿತ ಪ್ರತಿನಿಧಿಗಳು. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಪಕ್ಷ ಭೇದ ಇಲ್ಲದೆ ತಮ್ಮನ್ನೇ ಅಧ್ಯಕ್ಷರನ್ನಾಗಿ ಮಾಡಿ ಟಾಸ್ಕ್ ಫೋರ್ಸ್ ಮಾಡಿ ತಮಗೇ ಅಧಿಕಾರವನ್ನು ಸಂಪೂರ್ಣವಾಗಿ ಕೊಟ್ಟಿದ್ದೇವೆ. ಚುನಾಯಿತ ಪ್ರತಿನಿಧಿಗಳ ಮೇಲೆ ಅಪಾರವಾದ ವಿಶ್ವಾಸವನ್ನು ನಾವು ಇಟ್ಟಿದ್ದೇವೆ. ಆದರೆ, ನಾನು ಆಗ ವಿರೋಧ ಪಕ್ಷದಲ್ಲಿ ಕುಳಿತುಕೊಂಡಿದ್ದೆ ತಾವು ಇಲ್ಲಿ ಅಧಿಕಾರ ನಡೆಸುತ್ತಿದ್ದೀರಿ. ತಾವು ಅಂದರೆ, ಮಾನ್ಯ ಹೆಗಡೆಯವರ ಕಾಲ. ಅವರ ಮಂತ್ರಿ ಮಂಡಲ. ಆಗ ಟ್ರಿಬ್ಯುನಲ್ ಮೆಂಬರ್ಸ್, ಅದರಲ್ಲಿ ಒಬ್ಬರು ಎಂ.ಎಲ್.ಎ. ಇರಬೇಕೆಂದು. ಚುನಾಯಿತ ಪ್ರತಿನಿಧಿ. ನಾನು ಎಂ.ಎಲ್.ಎ.ಟ್ರಿಬ್ಯುನಲ್‌ಗೆ ಮೆಂಬರ್ ಮಾಡಿದ್ದನ್ನು ಕಿತ್ತುಹಾಕಿದರು. ಮಾಡಲೇ ಇಲ್ಲ ನಾನು ಚುನಾಯಿತ ಪ್ರತಿನಿಧಿ ಆಗಿದ್ದದ್ದು ನೆನಪು ಇರಲಿಲ್ಲವೇ? ಅದು ಏಕೆ ಮರೆತು ಹೋಗಿಬಿಡ್ತು?

ಶ್ರೀ ಡಿ.ಬಿ. ಚಂದ್ರೇಗೌಡ: ಈಗ ನಮ್ಮನ್ನು ಕೇಳಿದರೆ ಏನು ಪ್ರಯೋಜನ?

ಶ್ರೀ ಎಸ್.ಬಂಗಾರಪ್ಪ : ನಿಮ್ಮನ್ನು ಕೇಳುವುದಲ್ಲ. ನಾನು ಹೇಳುವುದಿಷ್ಟೇ.

ಶ್ರೀ ವಾಟಾಳ್ ನಾಗರಾಜ್: ಸುಂಕ ಕೊಟ್ಟು ಹೊರಟು ಹೋಗಿದ್ದೀರಿ. ಇನ್ನು ತಿರುಗಿ ಸುಂಕ ಕೊಡಿ ಎಂದು ಹೇಳಿದ ಹಾಗೆ ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ಹಾಗಲ್ಲ, ಅವತ್ತು ಪಕ್ಷದ ನೀತಿ ಚುನಾಯಿತ ಪ್ರತಿನಿಧಿಗಳ ಬಗ್ಗೆ ಏನು ಎಂಬುದನ್ನು ಕೇಳುತ್ತಿದ್ದೇನೆ. ನಾನು ನಿಮ್ಮ ಪಕ್ಷಕ್ಕೆ ಕೇಳುತ್ತಿದ್ದೇನೆ. ಒಂದು ನೀತಿ ನಿಮ್ಮ ಹತ್ತಿರವೂ ಇರಬೇಕಲ್ಲವೇ? ಅಧಿಕಾರದ ವಿಕೇಂದ್ರಿಕರಣ ಮತ್ತು ಚುನಾಯಿತ ಪ್ರತಿನಿಧಿಗಳ ಬಗ್ಗೆ ಬಹಳ ಒಳ್ಳೆಯ ರೀತಿಯಿಂದ ಮಾತನಾಡುತ್ತಿದ್ದೀರಿ. ತಾವು ಮಾತನಾಡಿ. ನಮಗೆ ಅಪಾರವಾದ ನಂಬಿಕೆ ಇದೆ. ಮಾತಿನ ಬಗ್ಗೆ ವಿಶ್ವಾಸ ಇದೆ. ಆದರೆ, ಇಲ್ಲಿ ಕುಳಿತಾಗ ಒಂದು ರೀತಿ ಅಲ್ಲಿ ಹೋದ ಮೇಲೆ ಮತ್ತೊಂದು ರೀತಿ ತಾವು ಮಾಡಬಾರದು. ಪ್ರತಿನಿಧಿಗಳೆಂದು ಬಂದ ಮೇಲೆ ಎಲ್ಲಾ ಕಾಲಕ್ಕೂ ಅದೇ ಗೌರವ ಕೊಟ್ಟು ಹೋಗಬೇಕು. ನಮ್ಮನ್ನು ತೆಗೆದು ಮೇಲೆ ಟ್ರಿಬ್ಯುನಲ್ ಕೋರ್ಟ್ ಹತ್ತಿರ ಮೆಟ್ಟಿಲು ಹತ್ತಿರಲಿಲ್ಲ. ನನ್ನನ್ನು ಮಾಡಿ, ಎಂದು ನಾನು ಒತ್ತಡ ಮಾಡುವುದಕ್ಕೆ ಹೋಗಲಿಲ್ಲ. ಅವಾಗ ಏನಾಯಿತು ಗೊತ್ತೇನು? ನಾನು ಮೊದಲಿಂದಲೂ ಗೇಣಿದಾರರ ಪರವಾಗಿ ಹೋರಾಟ ಮಾಡಿಕೊಂಡು ಬಂದಿದ್ದು ತಮಗೆ ಗೊತ್ತಿದೆ. ಸೊರಬ, ಸಾಗರ, ಹೊಸನಗರ, ತೀರ್ಥಹಳ್ಳಿಗಳಲ್ಲಿ, ಗೋಪಾಲಗೌಡರ ಕಾಲದಿಂದಲೂ ಹೋರಾಟ ಮಾಡಿದ್ದೇವೆ. ಜಮೀನುದಾರರ ಪರವಾಗಿ ಜಮೀನುಗಳು ಆಗಿದ್ದವು. ಆಗಲೂ ಕೂಡ ಹೈಕೋರ್ಟಿಗೆ ಹೋದವು. ಮತ್ತೆ ಟ್ರಿಬ್ಯುನಲ್‌ಗೆ ಬಂದಿವೆ. ನಾವು

ಅಪಲೇಟ್ ಅಥಾರಿಟಿ ತೆಗೆದಾದ ಮೇಲೆ ಈಗ ಟ್ರಿಬ್ಯುನಲ್ ಕೋರ್ಟ್‌ನಲ್ಲಿ ಇದ್ದಾವೆ. ಎಲ್ಲಾ ರಾದ್ಧಾಂಥ ಆಗಿವೆ. ಕೊನೆಯ ಪಕ್ಷ ಚುನಾಯಿತ ಪ್ರತಿನಿಧಿ ಇದ್ದರೆ, ತಮ್ಮ ಹಾಗೆ ನಾನೂ ಕೂಡ ಅಲ್ಲಿ ಇದ್ದಿದ್ದರೆ ಬಡವರ ಹಿತವನ್ನು ಕಾಪಾಡತಕ್ಕಂಥ ಪ್ರಯತ್ನ ಮಾಡಬಹುದಾಗಿತ್ತು. ಹಿಂದೆ ಹೇಗೆ ಮಾಡಿದ್ದೇನೋ ಈ ಕಾಲದಲ್ಲೂ ಕೂಡ ಮಾಡುತ್ತಿದ್ದೆ. ಆದರೆ ಆ ಸದಾವಕಾಶ ಇದ್ದದ್ದನ್ನು ಸಂಪೂರ್ಣವಾಗಿ ತೆಗೆದುಹಾಕತಕ್ಕಂಥ ಕೆಲಸವನ್ನು ತಮ್ಮ ಪಕ್ಷದ ಸರ್ಕಾರ ಇದ್ದಾಗ ಮಾಡಿತು. ನಾನು ವೈಯಕ್ತಿಕವಾಗಿ ಮಾತನಾಡುತ್ತಿಲ್ಲ. ಆ ಸಂದರ್ಭ ಹಾಗಿತ್ತು. ಚುನಾಯಿತ ಪ್ರತಿನಿಧಿ ಎಂದರೆ ನನ್ನದೂ ಸ್ವಲ್ಪ ನೆನಪು ತಮ್ಮ ಸರ್ಕಾರಕ್ಕೆ ಇರಬೇಕಾಗುತ್ತದೆ. ನೆನಪು ಮಾಡಿಕೊಟ್ಟೆ ಅಷ್ಟೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅಂದರೆ ಮುಖ್ಯ ಮಂತ್ರಿಯಾಗಿ ನೀವು, ಅತ್ತೆಗೆ ಒಂದು ಕಾಲ ಸೊಸೆಗೆ ಒಂದು ಕಾಲ ಎಂದ ಹಾಗೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಅದನ್ನು ಹೇಳಲಿಲ್ಲ. ಆ ಪ್ರಶ್ನೆ ನಾನು ಹೇಳುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದಕ್ಕೆ ಪರಿಹಾರ ಒಂದೇ. ಇಬ್ಬರೂ ಜಾಗ ಬಿಟ್ಟು ಮೂರನೆಯವರಗೆ ಅಲ್ಲಿ ಅವಕಾಶ ಮಾಡಿಕೊಡುವುದು.

ಶ್ರೀ ವಾಟಾಳ್ ನಾಗರಾಜ್: ಸುಮ್ಮನೆ ಏಕೆ? ಹೀಗೆ ಮಾಡುತ್ತೀರಿ?

ಶ್ರೀ ಎಸ್. ಬಂಗಾರಪ್ಪ : ವಾಟಾಳ್ ನಾಗರಾಜ್‌ರವರ ಮಾತಿನ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ನಾನು ಕುಳಿತುಕೊಳ್ಳುತ್ತೇನೆ. ನಿಮ್ಮ ಮಾತಿನ ಬಗ್ಗೆ ಗೌರವ ಇಲ್ಲವೆಂದಲ್ಲ. ಅದಕ್ಕೂ ಕುಳಿತುಕೊಳ್ಳುತ್ತೇನೆ.

ಶ್ರೀ ಎಂ. ನಾರಾಯಣ ಸ್ವಾಮಿ : ಮೊನ್ನೆ ಟಾಸ್ಕ್ ಫೋರ್ಸ್‌ನ್ನು ಮಾಡಿ ಛೇರ್ಮನ್‌ಗಳನ್ನು ಮಾಡಿದ್ದೀರಿ? ನಮ್ಮ ಪಕ್ಷದ ಸದಸ್ಯರು ಇರತಕ್ಕಂಥ ಸಂದರ್ಭದಲ್ಲಿ ಕೆಲವರನ್ನು ನಾಮಿನೇಷನ್ ಮಾಡಿಲ್ಲ. ಪರ್ಪಸ್‌ಫುಲ್ ಆಗಿ ನಿಮ್ಮ ಪಕ್ಷದವರನ್ನೇ ನಾಮಿನೇಷನ್ ಮಾಡಿದ್ದೀರಿ. ಅಲ್ಲಿ ಒಂದು ಮಾತೂ ಕೂಡ ನಮ್ಮದು ನಡೆಯುವುದಿಲ್ಲ. ನನ್ನ ಅಭಿಪ್ರಾಯ ಏನೆಂದರೆ ಇಬ್ಬರನ್ನು ನಮ್ಮ ಪಕ್ಷದವರನ್ನು ಹಾಕಿರಿ. ನಮ್ಮ ಪಕ್ಷದ ಶಾಸಕರು ಇರುವಂಥ ಕಡೆ ಕನಿಷ್ಟ ಇಬ್ಬರನ್ನು ನಾಮಿನೇಷನ್ ಮಾಡುವ ಪದ್ಧತಿಯನ್ನು ಜಾರಿಗೆ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ನೀವು ಶಾಸಕರಾಗಿದ್ದಂಥವರ ತೂಕ ದೊಡ್ಡದು ಎಂದು ಹೇಳಿ ಒಂದು ಕಡೆ ತಕ್ಕಡಿಯಲ್ಲಿ ಇಟ್ಟಿದ್ದಾರೆ. ಉಳಿದಿರತಕ್ಕಂಥವರನ್ನು ಇನ್ನೊಂದು ಕಡೆ ಇಟ್ಟಿರಬಹುದೇನೋ?

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷಿಣಿಯವರೇ, ಈಗ ಒಟ್ಟು ಚುನಾಯಿತ ಪ್ರತಿನಿಧಿಗಳಿಗೆ ಟಾಸ್ಕ್ ಫೋರ್ಸ್‌ನ್ ಅಧ್ಯಕ್ಷರನ್ನಾಗಿ ಮಾಡಿಬಿಡುವುದು. ಅಪರಾಧಗಳು ಏನಾದರೂ ಬಂದರೆ ಅವರ ಮೇಲೆ ಹೊರಿಸುವುದು. ಆ ಜವಾಬ್ದಾರಿಯನ್ನು ನಿಭಾಯಿಸಲಿಲ್ಲ ಎಂದು ಹೇಳಿ ಕೆಳಗಡೆ ಇದ್ದಂಥಹ ಚುನಾಯಿತ ಪ್ರತಿನಿಧಿಗಳನ್ನು ಮನೆಗೆ ಕಳಿಸುವುದು. ಇದು ಒಂದು ಸ್ಕೀಮ್. ನಾನು ಪ್ರಾರಂಭಕ್ಕೆ ಒಂದು ಮಾತು ಹೇಳಿದೆ. ಮಾರ್ಚ್ 1990ರ ಭಾಷಣದಲ್ಲಿ ಸರ್ಕಾರ ಹೆಂಡದ ಮಾರಾಟವನ್ನು ನಿಷೇಧ ಮಾಡಿದ್ದೇವೆಂದು ಹೇಳಿದರು. ತಾವು ಬಂದ ತಕ್ಷಣ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂಟ್ರೋಡ್ಯೂಸ್ ಆಯಿತು. ಆದರ ವರಮಾನ ಎಷ್ಟು ಎಂದು ಲೆಕ್ಕ ಕೊಡುತ್ತೀರೋ? ವರಮಾನ ಬರಬೇಕಲ್ಲ. ನಿಮ್ಮ ಸರ್ಕಾರದ ನೀತಿ ಹೆಂಡ ಕೊಡಬೇಕು ಎಂದು ಇದ್ದರೆ ಕೊಟ್ಟುಕೊಳ್ಳಿ. ಆದರೆ ನೀವು 1990ನೇ ಇಸವಿಯಲ್ಲಿ ಹೆಂಡದ ಮಾರಾಟವನ್ನು ನಿಲ್ಲಿಸಿದ್ದೇವೆ ಎಂದು ಘೋಷಣೆ ಮಾಡಿ ದಕ್ಷಿಣ ಕನ್ನಡದ ಜಿಲ್ಲೆಗೆ ಕೊಟ್ಟಿದ್ದೀರಲ್ಲ, ಕೊಟ್ಟಿದ್ದಕ್ಕೆ ನನ್ನ ವಿರೋಧ ಇಲ್ಲ, ಅಲ್ಲಿ ಪರಿಸ್ಥಿತಿ ಇರಬಹುದು. ಕೊಟ್ಟಿರಬಹುದು. ಆದರೆ ಅದರಿಂದ ಬರತಕ್ಕ ಹಣ ಎಷ್ಟು?ಏನು ಮುಫತ್ತಾಗಿ ಕೊಡುವುದಕ್ಕೆ ಕೊಟ್ಟಿದ್ದೀರೋ? ಖಜಾನೆಗೆ ಏನಾದರೂ ಹಣ ಬರುತ್ತದೆಯೋ? ನಿನ್ನೆ ಮಾನ್ಯ ಯಡಿಯೂರಪ್ಪನವರು ಒಂದು ವಿಷಯ ಪ್ರಸ್ತಾಪ ಮಾಡಿದರು.1992ನೇ ಇಸವಿ ಜನವರಿ 25ರಂದು ತಾವು ಒಂದು ನೋಟಿಫಿಕೇಷನ್ ಹೊರಡಿಸಿದ್ದೀರಿ. 25ನೇ ತಾರೀಖು ನೋಟಿಫಿಕೇಷನ್ ಆಯಿತು. ಫೆಬ್ರವರಿ 5ರ ವಿಶೇಷ ಗೆಜೆಟ್‌ನಲ್ಲಿ ಆ ಒಂದು ಡ್ರಾಫ್ಟ್ ರೆಸಲ್ಯೂಷನ್ 25ರ ನೋಟಿಫಿಕೇಶನ್ ಜಾರಿಗೆ ಬಂತು. ಆ ನೋಟಿಫಿಕೇಶನ್ ಫೈನಲ್ ನೋಟಿಫಿಕೇಶನ್ ಆಯಿತು. 10ದಿವಸದಲ್ಲಿ ಆತುರಾತುರವಾಗಿ ಒಂದು ನೋಟಿಫಿಕೇಶನ್ ಜಾರಿಗೆ ಬಂತು. ಆ ನೋಟಿಫಿಕೇಶನ್ 25ನೇ ತಾರೀಖು ಜನವರಿಯಲ್ಲಿ ಹೊರಡಿಸಿದ್ದರಲ್ಲ, ಆ ಡ್ರಾಫ್ಟ್ ನೋಟಿಫಿಕೇಷನ್ ಹೊರಡಿಸಿದ ಉದ್ದೇಶ ಏನು? ಉದ್ದೇಶ ಏನೆಂದರೆ ಅಬ್ಜೆಕ್ಷನ್ ಅನ್ನು ಕಾಲ್‌ಫರ್ ಮಾಡುವುದು. ಆ ನೋಟಿಫಿಕೇಶನ್‌ಗೆ ಅಬ್ಜೆಕ್ಷನ್ ಬಂದಿದ್ದವೇ? ಬಂದಿದ್ದರೆ ಯಾವ ತರಹದ ಅಬ್ಜೆಕ್ಷನ್ಸ್ ಬಂದಿತ್ತು? ಇದರ ಪರಿಶೀಲನೆ ಏನಾದರೂ ಆಯಿತೇ? ಪರಿಶೀಲನೆ ಆಗಿದ್ದರೆ ಆ ಆಬ್ಜೆಕ್ಷನ್ಸ್ ಓವರ್‌ಲುಕ್ ಮಾಡುವುದಕ್ಕೆ ಬೇಕಾಗಿರತಕ್ಕ ಸಮಯ ಎಷ್ಟು ಇತ್ತು? 25ನೇ ತಾರೀಖು ಡ್ರಾಫ್ಟ್ ನೋಟಿಫಿಕೇಷನ್ ಪತ್ರಿಕೆಗಳ ಮೂಲಕ ಜಾಹಿರಾತು ಬರಲಿಲ್ಲ. ಗುಪ್ತವಾಗಿ 25ನೇ ತಾರೀಖು ನೋಟಿಫಿಕೇಶನ್ ಜಾರಿ ಆಯಿತು. ಅದು ಯಾರಿಗೂ ತಲುಪುವುದಕ್ಕೆ ಮುನ್ನ ಫೈನಲ್ ನೋಟಿಫಿಕೇಶನ್ ಫೆಬ್ರವರಿ 5 ವಿಶೇಷ ಗೆಜೆಟ್‌ನಲ್ಲಿ ಹೊರಡಿಸಿತು. 17 ಜನ ಹೆಂಡದ ದೊರೆಗಳ 36 ಕೋಟಿ 36 ಲಕ್ಷ ರೂಪಾಯಿಗಳು ನಮಗೆ ಬಡ್ಡಿ ಬರಬೇಕಿತ್ತಲ್ಲ. ಆ ಬಡ್ಡಿಯನ್ನು ವಜಾ ಮಾಡತಕ್ಕ ನಿರ್ಣಯ ಒಂದು. ಮತ್ತು ಅವರು ಅಸಲನ್ನು ಕಟ್ಟುವುದಕ್ಕೆ ಬಂತು. ನನ್ನ ಹತ್ತಿರ ಇರತಕ್ಕ ಲೆಕ್ಕ 1991ರ ಮಾರ್ಚ್ ಅಂತ್ಯದ ವೇಳೆಗೆ 121 ಕೋಟಿ 60 ಲಕ್ಷ 99 ಸಾವಿರದ 517 ರೂಪಾಯಿಗಳು. ಇಷ್ಟು ಬಾಕಿ ಇರುವುದು. ಇದು ಮಾರ್ಚ್ 1991ನೇ ಇಸವಿಗೆ. ಬಾಕಿ ಒಂದೊಂದು ಜಿಲ್ಲೆಯದೂ ಇದೆ. 121 ಕೋಟಿ 60 ಲಕ್ಷ 99 ಸಾವಿರ ಚಿಲ್ಲರೆ ರೂಪಾಯಿಗಳಿಗೆ ಬಡ್ಡಿ ಬಾಕಿ 36 ಕೋಟಿ 36 ಲಕ್ಷ ರೂಪಾಯಿಗಳು. ಇದರಲ್ಲಿ 31.3.1991ಕ್ಕೆ ಯಾರ್ಯಾರದ್ದು ಎಷ್ಟೆಷ್ಟು ಬಾಕಿ ಇದೆ ಎಂದು ಒಂದು ಪಟ್ಟಿ ಇದೆ. 17 ಜನರ ಒಂದು ಪಟ್ಟಿ ಬಂದಿದೆ. ಹೆಚ್.ಜಿ. ದಾಸಪ್ಪ ಅಂಡ್ ಗ್ರೂಪ್ 86 ಲಕ್ಷ ರೂಪಾಯಿಗಳು. ಎ.ಜೆ. ಐ. ಶೆಟ್ಟಿ ಅಂಡ್ ಗ್ರೂಪ್ 432 ಲಕ್ಷ ರೂಪಾಯಿಗಳು. ಸಿ.ವಿ. ರಾಜಪ್ಪ ಅಂಡ್ ಗ್ರೂಪ್ 305 ಲಕ್ಷ ರೂಪಾಯಿಗಳು. ಹೆಚ್.ಜಿ. ನಾರಾಯಣ್ ಅಂಡ್ ಗ್ರೂಪ್ 267 ಲಕ್ಷ ರೂಪಾಯಿಗಳು.

ಎನ್. ನಾಗರಾಜ್ ಗ್ರೂಪ್‌ದ್ದು157 ಲಕ್ಷ, ಸತೀಶ್ಚಂದ್ರ ಹೆಗ್ಡೆ 299 ಲಕ್ಷ, ಇವರೆಲ್ಲರೂ ಕೋಟ್ಯಾಧೀಪತಿಗಳು. ಶಿಂಧೆ ಕುಟುಂಬದವರದ್ದು 168 ಲಕ್ಷ, ಕೆ.ಜಿ. ಬಾಲಕೃಷ್ಣನ್ ಗ್ರೂಪ್ 159 ಲಕ್ಷ, ಕಾವಟೆ ಅಂಡ್ ಕಂಪನಿ, 371 ಲಕ್ಷ, ಮೈಸೂರು ಗೋಪರಾಜು ಗ್ರೂಪ್ 126 ಲಕ್ಷ, ಹೆಚ್. ಇಬ್ರಾಹಿಂ 29 ಲಕ್ಷ,

ವೆಂಕಟೇಶ್ ಗ್ರೂಪ್ 64 ಲಕ್ಷ, ಹೆಚ್. ಜಿ. ರಾಮುಲು ಹೆಚ್.ಜಿ. ರಂಗನಗೌಡ 95 ಲಕ್ಷ, ಮಲಕರೆಡ್ಡಿ ಗ್ರೂಪ್ 145 ಲಕ್ಷ, ಗುತ್ತೇದಾರ್ ಗ್ರೂಪ್ 24 ಲಕ್ಷ,ಹೆಚ್. ಕೆ. ಕರಡಿ 72 ಲಕ್ಷ, ಎ.ಜಿ. ಕಲಾಲ್ ಗ್ರೂಪ್ 63 ಲಕ್ಷ, ಹೀಗೆ ಒಟ್ಟು 17 ಜನರು 36 ಕೋಟಿ 36 ಲಕ್ಷ ರೂಪಾಯಿಗಳ ಮನ್ನಾ ಪಡೆಯತಕ್ಕಂಥದ್ದನ್ನು ಮಾಡಿ ಮತ್ತೆ ಅಸಲಿಗೆ ಕಂತು ಕೊಡುತ್ತಾರೆ. ನಾನು ಕೇಳುವುದೇನೆಂದರೆ ನಮ್ಮ ಇಡೀ ರಾಜ್ಯದಲ್ಲಿ 17 ಜನರು ಮಾತ್ರ ಅಬಕಾರಿ ಕಂಟ್ರಾಕ್ಟರ್‌ಗಳು ಇರುವುದೇ? ಒಂದೇ ವೇಳೆ 17 ಜನರೇ ಇದ್ದರೆ ಅವರ ಹೆಸರಿನಲ್ಲಿಯೇ ಬೇನಾಮಿ ನಡೆಯುತ್ತಾ ಇರಬೇಕು ಎಂದು ಹೇಳಬಹುದೆ? ಒಂದು ಲಕ್ಷಕ್ಕಿಂತ ಒಳಗಡೆ ಬಾಕಿ ಇರತಕ್ಕಂಥ ಬಾಕಿದಾರರು ಸುಸ್ತಿದಾರರುಗಳ ಹೆಸರು ಇಲ್ಲಿ ಬರಲಿಲ್ಲ. ಇವರೆಲ್ಲರೂ ಕೋಟ್ಯಾಧಿಪತಿಗಳೇ. ಇದರಲ್ಲಿ 24 ಲಕ್ಷ ರೂಪಾಯಿ ಮೊತ್ತವೇ ಚಿಕ್ಕದು. ಅದಕ್ಕಿಂತ ಕೆಳಗಡೆಯ ಬಾಕಿಯವರು ಯಾರೂ ಇರಲಿಲ್ಲ ಎಂದು ತಿಳಿದುಕೊಳ್ಳಬೇಕೆ? ಹಾಗೇನಾದರೂ ಅದಕ್ಕಿಂತ ಕೆಳಗಿನವರು ಬಾಕಿದಾರರು ಇದ್ದರೆ ಅಂಥವರ ಪಟ್ಟಿಯು ನಮಗೆ ಸಿಗುತ್ತದೆಯೇ? ಅಂಥವರು ಎಷ್ಟು ಜನರು ಬಾಕಿದಾರರು ಇದ್ದಾರೆ? ಇಂಥ ಆತುರದ ತೀರ್ಮಾನಕ್ಕೆ ಕಾರಣರು ಯಾರು? ರೈತರ ಸಾಲ ಮನ್ನಾ ಮಾಡುತ್ತೇವೆ ಎಂದು ನಿಮ್ಮ ಪತ್ರದಲ್ಲಿ ಘೋಷಣೆ ಮಾಡಿದ್ದೂ ಆಯಿತು. ಅದು ಈಗ ಇಲ್ಲ, ರಾಜ್ಯದ ರೈತರಿಗೆ 5-10 ಸಾವಿರ ರೂಪಾಯಿಗಳ ಸಹಾಯ ಕೊಡಿ ಎಂದರೆ ಈ ಸರಕಾರಕ್ಕೆ ಗಮನಿಸುವುದಕ್ಕೆ ಕೂಡ ಆಗುವುದಿಲ್ಲ. ಇಲ್ಲಿ ನಮ್ಮ 8 ಸಾವಿರ ಜನ ಹೆಣ್ಣುಮಕ್ಕಳು ಅಂಗನವಾಡಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಅವರಿಗೆ 100 ರೂಪಾಯಿಗಳನ್ನು ಕೊಡಿ ಎಂದರೆ ನಿಮ್ಮಲ್ಲಿ ಹಣ ಇಲ್ಲ.

ಶ್ರೀ ಎಸ್. ಬಂಗಾರಪ್ಪ : ಅದು ನಮ್ಮ ಕೇಂದ್ರ ಸರಕಾರದ್ದು, ರಾಜ್ಯ ಸರಕಾರದ್ದಲ್ಲ.

ಶ್ರೀ ಬಸವರಾಜ್ ರಾಯರೆಡ್ಡಿ : ಅಂಗನವಾಡಿಗಳು ಸೆಂಟ್ರಲ್ ಸೆಕ್ಟಾರ್‌ನಲ್ಲಿ ಮತ್ತು ಸ್ಟೇಟ್ ಸೆಕ್ಟಾರ್‌ನಲ್ಲಿಯೂ ಇವೆ.?

ಶ್ರೀ ಡಿ.ಬಿ. ಚಂದ್ರೇಗೌಡ : ಹಾಗೆಯೇ 1800 ವಾಚರ್ಸ್ ಅಲ್ಲಿ ಕುಳಿತಿದ್ದಾರೆ, ನಿನ್ನೆಯಿಂದ ಬಡಿದುಕೊಳ್ಳುತ್ತಾ ಇದ್ದೇನೆ. 100 ರೂ. ಜಾಸ್ತಿ ಕೊಡುವ ಬಗ್ಗೆ ನಿಮ್ಮ ಪ್ರತಿಕ್ರಿಯೆ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ : ಪ್ರತಿಕ್ರಿಯೆ ಬಂದಿಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ: 100 ರೂ. ಗಳನ್ನು ಕೊಡುತ್ತೇವೆ ಎಂದು ಹೇಳಿದ್ದೀರಾ? ಆದರೆ ಇವೊತ್ತು 17 ಜನರಿಗೆ ಸಾರಾಸಗಟಾಗಿ 2 ಕೋಟಿ ಚಿಲ್ಲರೆ ರೂಪಾಯಿಗಳನ್ನು ಕೊಟ್ಟಿದ್ದೀರಿ. 17 ಜನರಿಗೆ ಒಟ್ಟು 36 ಕೋಟಿ, 36 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಲ್ಲ? ನಿಮಗೆ ಮನಸ್ಸಾದರೂ ಒಪ್ಪುತ್ತದೆಯೇ? ಇದು ಸರಕಾರ ನಡೆಸತಕ್ಕಂಥ ರೀತಿಯೇ? ಹಾಗಾದರೆ ಶಾಸನಸಭೆಗಳು ಏತಕ್ಕೆ ಇರಬೇಕು? ನಿಯಮಗಳನ್ನು ಮಾಡಿ ಈ ಹೆಂಡದ ದೊರೆಗಳನ್ನು ಸೃಷ್ಟಿ ಮಾಡುತ್ತಾ ಇದ್ದರೆ ಅವರುಗಳಿಗೆ ಅನುಕೂಲ ಮಾಡಿಕೊಳ್ಳುತ್ತಾ ಇದ್ದರೆ ಪ್ರಜಾಪ್ರಭುತ್ವದ ಗತಿ ಏನು?

ಗುಪ್ತವಾಗಿ 10 ದಿವಸಗಳಲ್ಲಿ ಡ್ರಾಫ್ಟ್ ನೋಟಿಫಿಕೇಶನ್ ಒಂದು ಫೈನಲ್ ನೋಟಿಫಿಕೇಶನ್ ಒಂದು ಮಾಡುತ್ತೀರಿ? ನಿನ್ನೆ ಇಲ್ಲಿ ಈ ವಿಚಾರ ಪ್ರಸ್ತಾಪಕ್ಕೆ ಬಂದಾಗ ನನ್ನ ಹತ್ತಿರ ಮಾಹಿತಿಗಳು ಇರಲಿಲ್ಲ. ಆಗ ಮಾನ್ಯ ಸಭಾಧ್ಯಕ್ಷರು

ಒಂದು ಮಾತು ಹೇಳಿದರು. ಇಬ್ಬರು ಬಿಟ್ಟರೆ ಉಳಿದವರು ಏಕೋ ಸುಮ್ಮನೆ ಇದ್ದಾರೆ ಎಂದು. ನಮ್ಮನ್ನೂ ಆ ಪಟ್ಟಿಯಲ್ಲಿ ಸೇರಿಸಿದರು ಅವರು ನಿನ್ನೆಯ ಪರಿಸ್ಥಿತಿಗೆ ಅನುಸಾರವಾಗಿ ಹೇಳಿದುದು. ನಾನು ತತ್‌ಕ್ಷಣ ಹೇಳೋಣ ಅಂದರೆ, ನನ್ನ ಹತ್ತಿರ ಆಗ ಮಾಹಿತಿಗಳು ಇರಲಿಲ್ಲ. ಪೂರ್ಣವಾಗಿ ಮಾಹಿತಿಗಳು ತಿಳಿದುಕೊಂಡು ಮಾನ್ಯ ಯಡಿಯೂರಪ್ಪನವರು ಹೇಳಿದ ಮಾತುಗಳಲ್ಲಿ ಎಷ್ಟು ಸತ್ಯಾಂಶ ಇದೆ ಎಂದು ತಿಳಿದು ಕೊಳ್ಳಬೇಕಾಗಿತ್ತು. ಈ ಮಾತನ್ನು ಒತ್ತಿಹೇಳುತ್ತೇನೆ. ಆ ಕಾರಣದಿಂದ ನಾವು ಆಗ ಸಭಾತ್ಯಾಗ ಮಾಡುವುದಕ್ಕೆ ಸಾಧ್ಯವಾಗಲ್ಲಿಲ್ಲ. ಆದ್ದರಿಂದ ಈ ಬಗ್ಗೆ ಪೂರ್ಣವಾದ ವಿವರಗಳನ್ನು ಈ ಸಭೆಯ ಮುಂದೆ ಇಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಮಾರ್ಚ್ 31ರ ಒಳಗೆ ರೈತರ ಸಾಲ ವಾಪಾಸ್ ನೀಡುವುದಕ್ಕೆ ಅವಕಾಶ ನೀಡಿ, 5 ಪರ್ಸೆಂಟ್ ಬಡ್ಡಿ ಇಂಟ್ರಡಕ್ಷನ್ ಮಾಡಿದರು. ಮೊದಲು ದುಡ್ಡು ಕೊಡಿ ಎಂದು ಹೇಳಿದರು. ಆಮೇಲೆ ಬಡ್ಡಿ ವಾಪಾಸ್ ತೆಗೆದುಕೊಳ್ಳಿ ಎಂದು ಹೇಳಿದರು. ಈಗ ಸಾಲ ವಸೂಲಿ ಮಾಡುತ್ತಾ ಇದ್ದಾರೆ. ಬಲವಂತವಾದ ವಸೂಲಿ ಸರಕಾರದಿಂದ ರಾಜ್ಯದ ಉದ್ದಗಲಕ್ಕೂ ನಡೆಯುತ್ತಾ ಇದೆ.

ಪಾತ್ರೆ ಪೆಟ್ಟಿಗೆ ಎಲ್ಲಾ ಹೊರಗೆ ಹಾಕುತ್ತಿದ್ದಾರೆ. 31ರ ತನಕ ಸಮಯ ಏಕೆ ಕೊಟ್ಟಿರಿ? ಅದನ್ನೂ ನೀವೆ ಕೊಡ್ತೀರಿ ಆಮೇಲೆ ಅವರ ಸಾಮಾನು ಪಟ್ಟೆಯೆಲ್ಲ, ನೀವೇ ಹೊರಗೆ ಹಾಕ್ತಿರಲ್ಲ. 31ನೇ ತಾರೀಖಿನವರೆಗೆ ಸಮಯ ಕೊಟ್ಟ ಮೇಲೆ ಅಲ್ಲಿಯವರೆಗೆ ಕಾಯಬೇಕು. ಏಕೆ ಕಾಯುವುದಲ್ಲ ಇಂತಹ ನಿರ್ಧಾರಗಳಿಂದ ಈ ರಾಜ್ಯದಲ್ಲಾಗಿರುವ ಪರಿಸ್ಥಿತಿಯನ್ನು ಈ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಕಳೆದ ವರ್ಷ ತಾವು ತುಂಬಾ ಜನಪ್ರಿಯ ಕಾರ್ಯಕ್ರಮಗಳನ್ನು ಪ್ರಕಟಿಸಿದಿರಿ. ಆಶ್ರಯ, ಆರಾಧನ, ಶುಶ್ರೂಶ, ವಿಶ್ವ, ಜಗತ್‌ಭವ್ಯ ಭಾಷೆ. ಓಹೋ ಮೋಟಮ್ಮನವರು ಬಂದಿದ್ದಾರೆ ಮುಖ್ಯಮಂತ್ರಿಗಳು ಬಂದಿದ್ದಾರೆಂದು ಕಾಣುತ್ತದೆ. ನಿನ್ನೆ ನಮ್ಮ ಸಹಾಯ ಕೇಳಿದರು.

ಶ್ರೀ ವಾಟಾಳ್ ನಾಗರಾಜ್: ಆರೋಗ್ಯ ತಪಾಸಣೆ ಮಾಡ್ತೀವಿ ಅಂತ ಬೀದಿ ಬೀದೀಲಿ ವೈದ್ಯರನ್ನೆಲ್ಲ ಕಳಿಸಿ ಜನಗಳ ಆರೋಗ್ಯ ತಪಾಸಣೆ ಮಾಡಿಸಿದರು. ಎಷ್ಟು ಜನ ಮಾಡಿಸಿದ್ದಾರೆ. ಏನೇನು ಮಾಡಿದ್ದಾರೆ ಏನೂ ಗೊತ್ತಿಲ್ಲ. ಯಾವ್ಯಾವ ರೋಗಗಳು ನಿಮಗೆ ಸಿಕ್ಕಿವೆ. ಎಷ್ಟೆಷ್ಟು ಜನ ರೋಗಿಗಳು ನಮ್ಮ ರಾಜ್ಯದಲ್ಲಿದ್ದಾರೆ? ಏನು ಪರಿಸ್ಥಿತಿ ಅದನ್ನಾದರೂ ತಾವು ಹೇಳಿ.

ಶ್ರೀ ಡಿ. ಬಿ. ಚಂದ್ರೇಗೌಡ: ಉಪಾಧ್ಯಕ್ಷಣೆಯವರೆ, ಆಶ್ರಯ, ಕನಿಷ್ಟ ಒಂದು ಸಾವಿರದ ಮನೆಗಳನ್ನು ಒಂದು ತಾಲ್ಲೂಕಿಗೆ ಮಾಡಿಕೊಡ್ತೀವಿ. ಮೊದಲು ತಾಲ್ಲೂಕಿಗೆ ಎಂದು ಹೇಳಿದರು. ಆಮೇಲೆ ಒಂದು ಕ್ಷೇತ್ರಕ್ಕೆ ಅಂತ ಆಯಿತು, ಈಗ ತಾಲ್ಲೂಕು ಕ್ಷೇತ್ರ ಮೂರನೆಯದು ಬಂದಿದೆ ನಗರಪ್ರದೇಶಗಳು ಅಂತ. ನಾಲ್ಕನೆಯದು ಬಂದಿದೆ ಮತ್ತೊಂದು ಹುಡ್ಕೋ ಮನೆ, ಹಿಂದೆ ಕೊಟ್ಟಿದ್ದರಲ್ಲ, ಅವರನ್ನೂ ಫಲಾನುಭವಿಗಳ ಪಟ್ಟಿಗೆ ಸೇರಿಸಿ ಎಂದು.

ಶ್ರೀ ಬಿ. ರಾಜುಗೌಡ: ಫಲಾನುಭವಿಗಳೂ ಹುಡ್ಕೋ ಯೋಜನೆಗಳಿಗೂ ಸಂಬಂಧವೇ ಇಲ್ಲ, ಪ್ರತಿಯೊಂದು ಕ್ಷೇತ್ರಕ್ಕೂ ಒಂದೊಂದು ಸಾವಿರ ಮನೆಗಳನ್ನು ಕೊಡಬೇಕು ಎಂದು ಈಗಾಗಲೇ ಪೂಜೆ ಮಾಡಿಸಿದ್ದೀವಿ, ಮನೆಗಳನ್ನು ಕಟ್ಟಿಸುತ್ತಿದ್ದಾರೆ ನನ್ನ ಕ್ಷೇತ್ರದಲ್ಲಿ ಮನೆಗಳನ್ನು ಕಟ್ಟುತ್ತಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಕಾಂಟ್ರಾಕ್ಟ್ ಕೊಟ್ಟು ಗುತ್ತೇದಾರರು ಮನೆಗಳನ್ನು ಪ್ರಾರಂಭ ಮಾಡಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ: ನಿಮ್ಮ ತಾಲ್ಲೂಕಿನಲ್ಲಿ ಎಷ್ಟು ಮನೆಗಳಾಗಿವೆ ಹೇಳಿ ಸ್ವಾಮಿ?

ಶ್ರೀ. ಬಿ. ರಾಜುಗೌಡ: ನನ್ನ ತಾಲ್ಲೂಕಿನಲ್ಲಿ 310 ಮನೆಯಾಗಿವೆ.

ಶ್ರೀ ಡಿಬಿ. ಚಂದ್ರೇಗೌಡ: ಹಾಗಾದರೆ I charge, he is differentiating. ಕಾಂಗ್ರೆಸ್‌ನವರಿಗೆ ಮನೆ ಕಟ್ಟಿಸಿಕೊಂಡಿದ್ದೀರಿ, ನಮಗ್ಯಾಕೆ ಮನೆ ಕಟ್ಟಿಸಿಕೊಟ್ಟಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮನೆಗಳನ್ನು ಕಟ್ಟುವುದಕ್ಕೆ ಮೈಸೂರು ಜಿಲ್ಲೆಗೆ ಒಬ್ಬ ವ್ಯಕ್ತಿ ಬಂದಿದ್ದಾರೆ. ಅವರು ನನ್ನನ್ನು ಕೇಳಿದರು. ಯಾವತ್ತು ನೀವು ಗುದ್ದಲಿ ಪೂಜೆ ಮಾಡ್ತೀರಿ ಅಂತ. ಯಾವತ್ತಾದರೂ ಮಾಡೋಣ ಅಂತ ಹೇಳಿದೆ. ಆಮೇಲೆ ಯಾವ ತರಹ ಕಟ್ಟಿಸ್ತೀರಾ ಅಂತ ಕೇಳಿದೆ. ನಾವೆಲ್ಲ ಕೈಗಾರಿಕೆಗಳಲ್ಲಿ ರೆಡಿ ಮಾಡಿಕೊಂಡುಬಿಡ್ತೀವಿ. ತಂದು ಎಲ್ಲ ಫಿಕ್ಸ್ ಮಾಡಿಕೊಳ್ತೀವಿ ಎಂದರು ಅದೆಂಥಾ ಮನೆ ಸ್ವಾಮಿ.

ಶ್ರೀ ಡಿ.ಬಿ. ಚಂದ್ರೇಗೌಡ : ಪ್ರೀ ಪ್ಯಾಬ್ರಕೇಟೆಡ್

ಶ್ರೀ ವಾಟಾಳ್ ನಾಗರಾಜ್ : ನನಗೆ ಗೊತ್ತಾಗಲ್ಲ ಆದರೆ, ನಮ್ಮಲ್ಲಿ ಬಂದು, ನೀವು ಇಟ್ಟಿಗೆ ಸಿಮೆಂಟ್ ಹಾಕುವುದಿಲ್ಲವೇ ಎಂದು ಕೇಳಿದೆ ಅದೇನಿಲ್ಲ ಎಲ್ಲ ರೆಡಿ ಮಾಡಿಬಿಡ್ತೀವಿ, ನೀವು ಹೇಳಿದಂತೆ ಚೆಕ್ ಚೆಕ್ ತಂದಿಡ್ತೀವಿ ಅಂತ ಹೇಳಿದರು. ಇದೇನು ಯಾವುದೋ ಮಾಯ ಮಂತ್ರ ಇರಬಹುದೇ ಸರ್ಕಾರದಲ್ಲಿ. ಇದೇನ್ ಸ್ವಾಮಿ? ಈ ತರಹ ಎಂತಹ ಯೋಜನೆ ಮಾಡಿದಿವಿ ನೋಡಿ.

ಶ್ರೀ ಎಸ್. ಬಂಗಾರಪ್ಪ : ಗುದ್ದಲಿಪೂಜೆ ಅದೂ ಇದೂ ಎಂಥಾದ್ದು ಇಟ್ಟಿಲ್ಲ ನೀವು. ಪಾಪ ನೀವು ಕಾಯ್ತಾಯಿದ್ರಿ ಅಂತ ಕಾಣ್ತದೆ.

ಶ್ರೀ ವಾಟಾಳ್ ನಾಗರಾಜ್ : ಇನ್ನೂ ಇದೆ. ನಾನು ಕಾಲಾವಕಾಶ ಇದ್ರೆ ಬರ್ತೀವಿ ಅಂತ ಹೇಳಿದ್ದೇನೆ. ನಾನೇನು ತಿಳಿದುಕೊಂಡೆ, ಏನು ಬೆಂಕಿಪೊಟ್ಟಣ ಏನೋ ಅಂತ. ಇದು ಮನೆ ಹೇಗೆ ಕಟ್ತೀರಿ ಅಂತ ಕೇಳಿದೆ ನಾನು ಏನು ಇಟ್ಟಿಗೆ ಇಲ್ಲವೇ, ಸಿಮೆಂಟ್ ಇಲ್ಲವೇ ಮರಳು ನೀರು ಇಲ್ಲವೇ ಅಂತ. ಅದಕ್ಕೆ ಅವರು ಹೇಳಿದರು ಇಲ್ಲ ಸ್ವಾಮಿ. ನಾವು ಎಲ್ಲ ರೆಡಿ ಮಾಡಿಟ್ಟುಕೊಂಡಿದ್ದೇವೆ. ನೀವು ಹೇಳಿದ ಹಾಗೆ ಸಾವಿರ ಮನೆ ಮ್ಯಾಜಿಕ್ ತರ, ಸಿನಿಮಾಗಳಲ್ಲಿ ಸೆಟ್ ಜೋಡಿಸ್ತಾರಲ್ಲ ಹಾಗೆ ಅಂತ ಅನ್ನಿಸ್ತು ನನಗೆ. ಇನ್ನೂ ನೋಡಿಲ್ಲ, ನೋಡೋಣ. ಅದು ಮಳೇಲಿ ಉಳೀತಿದೋ, ಜನಗಳು ಉಳಿತಾರೋ, ಯಾಶ್ಯಾರ ಮೈಮೇಲೆ ಬೀಳುತ್ತೋ, ನೋಡೋಣ ಹಣೇಬರಹ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವೇನೋ ಟೋಪಿ ಹಾಕಿಕೊಂಡಿದ್ದೀರಿ. ಖಾಲಿ ತಲೆ ಇರೋರ ಗತಿಯೇನು? ನಮಗೆ? ಒಂದು ವೇಳೆ ಮನೇಸಾದರೂ ಇಲ್ಲಿವರೆಗೂ ಕಟ್ಟಿದ್ದಾರೋ ಇಲ್ಲವೋ? ರಾಜುಗೌಡರಿಗೆ ಮನೆ ಕೊಟ್ಟು ನಮಗ್ಯಾಕೆ ಕೊಟ್ಟಿಲ್ಲ. ಅಕ್ಷಯ ಕಾರ್ಯಕ್ರಮದಲ್ಲಿ ರೂಪಾಯಿ ಕೊಡೋ ಕೆಲಸ. ಶ್ರೀಮತಿ ಮೋಟಮ್ಮನವರು ನಿನ್ನೆ ಹೇಳಿದರು. ನೀವು ಚೆಡ್ಡಿ ಅಂಗಿ ಕೊಟ್ಟಿದ್ದಕ್ಕಿಂತ ಚೆನ್ನಾಗಿದೆ ಕಾರ್ಯಕ್ರಮ ಎಂದು.

ಚೆಡ್ಡಿ ಅಂಗಿಯನ್ನು ಕೊಟ್ಟಿದ್ದು ಕಾಣುತ್ತಿತ್ತು. ಪುಸ್ತಕವನ್ನು ಕೊಟ್ಟಿದ್ದು ಕೂಡ ಕಾಣುತ್ತಿತ್ತು. ನೀವು ಕೊಟ್ಟ ಒಂದು ರೂಪಾಯಿ ಅದನ್ನು ತೆಗೆದುಕೊಂಡು ಬೀಡಿಯನ್ನು ಸೇದುವುದಕ್ಕೂ ಹೋಗಬಹುದು. ಒಂದು ಪತ್ರಿಕೆಯಲ್ಲಿ ಚಿನಕುರುಳಿಯನ್ನು

ನೋಡಿದೆ. ಈ ರೂಪಾಯಿಯನ್ನು ನೀನು ಅಪ್ಪನ ಕೈಯಲ್ಲಿ ಕೊಡಬೇಡ. ಬೀಡಿಯನ್ನು ಸೇದುತ್ತಾನೆ ಎಂದು ಹೇಳಿತು. ಆ ಹುಡುಗ ಏನು ಹೇಳುತ್ತಾನೆ ಎಂದರೆ ನಾನು ಅಪ್ಪನ ಕೈಯಲ್ಲಿ ಏತಕ್ಕೆ ಕೊಡಲಿ, ನಾನೇ ಸೇದುತ್ತೇನೆ ಎಂದು ಹೇಳುತ್ತಾನೆ.

ಶ್ರೀಮತಿ ಮೋಟಮ್ಮ : ಮಾನ್ಯ ಉಪಾಧ್ಯಕ್ಷಿಣಿಯವರೇ, ನಾವು ಒಂದು ರೂಪಾಯಿಯನ್ನು ಕೊಟ್ಟಿರುವುದು ಪ್ರತಿ ಮಗುವಿಗೂ ಪ್ರತಿ ದಿನ ಶಾಲೆಗೆ ಬರಬೇಕು. ತಪ್ಪದೇ ಅದು ಒಂದು ಕಲಿಯಬೇಕು ಎನ್ನತಕ್ಕಂಥ ದೃಷ್ಟಿಯಿಂದ ಸಿಗರೇಟನ್ನು ಸೇದುವುದಕ್ಕೆ ಅಪ್ಪನಿಗೆ ಕೊಡುತ್ತಾನೆ ಎನ್ನುವ ಇಂಟೆನ್ಷನ್ನನ್ನು ಇಟ್ಟು ನಾವು ಕೊಟ್ಟಿಲ್ಲ. ಆದುದರಿಂದ ಇದು ಹೆಚ್ಚಾಗಿ ಉಪಯೋಗವಾಗುತ್ತಿದೆ ಎಂದು ತಿಳಿದುಕೊಂಡಿದ್ದೇನೆ. ಈ ದೃಷ್ಟಿಯಿಂದಲಾದರೂ ಮಕ್ಕಳು ಶಾಲೆಗೆ ಬರುತ್ತಾರೆ ಎನ್ನತಕ್ಕಂಥ ದೃಷ್ಟಿಯಿಂದ ನಾವು ಕೊಟ್ಟಿರುವುದು?

ಶ್ರೀ ಡಿ.ಬಿ. ಚಂದ್ರೇಗೌಡ : ಇಷ್ಟು ಸಣ್ಣ ವಿಚಾರ ನನಗೆ ತಿಳಿಯುವುದಿಲ್ಲವೇ? ನನಗೂ ತಿಳಿಯುತ್ತದೆ. ರೂಪಾಯಿಯನ್ನು ನೀವು ಎಷ್ಟು ಜನರಿಗೆ ಕೊಟ್ಟಿದ್ದೀರಿ? ರೂಪಾಯಿಯನ್ನು ಎಷ್ಟು ಜನರಿಗೆ ನೀವು ಕೊಟ್ಟಿದ್ದೀರಿ ಎಂದು ಹೇಳಿ. ನನ್ನ ಕ್ಷೇತ್ರದಲ್ಲಿ ಈ ಒಂದು ರೂಪಾಯಿ ಇದುವರೆಗೂ ಯಾರಿಗೂ ವಿತರಣೆ ಆಗಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಇವತ್ತು ಒಂದು ರೂಪಾಯಿಯನ್ನು ಕೊಟ್ಟರೆ ಭಿಕ್ಷುಕರು ಕೂಡ ತೆಗೆದುಕೊಳ್ಳುವುದಿಲ್ಲ. ಗಾಂಧೀನಗರದಲ್ಲಿ ಒಂದು ರೂಪಾಯಿ ಭಿಕ್ಷೆಯಾಗಿ ಭಿಕ್ಷುಕರಿಗೆ ಕೊಟ್ಟರೆ ಅವರು ತೆಗದುಕೊಳ್ಳುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, 60 ಸಾವಿರ ಮನೆಗಳನ್ನು ಅಂಬೇಡ್ಕರ್ ಹೆಸರಿನಲ್ಲಿ ಕಟ್ಟಿಸುತ್ತೇವೆ. ಇಂಥ ದೊಡ್ಡ ಮನುಷ್ಯನನ್ನು ಇಲ್ಲಿ ತಂದು ಕರ್ನಾಟಕ ರಾಜ್ಯದಲ್ಲಿ ಹರಾಜು ಹಾಕಿದಿರಲ್ಲಾ ಬಸವಲಿಂಗಪ್ಪನವರೇ. ಅವರ ಹೆಸರನ್ನು ಏತಕ್ಕೆ ಹೇಳಿದ್ದೀರಿ ನೀವು. 14 ನೇ ಏಪ್ರಿಲ್‌ಗೆ ಶತಮಾನೋತ್ಸವ ಮುಗಿಯಿತ್ತದೆ. ಆ ಮನುಷ್ಯನನ್ನು ತಂದು ಇಲ್ಲಿ ಬೀದಿಗೆ ಎಳೆದರು. ಅವರ ಹೆಸರನ್ನು ಹೇಳಿ ಈ ರೀತಿ ಮಾಡಿದಿರಿ. ನಮಗೆ ಇದನ್ನು ಸಹಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ, 60 ಸಾವಿರ ಮನೆ ಅವರ ಹೆಸರಿನಲ್ಲಿ, ಅವರ ಹೆಸರಿನಲ್ಲಿ ಮನೆಯೂ ಇಲ್ಲ, ಇವರ ಹೆಸರಿನಲ್ಲಿ ಮನೆಯೂ ಇಲ್ಲ. ನನ್ನ ಅಂದಾಜಿನ ಪ್ರಕಾರ ಈ ಮನೆಗಳನ್ನು ಕಟ್ಟುವುದಕ್ಕೆ 372 ಕೋಟಿ ರೂಪಾಯಿಗಳು ಬೇಕಾಗುತ್ತದೆ.

ಶ್ರೀ ಆರ್. ದಯಾನಂದರಾವ್ : ಮಾನ್ಯ ರೆಡ್ಡಿಯವರೇ, ಗಾಂಧೀನಗರದಲ್ಲಿ ಯಾರೂ ಭಿಕ್ಷುಕರು ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : 372 ಕೋಟಿ ರೂಪಾಯಿ ಕೊಡಬೇಕು. ಅದಕ್ಕೆ ಪ್ರಾವಿಷನ್ ಎಲ್ಲಿದೆ? ಡಾ ಅಂಬೇಡ್ಕರ್‌ರವರ ಜನ್ಮಶಾತಬ್ದಿಯ ಹೆಸರಿನಲ್ಲಿ 60 ಸಾವಿರ ಮನೆಯಲ್ಲಿ ಎಷ್ಟನ್ನು ಕಟ್ಟಿದ್ದೀರಿ ಎಂದು ಹೇಳಿ. ಏತಕ್ಕೆ ಇಂಥ ಬೋಗಸ್ ಕಾರ್ಯಕ್ರಮಗಳನ್ನು ಪ್ರಸಿದ್ಧಿಪಡಿಸುತ್ತೀರಿ? ಜನರಿಗೆ ಏತಕ್ಕೆ ಮೋಸವನ್ನು ಮಾಡುತ್ತೀರಿ? ಇದು ನನ್ನ ಪ್ರಶ್ನೆ. ಜೊತೆಗೆ ರಾಷ್ಟ್ರದ ಮಾಹಾನ್ ವ್ಯಕ್ತಿಗಳನ್ನು ತಂದು ಬೀದಿಯಲ್ಲಿ ಹರಾಜು ಹಾಕುತ್ತೀರಿ. ಅವರ ಪಾಡಿಗೆ ಅವರು ಈ ದೇಶಕ್ಕಾಗಿ ಮಾಡಬೇಕಾದಂಥ ಸೇವೆಯನ್ನು ಮಾಡಿದರು. ಜನಜಾಗ್ರತಿಯನ್ನು ಉಂಟು ಮಾಡಿದರು. ಶೋಷಿತ ಜನಾಂಗಕ್ಕೆ ಒಂದು ದೊಡ್ಡ ಸೇವೆಯನ್ನು ಮಾಡಿದರು. ಅವರ ಹೆಸರನ್ನು ಈ ರೀತಿ ಬೀದಿಯಲ್ಲಿ ಏತಕ್ಕೆ ಹರಾಜು ಹಾಕುತ್ತೀರಿ?

ತಾವು ಅವರಿಗೆ ಬುದ್ಧಿಯನ್ನು ಹೇಳುವುದಕ್ಕಾಗುವುದಿಲ್ಲವೇ? ಕಳೆದ ಸಾರಿ ಮಲೆನಾಡು ಅಭಿವೃದ್ಧಿ ಪ್ರಾಧಿಕಾರ ರಚನೆಯ ಆಶ್ವಾಸನೆಯನ್ನು ಕೊಟ್ಟರು. ಇದುವರೆಗೂ ಶಾಸನಬದ್ಧ ಅಭಿವೃದ್ಧಿ ಮಂಡಲಿಯಾಗಿಲ್ಲ. ನಮಗೆ ಜಾಲಪ್ಪನವರ ಕೈಯಲ್ಲಿ ಬೈಗುಳ. ನೀವೇನ್ರಿ, ನೀವು ಎಲ್ಲಾ ಮಲೆನಾಡಿನಲ್ಲಿ ಸೇರಿಕೊಂಡು ಅಭಿವೃದ್ಧಿ ಮಂಡಲಿಯನ್ನು ಮಾಡಿದ್ದೀರಿ. ಹತ್ತು ಕೋಟಿ ರೂಪಾಯಿ ಸ್ವಾಮಿ. ಆದರೆ ಹತ್ತು ರೂಪಾಯಿ ಕೂಡ ಬರಲಿಲ್ಲ. ಈ ವರ್ಷ ಇನ್ನೂ ಮಂಡಲಿಯ ಶಾಸನಬದ್ಧ ಅಭಿವೃದ್ಧಿ ಪ್ರಾಧಿಕಾರ ಆಗಲಿಲ್ಲ. ಮಂಡಲಿಯ ರಚನೆಯಾಗಲಿಲ್ಲ. ಆದುದರಿಂದ ಈ ಭರವಸೆ ಹಾಗೆಯೇ ಉಳಿದುಬಿಟ್ಟರೆ ಹೇಗೆ? ಈ ಸಾರಿ ವಿಪರೀತ ಮಳೆ. ಮಲನಾಡಿನಲ್ಲಿ ಒಂದು ರಸ್ತೆಗಳಲ್ಲೂ ಓಡಾಡುವಂತಿಲ್ಲ. ಅದನ್ನು ನೀವು ನೋಡಿದ್ದೀರಿ. ಅನುಭವಿಸಿದ್ದೀರಿ. ಯಾವುದೇ ಅಭಿವೃದ್ಧಿ ಕಾರ್ಯ ಆಗಲಿಲ್ಲ. ಮಂಡಲಿಯ ರಚನೆಯಾಗಲಿಲ್ಲ. ಈ ಕೋಲಾರ ಜಿಲ್ಲೆಯೊಳಗೆ 40 ಸಾವಿರ ಮನೆಗಳು ಕುಸಿದುಹೋದವು. ಮನೆಗಳನ್ನು ಕಟ್ಟಿಸಿಕೊಡುತ್ತೇವೆ ಎಂದು ಹೇಳಿದ್ದೆ ಹೇಳಿದ್ದುದು. ಆಶ್ರಯ ಯೋಜನೆಯೊಳಗೆ ತನ್ನಿ ಎಂದು. ನನಗೆ ಗೊತ್ತಿಲ್ಲ. ಕೋಲಾರದವರು ಯಾರಾದರೂ ಹೇಳಬೇಕು. ಎಷ್ಟು ಮನೆಗಳನ್ನು ಕಟ್ಟಿಸಿದ್ದಾರೆ ಎಂದು ಹೇಳಿಲಿ.

ಶ್ರೀ ಸಿ. ಬೈರೇಗೌಡ : ಒಂದು ಮನೆಯೂ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ಮನೆಯೂ ಇಲ್ಲ. ಕೆಲವರು ಏನೋ ಮನೆಯನ್ನು ಕೊಡುತ್ತಾರೆ ಎಂದು ಹೇಳಿ ಇದ್ದ ಮಣ್ಣುಗೋಡೆಯನ್ನು ನೆಲಸಮ ಮಾಡಿದರು. ಈಗ ಮಣ್ಣುಗೋಡೆ ಜಾಗದಲ್ಲಿ ಮಲಗುವ ಹಾಗೂ ಇಲ್ಲ. ಅವರಿಗೆ ಮನೆಯೂ ಕೂಡ ಇಲ್ಲ. ಮಣ್ಣು ಗೋಡೆ. ಚಾವಣಿ ಹೋದಮೇಲೆ ಗೋಡೆ ಬಿದ್ದಿರುತ್ತದಲ್ಲಾ, ಆ ಗೋಡೆಗೆ ಸೋಗೆ ಗೀಗೆ ಹಾಕಿ ಏನೋ ಒಂದು ತರಹ ಮಾಡಿಕೊಳ್ಳುತ್ತಿದ್ದರು. ಇವರು ಏನೋ ಮನೆಯನ್ನು ಕೊಡುತ್ತಾರೆ ಎಂದು ಹೇಳಿದರು. ಅದಕ್ಕೆ ಸೈಟಾದರೂ ಬೇಕಲ್ಲಾ. ಅದಕ್ಕೋಸ್ಕರವಾಗಿ ನೆಲಸಮ ಮಾಡಿದರು. ಈಗ ಅದೂ ಇಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಆಶ್ರಯ ಹಕ್ಕುಪತ್ರದಲ್ಲಿ ಹಿಂದು ಗಡೆ ಹೊರಡಿಸಿ ಬ್ಯಾಂಕ್‌ನಲ್ಲಿ ಅದನ್ನು ಅಡವಿಟ್ಟರೆ ಹತ್ತು ಸಾವಿರ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ನಾನು ಬ್ಯಾಂಕ್ ಮ್ಯಾನೇಜರ್‌ಗೆ ಹತ್ತು ಸಾವಿರ ರೂಪಾಯಿಗಳನ್ನು ಕೊಡುತ್ತೀರಾ ಎಂದು ಕೇಳಿದೆ. ಯಾವ ಆಧಾರಮೇಲೆ ಕೊಡೋಣ ಎಂದು ಹೇಳುತ್ತಾರೆ. ಆಶ್ರಯ ಹಕ್ಕುಪತ್ರವನ್ನು ಬ್ಯಾಂಕ್‌ನಲ್ಲಿ ಇದನ್ನು ಅಡವಿಟ್ಟರೆ ಹತ್ತು ಸಾವಿರ ರೂಪಾಯಿಗಳನ್ನು ಬ್ಯಾಂಕ್‌ನಲ್ಲಿ ಒತ್ತೆಇಟ್ಟರೆ ಕೊಡುತ್ತಾರೆ ಎಂದು ಹೇಳಿದ್ದೀರಿ. ಹತ್ತು ಸಾವಿರ ರೂಪಾಯಿಗಳನ್ನು ಯಾವ ಬ್ಯಾಂಕ್‌ನಲ್ಲಿ ಕೊಡುತ್ತಾರೆ ಎಂದು ಹೇಳಿ ಸ್ವಾಮಿ?

ಮಾನ್ಯ ಅಧ್ಯಕ್ಷರೇ, ನೀರಾವರಿಯ ಬಗ್ಗೆ ಹೆಚ್ಚು ವತ್ತನ್ನು ಕೊಡತಕ್ಕ ಮತ್ತು ಕೃಷ್ಣ ಮೇಲ್ದಂಡೆ ಯೋಜನೆಯ ಪ್ರಾಧಿಕಾರದ ರಚನೆ. ಈ ಪ್ರಾಧಿಕಾರದ ರಚನೆಗೆ ಸ್ವಾಗತಾರ್ಹ. ಆದರೆ ಮಲೆನಾಡು ಅಭಿವೃದ್ಧಿ ಪ್ರಾಧಿಕಾರದಷ್ಟು ಗತಿ ಇದಕ್ಕೆ ಬಿಡಬಾರದು. ಸುಮಾರು 734 ಟಿಎಂಸಿ ಎಷ್ಟು ನೀರನ್ನು 2 ಸಾವಿರ ಇಸವಿಯೊಳಗೆ ಬಳಕೆ ಮಾಡತಕ್ಕ ಒಂದು ಪ್ರಯತ್ನ ಪ್ರಯೋಗ. ಇದಕ್ಕೆ ಒಂದು ದೊಡ್ಡ ಪ್ರಾಧಿಕಾರ. ಇದಕ್ಕೆ ಒಂದು ದೊಡ್ಡ ಪ್ರಾಧಿಕಾರ ಮಾಡಿ ಅದರ ಉಸ್ತುವಾರಿಯನ್ನು ಪುನಃ ಆಡಳಿತಾಧಿಕಾರಿಯವರ ಕೈಯಲ್ಲಿ ಕೊಟ್ಟು ಮತ್ತೆ ಕಂಟ್ರಾಕ್ಟರುಗಳು ಕೋರ್ಟಿಗೆ ಹೋಗಿ, ಈ ವರ್ಷ ಆಗುವ ಕೆಲಸಕ್ಕೆ ಇನ್ನೂ ಹತ್ತು ವರುಷವೋ ಇಪ್ಪತ್ತು

ವರ್ಷವೋ ತಡೆಹಿಡಿಯತಕ್ಕ ಕೆಲಸ ಆಗದ ಹಾಗೆ ನೋಡಿಕೊಳ್ಳಬೇಕು. ಭೂಸ್ವಾಧೀನದ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಕಂಟ್ರಾಕ್ಟರುಗಳು ಹೊಡೆಯುತ್ತಿದ್ದಾರೆ. ನೀವು ಆಶ್ರಯ ಯೋಜನೆಗೆ ಮಾಡಿದ ಹಾಗೆ ಮಾಡಿ, ಇಲ್ಲದಿದ್ದರೆ ಅದಕ್ಕೆ ಎಷ್ಟು ಬೆಲೆ ಆಗುತ್ತದೆ ಅಷ್ಟನ್ನು ಕೊಟ್ಟು ಕೊಂಡುಬಿಡಿ, ಕಂಟ್ರಾಕ್ಟರುಗಳ ಶಾಪದಿಂದ ಕೃಷ್ಣ ಮೇಲ್ದಂಡೆ ಯೋಜನೆಯನ್ನು ವಿಮುಕ್ತ ಮಾಡಿ ಇಲ್ಲದಿದ್ದರೆ ಆ ಕೆಲಸ ಆಗುವುದಿಲ್ಲ.

ಶ್ರೀ ಜಿ. ರಾಜೂಗೌಡ : ನಮ್ಮ ಯೋಜನೆಗಳ ಬಗ್ಗೆ ನಿಮ್ಮ ದೃಷ್ಟಿ ಹೇಗೆ ಇದೆ ಅಂದರೆ ಒಂದು ದುಷ್ಟಾಂತರ ಮೂಲಕ ಹೇಳಬೇಕಾಗುತ್ತದೆ. ಲಕ್ಷ್ಮೀಶ ಕವಿ ಒಂದು ಕಡೆ ಹೇಳಿದ್ದಾನೆ.

ಕೆನೆವಾಲ ಕಡೆದು ಭಾಯ್ದಿನಿಯಾಗಿ ಸವಿಯದೆ, ಅದರೊಳಗೆ ಪುಳಿವಿಡಿದು ರಸಂ ಕೆಡಿಸಿದೊಡೆ. ಕರದೆ ಸುರಬಿಗಪ್ಪುದೇ ಕೊರೆತೆ"

ಹಾಲನ್ನು ಕರೆದು ಬೆಣ್ಣೆಯನ್ನು ತೆಗೆದು ಸವಿಯದೆ ಬಿಟ್ಟು ಅದರೊಳಗೆ ಉಳಿಯನ್ನು ಹಿಂಡಿ ಕೆಡಿಸಿದರೆ ಆ ಹಾಲನ್ನು ಕರೆದ ಸುರಬಿಯದು. ತಪ್ಪೇ ನಾವು ಮಾಡತಕ್ಕ ಯೋಜನೆ ಒಳ್ಳೆಯದೆಂದು ಕಂಡರೆ ಅದರಲ್ಲಿ ಪ್ರತಿಯೊಂದನ್ನು ತಪ್ಪು ಹಿಡಿಯುತ್ತಾ ಹೋದರೆ ನಾವು ಅದಕ್ಕೆ ಏನು ಹೇಳಬೇಕು? ದಯಮಾಡಿ ಯಾವ ಸರ್ಕಾರ ಮಾಡಿದೆ ಹೇಳಿ. ಆಶ್ರಯ ಯೋಜನೆಯೊಳಗೆ ಒಂದೊಂದು ಕ್ಷೇತ್ರಕ್ಕೆ, ಒಂದೊಂದು ಸಾವಿರ ಮನೆಗಳನ್ನು ಯಾವ ಸರ್ಕಾರ ಕೊಟ್ಟಿತ್ತು. 144 ಕೋಟಿ ರೂಪಾಯಿ ಖರ್ಚಾಗಿದೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಹೇಳುತ್ತಾ ನಿಮ್ಮ ತಲೆ ಬೆಳ್ಳಗಾಗಿ ಹೋಯಿತೇ ಹೊರತು ಅವರಿಗೆ ಮನೆ ಸಿಕ್ಕಿಲ್ಲ.

ಶ್ರೀ ಜಿ. ರಾಜೂಗೌಡ : ಒಂದು ತಿಂಗಳು ಕಾಲಾವಕಾಶ ಕೊಡಿ. ಪ್ರವಾಸ ಮಾಡಿ ನೋಡಿ. ಗೊತ್ತಾಗುತ್ತದೆ.

ಶ್ರೀ ಎಸ್.ಹೆಚ್. ಕೌಜಲಗಿ : ಇನ್ನು ಜನತಾ ಮನೆ ಕಟ್ಟಿದ. ಬಾಕಿ ಹಣವನ್ನು ಕೊಟ್ಟಿಲ್ಲ.

ಶ್ರೀ ಆರ್.ಎನ್. ನಾಯಕ್ : ನಮ್ಮ ಸರ್ಕಾರ ಬಂದು ಎರಡೂವರೆ ವರ್ಷ ಆಗುತ್ತಾ ಬಂದಿದೆ

(ಗೊಂದಲ)

ಶ್ರೀ ಎಂ. ಮಹಾದೇವ್ : ನಿಮ್ಮ ಕೈಯಲ್ಲಿ ಏಳು ವರ್ಷ ಸರ್ಕಾರ ಕೊಟ್ಟು 10 ಸೈಟನ್ನು ಹಂಚಲಿಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲ. ನಾವು ಅತಿ ಶೀಘ್ರದಲ್ಲಿ ಅಂದರೆ ಎರಡು ತಿಂಗಳಲ್ಲೆ ಸಾವಿರಾರು ಸೈಟುಗಳನ್ನು ಹಂಚಿದ್ದೇವೆ. ನಿಮ್ಮ ಕೈಯಲ್ಲಿಯೇ ಕೊಟ್ಟು ಹಂಚಿದ್ದೇವೆ. ಹೀಗೆ ಏಕೆ ಈ ರೀತಿಯಾಗಿ ಸುಳ್ಳನ್ನು ಹೇಳುತ್ತಿದ್ದೀರಿ?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷಣೆಯವರೇ, ಈ ಅಪ್ಪರ್ ತುಂಗಾ ಅಥವಾ ಬಚಾವತ್ ಅವಾರ್ಡನಂತೆ ಎರಡು ಸಾವಿರ ಇಸವಿಯೊಳಗೆ ನಾವು ಬಳಕೆ ಮಾಡಿಕೊಳ್ಳಬೇಕಾದಂತಹ 734 ಟಿಎಂಸಿ ಅಷ್ಟು ನೀರನ್ನು ಬಳಕೆಗೆ

ಬೇಕಾದಂತಹ ಪೂರಕ ಸಿದ್ಧತೆಗಳನ್ನು ರಾಜಕಾರಣ ಹೆಸರಿನಲ್ಲಿ ಹಿಂದೂಡಬೇಡಿ ಎಂದು ಹೇಳುತ್ತೇನೆ. ನೀರಾವರಿಗೆ ಸಂಬಂಧಪಟ್ಟಹಾಗೆ ತುಂಗ ಮೇಲ್ದಂಡೆ ಯೋಜನೆಗೆ ಆಸ್ಥಿಭಾರವನ್ನು ಹಾಕಿದ್ದಾರೆ. ನಾನು ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ಇದಕ್ಕೆ ಉತ್ತರ ಬಂದಿದೆ. 1990-91ರ ಅಂದಾಜಿನ ಪಟ್ಟಿಯಲ್ಲಿ ಇದಕ್ಕೆ ತಗಲ ತಕ್ಕ ವೆಚ್ಚ ಎಷ್ಟು ಎಂದರೆ 382 ಕೋಟಿ 40 ಲಕ್ಷ ರೂಪಾಯಿಗಳು. ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ದೊರೆತಿದೆಯೇ? ಇಲ್ಲ ರಾಜ್ಯದ ಆಯವ್ಯಯದಲ್ಲಿ ಇದನ್ನು ಪ್ರಕಟಿಸಿದ್ದೀರಾ? ಇಲ್ಲ ಸೆಂಟ್ರಲ್ ವಾಟರ್ ಕಮಿಷನ್ ಕ್ಲಿಯರೆನ್ಸ್ ಕೊಟ್ಟಿದೆಯೋ ಅಂದರೆ ಇಲ್ಲ. ಪ್ಲಾನಿಂಗ್ ಕಮೀಷನ್ ಒಪ್ಪಿಕೊಂಡಿದ್ದಾರೋ ಅಂದರೆ ಇಲ್ಲ. ರಾಜ್ಯಪಾಲರ ಭಾಷಣದಲ್ಲಾದರೂ ಪ್ರಸ್ತಾಪ ಇದೆಯೋ ಅಂದರೆ ಇಲ್ಲ. ಇಷ್ಟೊಂದು ದೊಡ್ಡ ಅಂದಾಜು ಏಕೆ ಹಾಕಿದ್ದೀರಿ? ಶಿಲಾನ್ಯಾಸವನ್ನು ಏತಕ್ಕೆ ಮಾಡಿದ್ದೀರಿ? ಮಾಡಿದ್ದು ಏಕೆಂದರೆ ಧಾರವಾಡ ಜಿಲ್ಲೆಯಲ್ಲಿ ಉಪಚುನಾವಣೆ ಗೆಲ್ಲುವುದಕ್ಕೆ 382ಕೋಟಿ ರೂಪಾಯಿಯನ್ನು ಶಿಲಾನ್ಯಾಸ ಮಾಡಿದ್ದಾರೆ. ಇಂತಹ ಮೋಸ ಮಾಡತಕ್ಕ ಕೆಲಸವನ್ನು ದಯಮಾಡಿ ಮಾಡಬೇಡಿ ಎಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಭದ್ರಬಲದಂಡೆ ನಾಲೆ ಹೊಡೆದು ಅವಲಂಬಿಸಿದ ರೈತಾಪಿ ವರ್ಗಕ್ಕೆ ತೊಂದರೆಯಾಗಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ ಅಂದರೆ ಬಂದಿದೆ. ಹಾಗಿದ್ದಲ್ಲಿ ಭದ್ರ ಬಲದಂಡೆ ನಾಲೆಯನ್ನು ದುರಸ್ತಿ ಪಡಿಸಲು ಸರ್ಕಾರ ಕೈಗೊಂಡ ಕ್ರಮವೇನು? ಎಂದು ಕೇಳಿದ್ದಕ್ಕೆ, ನಾಲೆಯ ಖಾಯಂ ದುರಸ್ತಿ ಕೆಲಸವು ಪೂರ್ಣವಾಗುವರೆಗೆ ಅದರ ಕೆಳಗಿನ ಕ್ಷೇತ್ರಕ್ಕೆ ನೀರನ್ನು ಒದಗಿಸುವ ಕೆಲಸವನ್ನು ಕೈಗೊಳ್ಳಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಹೇಗೆ? ನಾಲೆಯ ಖಾಯಂ ದುರಸ್ತಿ ಬಗ್ಗೆ ಇನ್ನು ರೂಪು ರೇಷೆಗಳನ್ನು ತಯಾರಿಸುತ್ತಿದ್ದೀರಿ. 97 ಲಕ್ಷ ಹೆಕ್ಟೇರ ಭೂಮಿಗೆ ನೀರು ಕೊಡತಕ್ಕಂಥ ಅರ್ಥಾತ್ ಸುಮಾರು ಎರಡೂವರೆ ಲಕ್ಷ ಎಕರೆಗೆ ನೀರನ್ನು ಕೊಡತಕ್ಕಂಥ ಭದ್ರಾ ಬಲದಂಡೆ ನಾಲೆ ಒಡೆದುಹೋಗಿದೆ. ಅಲ್ಲಿಯೇ ಪಕ್ಕದಲ್ಲಿ ಒಂದು ಸ್ಯಾಡಲ್ ಡ್ಯಾಮ್ ಇತ್ತು. ನಾನು ಮಾರ್ಚಿ ತಿಂಗಳ ಕೊನೆಯಲ್ಲಿ ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಆ ಡ್ಯಾಮ್‌ನ್ನು ಓಪನ್‌ಮಾಡಿದಾಗ 171-172 ಲೆವೆಲ್‌ವರೆಗೆ ನೀರು ನಿಂತುಹೋಗುತ್ತದೆ. ಆ ಪ್ರದೇಶದಲ್ಲಿ ಬೆಳೆಯತಕ್ಕಂಥ ಬೆಳೆಗಳಾದ ಕಬ್ಬು, ಭತ್ತ, ರಾಗಿ, ಜೋಳ ಮತ್ತು ಶಾಶ್ವಾತ ಬೆಳೆಗಳಾದ ತೆಂಗು, ಅಡಿಕೆ, ಮಾವು, ಹಲಸು ಇತ್ಯಾದಿ ಬೆಳೆಗಳು ಸತ್ತುಹೋಗುತ್ತವೆ. ಇದರ ತಾತ್ಕಾಲಿಕ ವ್ಯವಸ್ಥೆಗಾಗಿ ಈಗಾಗಲೇ 5 ಕೋಟಿ 30 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಖಾಯಂ ದುರಸ್ತಿಯ ರೂಪು ರೇಷೆಗಳೇನು? ಇದಕ್ಕೆ ಖರ್ಚಾಗಿರತಕ್ಕಂಥ ಹಣ ಎಷ್ಟು? ನಾನು ಜರ್ಮನ್-ಇಂಡಿಯಾ ಕಂಪನಿಯ ತಜ್ಞರುಗಳನ್ನು ಭೇಟಿ ಮಾಡಿ ಕೇಳಿದಾಗ ಅವರು ಈ ಕೆಲಸವನ್ನು ನಮಗೆ ವಹಿಸಿಕೊಟ್ಟರೆ ಸುಮಾರು 10 ಕೋಟಿ ರೂಪಾಯಿಯ್ಯೊಳಗೆ - 3 ತಿಂಗಳೊಳಗೆ ಮುಗಿಸುತ್ತೇವೆಂದು ಹೇಳಿದ್ದಾರೆ. ಈ ಕೆಲಸ ಪೂರ್ಣವಾಗುವುದಕ್ಕೆ ಇನ್ನೆಷ್ಟು ದಿವಸಗಳು ಬೇಕಾಗುತ್ತದೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ವಿರೋಧಪಕ್ಷದ ನಾಯಕರು ಅದೇ ಭಾಗದಿಂದ ಬಂದಂಥವರು. ಇದರ ಬಗ್ಗೆ ನಾವು - ಹಲವಾರು ದೊಡ್ಡ ದೊಡ್ಡ ಕಂಟ್ರಾಕ್ಟರ್‌ಗಳನ್ನು ಸಂಪರ್ಕಿಸಿದ್ದೇವೆ. ತಮಗೇನಾದರೂ ಜರ್ಮನ್-ಇಂಡಿಯಾ ಕಂಪನಿಯವರು ಮೂರು ತಿಂಗಳೊಳಗೆ ಒರಿಜಿನಲ್ ಚಾನೆಲ್ ಪ್ರಕಾರ ಕೆಲಸವನ್ನು ಮುಗಿಸಿಕೊಡುತ್ತೇವೆಂದು ಹೇಳಿದರೆ ನಾಳೆ ಅವರನ್ನು ಕರೆದುಕೊಂಡು ಬನ್ನಿ. ನಾವು ಅವರಿಗೆ ಕಾಂಟ್ರಾಕ್ಟ್ ಕೊಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಕೆಲಸ ಮಾಡುವವರಿಗೆ ಏಜೆಂಟರಲ್ಲ. ನಿಮಗೆ ನಾವು ತಿಳಿಸುತ್ತೇವೆ. ಅವರನ್ನು ಕರೆಯಿಸಿಕೊಳ್ಳಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಾನು ನಿಮ್ಮನ್ನು ಏಜೆಂಟ್ ಎಂದು ಹೇಳಲಿಲ್ಲ. ಈಗಾಗಲೇ ಅಲ್ಲಿರತಕ್ಕಂಥ 300 ಕೋಟಿ ರೂಪಾಯಿಗಳ ಬೆಳೆಯನ್ನು ಉಳಿಸಲಿಕ್ಕೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತೋ. ಆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಜರ್ಮನ್-ಇಂಡಿಯಾ ಕಂಪನಿ ಲಿಮಿಟೆಡ್‌ನವರು 10 ಕೋಟಿ ರೂಪಾಯಿಯೊಳಗೆ ಮಾಡುವವರಿದ್ದರೆ, ನಾವು ಅವರಿಗೆ ಕೆಲಸವನ್ನು ವಹಿಸಿಕೊಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಕೆಲವು ದಿವಸಗಳ ಹಿಂದೆ ಅಲ್ಲಿಗೆ ಹೋದಾಗ ಜರ್ಮನ್-ಇಂಡಿಯಾ ಕಂಪನಿ ಲಿಮಿಟೆಡ್‌ನ ಇಂಜಿನಿಯರುಗಳು ಇದ್ದರು. ನನಗೆ ಸಿಕ್ಕಿದ ಮಾಹಿತಿಯನ್ನು ನಿಮಗೆ ಕೊಟ್ಟಿದ್ದೇನೆ. ಅಲ್ಲಿರತಕ್ಕಂಥ ವ್ಯವಸ್ಥೆಗೆ ನೀವು ರೂಪು-ರೇಷೆಗಳನ್ನು ತಯಾರು ಮಾಡಿದ್ದೀರಾ? ಹಾಗೆ ಮಾಡದೆ ಇದ್ದರೆ, ಆಗತಕ್ಕಂಥ ಪರಿಣಾಮಗಳ ಕಲ್ಪನೆ ಇದೆಯೇ? ಆ ಕಲ್ಪನೆ ನಿಮಗೆ ಇದ್ದಿದ್ದರೆ ನಾನು ಹೊಸ ಒಂದು ಮೆತಡ್‌ನ್ನು ಆಲೋಚನೆ ಮಾಡಿದ್ದೇನೆ. ಸೈಫೆನ್ ಸಿಸ್ಟಮ್‌ನಿಂದ ನೀರನ್ನು ಹೊರಗೆ ತರಬಹುದು. ಒಂದೊಂದು ಸೈಫೆನ್‌ಗೆ ಒಂದು ಕೋಟಿ ರೂಪಾಯಿಗಳಾಗುವುದರಿಂದ, ಅಂತಹ ನಾಲ್ಕು ಸೈಫೆನ್‌ಗಳನ್ನು ಹಾಕಿದರೆ, ತಾತ್ಕಾಲಿಕವಾಗಿ ಬೆಳೆಗಳನ್ನು ಉಳಿಸಬಹುದು. ಆದರೆ ಸರ್ಕಾರದಿಂದ ಯಾವುದೇ ಪ್ರಯತ್ನ ನಡೆದಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷಿಣಿಯವರೇ, ಇಡೀ ರಾಜ್ಯದಲ್ಲಿ ಪ್ರತಿಷ್ಠಿತರಾದಂಥ ಯಾವ ಇಂಜಿನಿಯರುಗಳಿದ್ದಾರೆ. ಅವರುಗಳು ಸುಮಾರು 22 ದಿನಗಳಲ್ಲಿ ಮಾಡಿದಂಥ ಕೆಲಸವನ್ನು ಮಾನ್ಯ ವಿರೋಧಪಕ್ಷದ ನಾಯಕರು ಭೇಟಿ ಕೊಟ್ಟು ನೋಡಿದ್ದಾರೆಂದು ತಿಳಿದಿದ್ದೇನೆ. ಇಂತಹ ಒಂದು ದೊಡ್ಡ ಕೆಲಸವನ್ನು ಮಾಡಿ ಸುಮಾರು 300 ಕೋಟಿ ರೂಪಾಯಿಗಳ ಬೆಳೆಯನ್ನು ಉಳಿಸಿದ್ದಾರೆ. ನಾವು ಒಂದನೇ ತಾರೀಖಿನಿಂದ ಕೆಲಸವನ್ನು ಪ್ರಾರಂಭಿಸುತ್ತಿದ್ದೇವೆ. ಒಂದು ತಿಂಗಳೊಳಗೆ ಕೆಲಸ ಮುಗಿಸುವಂತೆ ತಾವು ಏನು ಹೇಳುತ್ತಿದ್ದೀರಿ. ಅದೇ ಹುರುಪಿನಲ್ಲಿ ಸಮಸ್ತ ಬೆಳೆಗೆ ನೀರು ಕೊಡುವ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ ಮತ್ತು ಸೈಫೆನ್ ಎಂದು ತಾವು ಏನು ಹೇಳುತ್ತಿದ್ದೀರಿ. ಅದರ ಬಗ್ಗೆ ನಾವು ಸಂಪೂರ್ಣ ಮಾಹಿತಿಯನ್ನು ತೆಗೆದುಕೊಂಡಿದ್ದೇವೆ. ಆದರೆ ಅದು ಸರಿಯಾದಂಥ ವ್ಯವಸ್ಥೆಯಾಗುವುದಿಲ್ಲ. ಆ ದೃಷ್ಟಿಯಿಂದ ವಿಶೇಷವಾದಂಥ ಸಂದರ್ಭವೆಂದು ಭಾವಿಸಿ, ಇದರ ಬಗ್ಗೆ ಯೋಗ್ಯವಾದಂಥ ಕಾರ್ಯಕ್ರಮವನ್ನು ನಾವು ತೆಗೆದೆಕೊಳ್ಳುತ್ತೇವೆ. ಆದುದರಿಂದ, ದಯಮಾಡಿ ವಿರೋದಪಕ್ಷದ ನಾಯಕರಾಗಲೀ ಅಥವಾ ಬಿ.ಜೆ.ಪಿ ನಾಯಕರಾಗಲಿ ಕೆಲಸವಾಗುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ಪ್ರತಿಯೊಂದು ವಿಷಯದಲ್ಲೂ ಈ ರೀತಿ ರಾಜಕಾರಣ ಮಾಡುತ್ತಾ ಹೋದರೆ ಸರಿಯಾದಂಥ ನಿರ್ಣಯ ಬರುವುದಿಲ್ಲವೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಕೆಲಸವಾಗುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಮಂತ್ರಿಗಳು ಏಕೆ ಈ ರೀತಿ ಆರೋಪ ಮಾಡುತ್ತಿದ್ದಾರೆಂದು ಗೊತ್ತಾಗುತ್ತಿಲ್ಲ. ನಾನು ಆ ಪ್ರದೇಶಕ್ಕೆ ಹತ್ತಾರು ಬಾರಿ ಹೋಗಿ ಬಂದಿದ್ದೇನೆ. ಆ ವಿಷಯ ಇವೊತ್ತು ಸನ್ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ? ಭದ್ರಾ ಬಲದಂಡೆ

ಒಡೆದು ಹೋಗಿ ನಾಲ್ಕೂವರೆ ತಿಂಗಳಾಯಿತು. ಮೊದಲನೆಯ ದಿವಸ ಆ ವಿಷಯ ಇಲ್ಲಿ ಪ್ರಸ್ತಾಪವಾಯಿತು. ಆ ಕೆಲಸವನ್ನು ನಾಲ್ಕು ದಿವಸಗಳಲ್ಲಿ ಮಾಡಬೇಕು ಎನ್ನುವಂತ ಪರಿಸ್ಥಿತಿ ಇದೆಯೆಂದು ತಾವು ಅಂದುಕೊಂಡಿರಿ. ತಾವು ಹೋಗಿ ಬಂದನಂತರ ರಿಪೇರಿ ಕೆಲಸ ಪ್ರಾರಂಭ ಮಾಡಿದಿರಿ. ಆದರೆ, ಇದರ ಪರಿಣಾಮ ಸುಮಾರು ಎರಡೂವರೆ ಲಕ್ಷ ಎಕರೆಯಲ್ಲಿ ಬೆಳೆಯತಕ್ಕಂಥ ಬೇಸಿಗೆ ಬೆಳೆ ಸಂಪೂರ್ಣ ನಾಶವಾಯಿತು. ಒಂದು ಕೆ.ಜಿ. ಭತ್ತವನ್ನು ಬೆಳೆಯಲಿಕ್ಕೆ ಸಹಾ ಆಗಲಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಬಿ.ಜೆ.ಪಿ. ನಾಯಕರು ಹೇಳುತ್ತಿರತಕ್ಕಂಥ ವಿಚಾರ ಸರಿಯಾದುದಲ್ಲ. ಇವರು, ಆ ಪ್ರದೇಶದಲ್ಲಿರತಕ್ಕ ರೈತರ ಬೆಳೆ ನಾಶವಾಗಿದೆ. ರೈತರಿಗೆ ತೊಂದರೆಯಾಗಿದೆಯೆಂದು ಏನು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಅದು ಸತ್ಯಕ್ಕೆ ದೂರವಾದುದು. ಆ ತರಹ ಹೇಳುವುದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೇ, ಮೊನ್ನೆ ದಿವಸ ನಾವು 25-30 ಸಾವಿರ ರೈತಾಪಿ ಜನರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಕಾರ್ಯಕ್ರಮ ಮಾಡಿದ್ದೇವೆ. ಬೇಸಿಗೆ ಬೆಳೆಗೆ ಒಂದು ಹನಿ ನೀರು ಕೊಟ್ಟಿಲ್ಲ. ಈಗ ಮಾರ್ಚಿ 5ನೇ ತಾರೀಖಿನಿಂದ ಏಪ್ರಿಲ್ 5ನೇ ತಾರೀಖಿನವರೆಗೆ, ಒಂದು ತಿಂಗಳೊಳಗೆ ದುರಸ್ತಿ ಮಾಡಿ ಹಂಗಾಮಿಯಾಗಿ ಬೇರೆ ವ್ಯವಸ್ಥೆ ಮಾಡಿದ್ದೀರಾ? ಇನ್ನು 220 ಡೀಪನ್ ಮಾಡಿ, ಮುಂದಿನ ಬೆಳೆಗೆ ನೀರು ಕೊಡುತ್ತೇವೆಂದು ನೀವು ಹೇಳಿದ್ದೀರಿ. ತಾವು ಮುಂಜಾಗರೂಕತೆಯನ್ನು ವಹಿಸಿ ದುರಸ್ತಿ ಕೆಲಸವನ್ನು ಏಪ್ರಿಲ್ 1ನೇ ತಾರೀಖಿನಿಂದ ಮೇ 1ನೇ ತಾರೀಖಿನವರೆಗೆ ಮುಂದುವರೆಸದಿದ್ದರೆ ನಾಲ್ಕು ತಿಂಗಳು ನೀರು ಕೊಟ್ಟು ಎರಡೂವರೆ ಲಕ್ಷ ಎಕರೆ ಜಮೀನಿನಲ್ಲಿರುವ ಬೇಸಿಗೆ ಬೆಳೆಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಇದರಲ್ಲಿ ರಾಜಕೀಯವನ್ನು ಮಾಡುವುದಾದರೆ ನಾವು ಯಾವ ಪಾಪಕ್ಕೆ ಹೋಗಬೇಕೊ? ನಾವು ಸಹಕಾರವನ್ನು ಕೊಡಬೇಕೆಂದು ಬಂದಿದ್ದೇವೆ. ಆದರೆ ನೀವು ನಾಲ್ಕು ತಿಂಗಳಾದರೂ ಸಹ ಇನ್ನೂ ಬಲದಂಡೆ ನಾಲೆಯ ಇನ್‌ವೆಸ್ಟಿಗೇಷನ್ ಮಾಡಿಲ್ಲ. ಇದರ ಪರಿಣಾಮ ಮೂಲ ಡ್ಯಾಮ್ ಒಡೆದು ಹೋಗುತ್ತದೆ. ಒಂದು ಸಾರಿ ಪರಿಣಿತರು ಹೇಳಿದರು. 20 ಅಡಿ ಇಳಿಸಿದರೆ ಮೂಲ ಡ್ಯಾಮ್ ಒಡೆದು ಹೋಗುತ್ತದೆಂದು. ಅದಕ್ಕೋಸ್ಕರ ಹಿಂದೆ ನೀವು ಅದನ್ನು ಆಳ ಮಾಡಿಲಿಲ್ಲ. ಆದರೆ ಈಗ ಅನಿವಾರ್ಯವಾಗಿ ಆಳವನ್ನು ಮಾಡುತ್ತಿದ್ದಾರೆ. ಆದರೆ ಅತೀ ಶಾಶ್ವತವಾಗಿ ಆಗತಕ್ಕ ಸ್ಥಿತಿ ಬಂದರೆ ಹೇಗೆ? ಇವತ್ತು ಬಲದಂಡೆ ರಿಪೇರಿಗೆ ನೀವು ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ? ಇನ್ನೂ ಇನ್‌ವೆಸ್ಟಿಗೇಷನ್ ಸ್ಟೇಜ್‌ನಲ್ಲೇ ಇದೆ ಎನ್ನತಕ್ಕ ಸರ್ಕಾರ, ಬೇರೆ ಬೇರೆ ರಾಜ್ಯದಲ್ಲಿರತಕ್ಕ ಪರಿಣಿತರನ್ನು ಕರೆದು ಅವರಿಂದ ಅಭಿಪ್ರಾಯಗಳನ್ನು ತೆಗೆದುಕೊಂಡು ಈ ಬೇಸಿಗೆಯಲ್ಲಿ ಬಲದಂಡೆಗೆ ಗೋಡೆಯನ್ನು ಕಟ್ಟತಕ್ಕ ಕೆಲಸವಾಗಬೇಕಾಗಿತ್ತು. ಅದರ ಬಗ್ಗೆ ಇನ್ನೂ ಹೆಜ್ಜೆ ಇಟ್ಟಿಲ್ಲ. ಒಂದು ವಾರದ ಹಿಂದೆ ನಿಮ್ಮ ಚೀಫ್ ಇಂಜಿನಿಯರ್ ಮತ್ತು ನಿಮ್ಮ ಉನ್ನತ ಅಧಿಕಾರಿಗಳ ಜೊತೆ ಒಂದು ಗಂಟೆ ಮಾತನಾಡಿ ಬಂದಿದ್ದೇನೆ. ದಯಮಾಡಿ ಸದನಕ್ಕೆ ತಪ್ಪು ಮಾಹಿತಿಯನ್ನು ಏಕೆ ಕೊಡುತ್ತೀರಿ?

ಶ್ರೀ ಎಸ್. ಬಂಗಾರಪ್ಪ : ಉಪಾಧ್ಯಕ್ಷಣಿಯರೇ, ಬಿದ್ದು ಹೋಗಿರತಕ್ಕ ಗೋಡೆಯನ್ನು ತಾವು ಕೂಡ ಹೋಗಿ ನೋಡಿದ್ದೀರಿ.. ನಾನೂ ಕೂಡ ಎರಡು ಸಾರಿ ಹೋಗಿ ನೋಡಿ ಬಂದಿದ್ದೇನೆ. ಡ್ಯಾಮ್‌ಗೆ ಫೌಂಡೇಷನ್ ಕಟ್ಟತಕ್ಕ ಕಾಲದಲ್ಲಿ ಏನೇನೂ ಕೂಡ ನೋಡಿಲ್ಲ, ಹೋದರೂ ಫೌಂಡೇಷನಲ್ಲಿ ಹಾರ್ಡ್ ರಾಕ್ ಮತ್ತೊಂದು ಸಿಗುವುದಿಲ್ಲವೆಂದು ಇಂಜಿನಿಯರ್‌ಗಳ ಅಭಿಪ್ರಾಯ. ಮುಂದೆ ಇರತಕ್ಕ ಗೋಡೆಯಲ್ಲೂ ಪೂರ್ತಾ ಕ್ರಾಕ್ ಬಂದುಬಿಟ್ಟಿದೆ. ನಾವು ಅಲ್ಲೆಲ್ಲಾ ಹೋಗಿ ನೋಡಿರತಕ್ಕ ವಿಚಾರವಿದು. ಅದಕ್ಕೆ ನಾವು ಏನು ಮಾಡಿದ್ದೇವೆಂದರೆ ಕಳೆದ ಮಳೆಗಾಲದಲ್ಲಿ ನಿಂತಿರತಕ್ಕ ಬೆಳೆಯ ಬಗ್ಗೆ ಹೇಳುತ್ತೇನೆ. ನಾನು ಬೇಸಿಗೆ ಬೆಳೆಯ ಬಗ್ಗೆ ಹೇಳುತ್ತಿಲ್ಲ. standing crop worth about Rs. 122 crores or so. ಉಳಿಯುತ್ತದೋ? ಹೇಗೋ ? ಎನ್ನತಕ್ಕ ಯೋಚನೆ ಬಂದುಬಿಟ್ಟಿತು. ಇದು ತಮಗೆಲ್ಲರಿಗೂ ಗೊತ್ತಿರತಕ್ಕ ವಿಚಾರ. ಆದುದರಿಂದ ಆ saddle floor ಇದೆಯಲ್ಲಾ ಅಲ್ಲಯೆ ನಾವು ಕಟ್‌ಮಾಡಿ, ಡ್ಯಾಮ್ ಏರಿಯ ಒಂದು ಮೂಲೆಯಲ್ಲಿ ಗುಡ್ಡದ ಪಕ್ಕದಲ್ಲಿ ಕಟ್ ಮಾಡಿ ನೀರನ್ನು ಬಿಡತಕ್ಕಂಥದನ್ನು ನಮ್ಮ ಇಂಜಿನಿಯರ್‌ಗಳು ಬಹಳ ಶ್ರಮವನ್ನು ತೆಗದುಕೊಂಡು ಮಾಡಿದ್ದಾರೆ. ತಾವೆಲ್ಲರೂ ಅದನ್ನು ಒಪ್ಪಿದ್ದೀರಿ. ಇದನ್ನು ಶಾಸನಸಭೆಯಲ್ಲಿ ಕೂಡ ಚರ್ಚೆ ಮಾಡಿದ್ದೀರಿ. ಪೂರ್ತಿ ಸ್ಟಾಂಡಿಂಗ್ ಬೆಳೆಯನ್ನು ಹೋದ ಮಳೆಗಾಲದಲ್ಲಿ ಉಳಿಸಿದ್ದೇವೆ. ಪುಣ್ಯಕ್ಕೆ ಡ್ಯಾಮ್‌ಗೆ ಏನೂ ಆಗಲಿಲ್ಲ. ನಾವು ಹಣವನ್ನು ಖರ್ಚು ಮಾಡಿದ್ದಕ್ಕೂ ಕೂಡ ಸಂತೋಷವಾಯಿತು. ರೈತರು ಕೂಡ ಸಂತೋಷಪಟ್ಟರು. ನಾವು ಈಗ ಏನು ಮಾಡುತ್ತೇವೆಂದರೆ ಈ ಗೋಡೆಯನ್ನು ಕಟ್ಟತಕ್ಕ ಜಾಗದಲ್ಲಿ ಮತ್ತೊಂದನ್ನು ಕಟ್ಟನೋಡೋಣವೆಂದರೆ it is highly unsafe ಎನ್ನತಕ್ಕ ಅಭಿಪ್ರಾಯ. ಏಕೆಂದರೆ ಇಂಜಿನಿಯರ್ ನಾನು ಅಲ್ಲಾ, ತಾವ್ಯಾರು ಅಲ್ಲ, ನಾವು ಅವರ ಮೇಲೆ ಡಿಪೆಂಡ್ ಆಗಬೇಕಾಗುತ್ತದೆ. ಈಗ ಅವರು ಏನು ಹೇಳುತ್ತಿದ್ದಾರೆ saddle floor ನಲ್ಲಿ ಏನು ಕಟ್ ಮಾಡಿ ನೀರನ್ನು ಬಿಟ್ಟಿದ್ದೇವೆ. ಅಲ್ಲಿ ಶಾಶ್ವತವಾಗಿ ಮಾಡಬೇಕು ಎನ್ನತಕ್ಕ ವಿಚಾರದ ಬಗ್ಗೆ ಮೀಟಿಂಗ್‌ನ್ನು ಇಟ್ಟು ಅದರ ಬಗ್ಗೆ ಅಧಿಕಾರಿಗಳೆಲ್ಲರೂ ಮೀಟಿಂಗ್ ಮಾಡಿದ್ದಾರೆ. ಮತ್ತು ಆ ಬಗ್ಗೆ ತೀರ್ಮಾನವನ್ನು ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮಗೆ ಗೊತ್ತಿದೆ ಜನರೇಷನ್ ಸ್ಟೇಷನ್ ಗೋಡೆ ಸಹ ಆಗಲೆ ಬಿರುಕು ಬಿಡುತ್ತಿದೆ.

ಶ್ರೀ ಎಸ್. ಬಂಗಾರಪ್ಪ : ಅದನ್ನೂ ಕೂಡ ಯೋಚನೆ ಮಾಡಿದ್ದೇವೆ. ಆ ಜನರೇಷನ್ ಸ್ಟೇಷನ್ ಏನಿದೆ ಅದಕ್ಕೆ ನೀರನ್ನು ಹೇಗೆ ಕಳಿಸಬೇಕು ಎಂಬ ಬಗ್ಗೆ ಕೂಡ ಪ್ಲಾನ್ work out ಮಾಡಿದ್ದಾರೆ. ನಾನು ರೈತರ ಗಮನಕ್ಕೆ ತರತಕ್ಕಂಥದ್ದು ಮಾನ್ಯ ಸದಸ್ಯರುಗಳ ಗಮನಕ್ಕೆ ತರತಕ್ಕಂಥದ್ದು ಏನೆಂದರೆ ನಾವು ವರ್ಕ್‌ನ್ನು ತೆಗೆದುಕೊಳ್ಳತಕ್ಕದ್ದು ನಾಲ್ಕು ದಿನ ತಡವಾದರೂ ಕೂಡ, ಶಾಶ್ವತವಾಗಿ ಒಂದು ಸ್ಟ್ರಕ್ಚರ್‌ನ್ನು ಮಾಡಿ ಅದನ್ನು ಮಾಡಬೇಕಾಗುತ್ತದೆ. ಅರಿಬಿರಿಯಲ್ಲಿ ಏನಾದರೂ ಮಾಡುವುದಕ್ಕೆ ಹೋಗಿ ಮತ್ತೆ ಏನಾದರೂ ಹೆಚ್ಚು ಕಡಿಮೆ ಆದರೆ ಇಂಜಿನಿಯರ್ ತಪ್ಪು ಮಾಡಿದ್ದಾರೆ ಮತ್ತೊಂದು ತಪ್ಪು ಮಾಡಿದ್ದಾರೆಂದು ನಾಳೆ ಹೇಳಬಹುದು. ಖಾಯಂ ಆಗಿ ಮಾಡಬೇಕಾಗುತ್ತದೆ. 4-5 ವರ್ಷ ಮುಂದಕ್ಕೆ ಹೋದೀತೋ ಏನೋ ಎಂಬ ಹೆದರಿಕೆ ನಮಗೂ ಕೂಡ ಇದೆ. ಖಾಸಗಿ ಕೆಲವು ಕಂಪನಿಗಳಿಗೆ ಇದನ್ನು ಕೊಡುವ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಕೆಲವು ಕಂಪನಿಯವರನ್ನು ಕೂಡ ಕರೆದೆವು. ಪ್ರೈವೇಟ್‌ನವರಿಗೂ ಕೂಡ ಕರೆದೆವು.

ಇಡೀ ಭಾರತ ದೇಶದ ಲೆವೆಲ್‌ನಲ್ಲಿ ಕಾಂಟ್ಯಾಕ್ಟ್ ಪತ್ರವ್ಯವಹಾರ ಪೂರ್ತಿಯಾಗಿ ಮಾಡಿದೆವು. ಕೆಲವರು ತೆಗೆದುಕೊಳ್ಳಲು ಮುಂದೆ ಬಂದು ಈ ಗೋಡೆಯನ್ನು ನೋಡಿ ಆಮೇಲೆ ಬೇಡವೆಂದು ಹೇಳಿ ಹಿಂದಕ್ಕೆ ಹೋಗಿದ್ದಾರೆ.

ಆಮೇಲೆ ಹೋಗಲಿ ಈ ಜಾಗದಲ್ಲಿ ಮಾಡಿ ಎಂದು ಹೇಳಿದರೆ ನಮಗೆ ಧೈರ್ಯ ಬರುವುದಿಲ್ಲ ಎನ್ನತಕ್ಕ ಮಾತನ್ನು ಹೆಸರಾಂತ ಕಂಪನಿಯವರು ಹೇಳಿದ್ದಾರೆ. ಈಗ ನಾವು ಅನಿವಾರ್ಯವಾಗಿ ನಮ್ಮ ಇಂಜಿನಿಯರ್‌ಗಳು ಮತ್ತೊಬ್ಬರು ಅಪಾರ ನಂಬಿಕೆಯನ್ನು ಇಟ್ಟಿದ್ದಾರೆ. ನಾವು ಬೇಕಾದಷ್ಟು ಡ್ಯಾಮ್‌ನ್ನು ಕಟ್ಟಿದ್ದೇವೆ ನಾವು ಅದನ್ನು ಮಾಡಿಕೊಡುತ್ತೇವೆ. ಈ saddle floor ಏನು ಓಪನ್ ಮಾಡಿದ್ದೆವು ಅಲ್ಲಿಯೇ ಶಾಶ್ವತವಾಗಿ ಏನು ಹಾಳಾಗದಂತೆ ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ. ಈಗಾಗಲೇ ಕಾರ್ಯಕ್ರಮ ಪ್ರಾರಂಭವಾಗಿದೆ. ಎರಡು ತಿಂಗಳು ತಡವಾದರೂ ಚಿಂತೆ ಇಲ್ಲ. ಆದರೆ ಈ ಬೇಸಿಗೆಯಲ್ಲಿ ಮಾತ್ರ ಮಾಡಲು ಸಾಧ್ಯವಿಲ್ಲ. ಏಕೆಂದರೆ ಈಗ ಮಾದಲು ಹೋದರೆ ಇಡೀ ಡ್ಯಾಮ್‌ಗೆ ಪೆಟ್ಟಾದೀತು ಎಂಬ ಹೆದರಿಕೆ ಇರುವುದರಿಂದ ಸ್ವಲ್ಪ ದಿನವಾದರೂ ಕೂಡ ಪಕ್ಕಾ ಆಗತಕ್ಕಂಥ ಪರಿಣತರ ಅಭಿಪ್ರಾಯವನ್ನು ತೆಗೆದುಕೊಂಡು ಹೋಗುತ್ತೇವೆ. This is all the thing.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ರಾಜಕಾರಣ ಮಾಡಬೇಕೆಂದು ಹೇಳಲಿಲ್ಲ. ಶಾಶ್ವತವಾದಂತಹ ವ್ಯವಸ್ಥೆಯ ಬಗ್ಗೆ ನಾನೂ ಮಾತನಾಡುತ್ತಿದ್ದೆ. ಇವರ ತಾತ್ಕಾಲಿಕವಾದಂತಹ ವ್ಯವಸ್ಥೆಯ ಬಗ್ಗೆ ನಾನು ಒಂದು ಚಕಾರವನ್ನು ಎತ್ತಲಿಲ್ಲ. They have done an excellent job. ಆ ವಿಚಾರದಲ್ಲಿ ಎರಡನೇ ಮಾತು ಆಡುವುದಕ್ಕೆ ನಾನು ಹೋಗುವುದಿಲ್ಲ. ನಾನು ಅಲ್ಲಿಗೆ ಹೋಗಿದ್ದೇನೆ. ಅಲ್ಲೆಲ್ಲಾ ನೋಡಿದ್ದೇನೆ. ನಾನು ಹಿಂದಯೂ ಕೂಡ ನಿಮ್ಮ ಹಾಗೆ ಒಬ್ಬ ನೀರಾವರಿ ಮಂತ್ರಿಯಾಗಿ ಕೆಲಸ ಮಾಡಿದ್ದರಿಂದ ಕೆಲವರು ನನಗೆ ಪರಿಚಯ ಇದ್ದುದರಿಂದ ತುಂಬಾ ಒಳ್ಳೆಯ ಕೆಲಸ ಮಾಡಿದ್ದಾರೆ. ಮೊದಲು ಡ್ಯಾಮ್‌ನಲ್ಲಿ ಹೋಗುತ್ತಿದ್ದಂತ 2400, 2600 ಕ್ಯುಸೆಕ್ಸ್ ನೀರು ಹೋಗದೇ ಇರಬಹುದು. ಆದರೆ ನಿಮಗೆ ಅಧಿಕಾರವಿದೆ. ಅದೃಷ್ಟವಶಾತ್ ನಿಮಗೆ ಒಂದು ಸ್ಯಾಡಲ್ ಇತ್ತು ಅದನ್ನು ಓಪನ್ ಮಾಡಿದ್ದೀರಿ. ನೀರು ಹೋಗುತ್ತಾ ಇದೆ. ಆದರೆ ಶಾಶ್ವತವಾದಂತಹ ವ್ಯವಸ್ಥೆ ಕಡೆಗೆ ನಾವು ಗಮನ ಕೊಡದಿದ್ದರೆ ಆಗತಕ್ಕಂತಹ ಪರಿಣಾಮಗಳನ್ನು ಊಹಿಸುವುದಕ್ಕೆ ಆಗುವುದಿಲ್ಲ. ನಿಮಗೆ ಕೋಪ ಬಂದು ಒಂದು ತಿಂಗಳಲ್ಲಿ ಮಾಡುತ್ತೇವೆಂದರೆ ಮಾಡಿ, ಇನ್ನಷ್ಟು ಕೋಪ ಬರಿಸಿ 20 ದಿವಸದಲ್ಲಿ ಮಾಡಿ ಎಂದು ಹೇಳುವುದಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಉಪಾಧ್ಯಕ್ಷಿಣಿಯವರೇ ಕೋಪ ಏನು ಬರುವುದಿಲ್ಲ ಆದರೂ ಕೂಡ ಆ ವಿಷಯವನ್ನು ಪ್ರಸ್ತಾಪ ಮಾಡಿದ್ದಾರಲ್ಲಾ ಅದರ ಬಗ್ಗೆ ತಮ್ಮ ಧನ್ಯವಾದಗಳನ್ನು ಹೇಳಿದಿರಿ ಇದರ ಬಗ್ಗೆ ನಿಮಗೂ ಕೂಡ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇನ್ನು ಹಿಂದುಳಿದ ವರ್ಗಗಳ ಆಯೋಗದ ವರದಿಯ ಬಗ್ಗೆ 1990ನೇ ಇಸವಿಯಲ್ಲಿ ಪ್ರಸ್ತಾಪವಾಯಿತು. ವರದಿ ಬಂದು ಬಿಡುತ್ತದೆ. ತೀವ್ರವಾಗಿ ಇದನ್ನು ಜಾರಿಗೆ ಕೊಡುತ್ತೇವೆ ಎಂದು ವೀರೇಂದ್ರ ಪಾಟೀಲರು ಹೇಳಿದರು. 1991ರಲ್ಲಿ ತೀವ್ರ ಪರಿಶೀಲನೆಯಲ್ಲಿದೆಯೆಂದು ಹೇಳಿದರು.

ಶ್ರೀ ಬಿ. ಬಸವಲಿಂಗಪ್ಪ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ಹಿಂದುಳಿದ ವರ್ಗದವರ ವಿಚಾರದಲ್ಲಿ ದೇವರಾಜ ಅರಸು ಅವರ ಕಾಲದಲ್ಲಿ ಮೊದಲು ನಾವೇನೋ ಈ ಯೋಜನೆಯನ್ನು ಪ್ರಾರಂಭ ಮಾಡಿದ್ದೆವು. ಆಗ ಹಿಂದುಳಿದ ವರ್ಗದವರಿಗೆ ಒಂದು ಕಮಿಷನ್ ನೇಮಕ ಮಾಡಿದೆವು. ಅದರ ಪ್ರಕಾರ ಜಾರಿಗೆ ಕೊಟ್ಟೆವು. ಅದು ಪುನಃ ಇವತ್ತು ಸುಪ್ರೀಂ ಕೋರ್ಟ್‌ನಲ್ಲಿ ಇದೆ. ಅದು ಬೇರೆ ವಿಚಾರ. ಜನತಾ ಗೌರ್ನಮೆಂಟ್‌ನವರು ಬಂದರು. ಹಿಂದುಳಿದ ವರ್ಗಗಳ ಬಗ್ಗೆ ಆಕಾಶದಿಂದ ಭೂಮಿಯವರೆಗೆ ಭಾಷಣ ಮಾಡಿದರು. ವೆಂಕಟಸ್ವಾಮಿ ಆಯೋಗ ಎಂದು ಒಂದು ಆಯೋಗ ಮಾಡಿದರು. ಅವರು ಸರಿಯಾಗಿ ಶಿಫಾರಸ್ಸು ಮಾಡಿ ಕೊಟ್ಟಿದ್ದರು. ಯಾರೋ ತಕರಾರು ಮಾಡಿದರು ಎಂದು ಪೋಲೀಸರನ್ನು ಎತ್ತಿಕಟ್ಟಿ ಗಲಾಟೆ ಮಾಡಿಸಿ ಮಂಡ್ಯಾದ ಒಂದು ಜಾಗದಲ್ಲಿ ಅದನ್ನು ಕಿತ್ತು ಹಾಕಿದರು. ಇನ್ನೊಂದು ಮಾಡುತ್ತೇವೆಂದು ಹೇಳಿದರು ಮಾಡಲಿಲ್ಲ. ನೀವು ಅನುಸರಿಸತಕ್ಕಂತ ನೀತಿ ಏನು ಇದೆಯಲ್ಲಾ ಆರು ವರ್ಷ ಆರು ವರ್ಷ ಮಾಡದೇ ಇರತಕ್ಕಂಥ ನೀತಿ ಮುಂದೆ ಮುಂದೆ ಹಾಕಿಕೊಂಡು ವರದಿಗಳನ್ನು ಕಮಿಷನ್ ಮಾಡುವುದು ವರದಿಗಳನ್ನು ನಿರ್ದೇಶನ ಮಾಡುವುದು ಜಾರಿಗೆ ಕೊಡದೇ ಇರುವುದು ಇದೇ ಪದ್ಧತಿಯಾಗಿದೆ. ಇದಕ್ಕೆ ನೀವು ನಿಮ್ಮ ಹಿನ್ನಲೆ ಅದರ ಹಿನ್ನಲೆ ನೋಡಿ. ತಾವು ಮಾತನಾಡಿ ಬಹಳ ಸಂತೋಷ

ಶ್ರೀ ಆರ್.ಎಲ್. ಜಾಲಪ್ಪ : ತಾವು ಹೇಳಿದ ಹಾಗೆ ನಾವು ತಪ್ಪು ಮಾಡಿದ್ದೇವೆ. ಆದರೆ ಚಿನ್ನಪ್ಪ ರೆಡ್ಡಿಯವರ ಕಮಿಷನ್ ರಿಪೋರ್ಟ್ ಬಂದು ಮೂರು ವರ್ಷವಾಯಿತು. ನಂತರ ಕ್ಯಾಬಿನೇಟ್ ಸಬ್ ಕಮಿಟಿ ಮಾಡಿದಿರಿ. ಅದರ ಗತಿ ಏನಾಯಿತು ಸ್ವಾಮಿ ನಿಮ್ಮ ತಪ್ಪನ್ನು ನೀವು ಒಪ್ಪಿಕೊಳ್ಳಿ. ನಮ್ಮ ಚಾಳಿ ನಿಮಗೂ ಬಂತೇನು? ಹೀಗಾದರೆ ಹಿಂದುಳಿದವರು ಬದುಕಿದ ಹಾಗೆ ಆಯಿತು.

ಶ್ರೀ ಡಿ.ಬಿ. ಚಂದ್ರೇಗೌಡ : 1991-92ರಲ್ಲಿ ತೀವ್ರ ಪರಿಶೀಲನೆಯಲ್ಲಿದೆಯಲ್ಲಿದೆಯೆಂದು ಹೇಳಿದಿರಿ. 1992-93ರಲ್ಲಿ ತೀವ್ರ ಪರಿಶೀಲನೆಯೂ ಬಿಟ್ಟು ಹೋಗಿದೆ. ಬರೀ ಪರಿಶೀಲನೆ ಬಂದಿದೆ. ಈಗ ಶಾಶ್ವತವಾದಂತಹ ಆಯೋಗವನ್ನು ಮಾಡುತ್ತೇವೆಂದು ಹೇಳುತ್ತಿದ್ದೀರಿ. ನಿರ್ಧಿಷ್ಟವಾದಂತಹ ನಿಖರವಾದಂತಹ ಸರ್ಕಾರದ ಕಾರ್ಯಕ್ರಮ ಏನು ಎನ್ನುವುದನ್ನು ತಿಳಿಸಬೇಕು. ಮತ್ತೆ ಎಲ್ಲಾ ಕ್ಷೇತ್ರದಲ್ಲೂ ಖಾಸಗೀಕರಣದ ಮಾತು, ವಿದ್ಯುಚ್ಛಕ್ತಿ , ಕೈಗಾರಿಕೆ ರಸ್ತೆ ಸಾರಿಗೆ ಸಂಸ್ಥೆ ಹೀಗೆ ಎಲ್ಲಾ ಕ್ಷೇತ್ರದಲ್ಲಿ ಖಾಸಗೀಕರಣದ ಮಾತು. ನಿಮ್ಮ ಕಾಂಗ್ರೆಸ್ ಸಮಾಜವಾದ ಏನಾಯಿತು? ಇದು ಚಾಳಿಯೇ, ಅದಕ್ಕೆ ನಾನು ಚಾಳಿ ಎಂದು ಹೇಳುವನಲ್ಲ. ಆದ್ದರಿಂದ ಇವತ್ತು ಬೆಳಿಗ್ಗೆಯೂ ಕೂಡ ಒಂದು ಪ್ರಶ್ನೆಗೆ ಉತ್ತರ ಹೇಳುತ್ತಾ ಬಸ್ಸಿನ ಖಾಸಗೀಕರಣದ ಬಗ್ಗೆ ಮಾತನಾಡಿದ್ದಾರೆ. ಬಾರೀ ಮಾತನಾಡಿದ್ದೀರಲ್ಲಾ ಇದರ ಉದ್ದೇಶವೇನು? ಇನ್ನು ವ್ಯಾಪಾರ ಕುದುರಲಿಲ್ಲವೆ? ಅಥವಾ ನಿಮ್ಮ ಈ ಸಾರ್ವಜನಿಕ ಒಟ್ಟಾರೆ ನಮ್ಮ ಖಾಸಗೀಕರಣದ ವಿರುದ್ಧ ಇದುವರೆಗೆ ಬಂದಿರತಕ್ಕಂತಹ ನೀತಿಯ ವಿರೋಧ ಆಗಿದ್ದಾವೆಯೋ ಇದರ ವಿವರಗಳು ನಮಗೆ ಬೇಕಾಗುತ್ತವೆ.

ಮಾನ್ಯ ಪ್ರಧಾನ ಮಂತ್ರಿಗಳು ನಿಮಗೆ ಬುದ್ಧಿವಾದದ ಮಾತುಗಳನ್ನು ಹೇಳಿದ್ದಾರೆ ನಿಮ್ಮ ವೆಚ್ಚದಲ್ಲಿ ಕಡಿತ ಮಾಡಿ ಎಂದು ನಿಮಗೆ ಬುದ್ಧಿವಾದ ಮಾತುಗಳನ್ನು ಹೇಳಿದ್ದಾರೆ. ಆದರೆ ಎಷ್ಟು ಕಡಿತವಾಗಿದೆ ಎಂಬುದಕ್ಕೆ ಇತ್ತೀಚೆಗೆ ಮಂತ್ರಿಗಳಿಗೆ ಆಗಿರತಕ್ಕ ಖರ್ಚಿನ ವಿವರ ನಿನ್ನೆ ಸದನದ ಮುಂದೆ ಬಂದಿತ್ತು. ಕೇವಲ 9

ತಿಂಗಳಿಗೆ ಸುಮಾರು 2 ಕೋಟಿ ರೂಪಾಯಿಗೂ ಮೀರಿದ ಖರ್ಚು ಆಗಿದೆ. ಅಂದಮೇಲೆ ನೀವು ಯಾವರೀತಿ ಪ್ರದಾನ ಮಂತ್ರಿಗಳ ಬುದ್ಧಿವಾದವನ್ನು ಪಾಲನೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ? ಚಿತ್ರೋದ್ಯಮ ಮಾಡಿ 1 ಕೋಟಿ ರೂ. ಖರ್ಚು ಮಾಡಿದ್ದೀರಿ. ಮಂತ್ರಿ ಮಾನ್ಯರ ಖರ್ಚು ಸುಮಾರು 2 ಕೋಟಿ ರೂ. ಮೀರಿರುತ್ತದೆ. ನಿಮ್ಮ ಪಕ್ಷದ ಅಧ್ಯಕ್ಷರು ಕೊಟ್ಟಿರತಕ್ಕ ಆದೇಶವನ್ನು ಪಾಲನೆ ಮಾಡುವುದಕ್ಕೆ ಎಲ್ಲ ಪ್ರಯತ್ನ ಮಾಡಿದ್ದೀರಿ ಎಂಬುದು ನನಗೆ ತಿಳಿಯುವುದಿಲ್ಲ. ಕಂಟಿನ್‌ಜೆನ್ಸಿ ಫಂಡ್ ವಿಚಾರದಲ್ಲಿ ಹೇಳುವುದಾದರೆ ಮಂತ್ರಿಯಾಗಿ ನಿಮಗೆ ಹೆಚ್ಚಿನ ಅನುಭವ ಇದೆ. ಯಾವುದೇ ಒಂದು ಸರ್ಕಾರ 500 ಕೋಟಿ ರೂ ಕಂಟೆಂಜೆನ್ಸಿ ಫಂಡನ್ನು ಖರ್ಚು ಮಾಡಿರತಕ್ಕ ನಿದರ್ಶನವನ್ನು ತಾವು ನನಗೆ ಕೊಡುತ್ತೀರಾ? ಇದು ನನಗೆ ವಿಚಿತ್ರ ಎನಿಸುತ್ತದೆ.

ತಾವು ಆರ್ಥಿಕ ಮಂತ್ರಿಗಳಾಗಿದ್ದೀರಿ. ಈ ರೀತಿ ಸರ್ಕಾರದ ಹಣವನ್ನು ಖರ್ಚು ಮಾಡಿದ್ದೀರಿ. ನಾವು ಶಾಸನ ಸಭೆಯಲ್ಲಿ ಮತ ಹಾಕಿದಂಥ ಹಣವನ್ನು ಹೊರತುಪಡಿಸಿ ಕಂಟಿಂಜೆನ್ಸಿ ಫಂಡ್‌ನಲ್ಲಿ ಖರ್ಚು ಮಾಡುವಂಥ ಪ್ರವೃತ್ತಿ ಏನಿದೆ ಮತ್ತು ಪತ್ರಿಕೆಗಳಲ್ಲಿ ಬಂದರುವಂತೆ 500 ಕೋಟಿ ರೂ.ಗಳನ್ನು ನಿಮ್ಮ ಡಿಸ್ಕ್ರಿಷನ್‌ನಲ್ಲಿ ನೀವೇ ಖರ್ಚುಮಾಡಿದ್ದೀರಾ? ಈ ರೀತಿ 500 ಕೋಟಿ ರೂ. ಖರ್ಚು ಮಾಡತಕ್ಕ ಅಧಿಕಾರ ಈ ರಾಜ್ಯದ ಮುಖ್ಯಮಂತ್ರಿಗಳಿಗೆ ಇರುವುದಾದರೆ ಈ ಶಾಸನಸಭೆ ಇರಬೇಕಾದ ಅಗತ್ಯವಿಲ್ಲ. ಈ ಶಾಸನಸಭೆಯಲ್ಲಿ ಆಯವ್ಯಯವನ್ನು ಚರ್ಚೆ ಮಾಡಬೇಕಾದ ಅಗತ್ಯವಿಲ್ಲ. ನಾವು ಅದಕ್ಕೆ ಮಂಜೂರಾತಿಯನ್ನು ಕೊಡಬೇಕಾದ ಅಗತ್ಯವೂ ಇಲ್ಲ. ಎಲ್ಲವನ್ನೂ ಕಂಟಿಂಜೆನ್ಸಿ ಫಂಡ್ ಎಂತಲೇ ಖರ್ಚು ಮಾಡಿ. ಒಟ್ಟಿನಲ್ಲಿ ಇದು ಜನತಂತ್ರ ವಿರೋಧಿ ಮತ್ತು ಶಾಸನಸಭೆಗೆ ಅಪಮಾನ ಮಾಡತಕ್ಕಂಥ ಪ್ರಸಂಗ. ಇಂಥ ಪ್ರಸಂಗಗಳನ್ನು ನಾವು ಮೇಲಿಂದ ಮೇಲೆ ತಪ್ಪಿಸುವಂಥ ಪ್ರಯತ್ನವನ್ನು ಮಾಡಬೇಕಾಗಿದೆ. ತಮ್ಮ ಗಮನಕ್ಕೆ ಮತ್ತೊಂದು ವಿಚಾರವನ್ನು ಮೊನ್ನೆ ತಂದಿದ್ದೆ. ಈಗ ತಾನೆ ತಾವು ಹೇಳಿದಿರಿ. ನಾವೆಲ್ಲಾ ಗೇಣಿದಾರರ ಬಗ್ಗೆ ತುಂಬಾ ಆಸಕ್ತಿ ಇರುವವರು, ಅವರ ಪ್ರೀಮಿಯಂನ್ನು ವಜಾ ಮಾಡಿದ್ದೇವೆ.

ಇದರಿಂದ ಸರ್ಕಾರಕ್ಕೆ 12 ಕೋಟಿಗಿಂತ ಹೆಚ್ಚು ಹಣ ಖರ್ಚಾಗುತ್ತದೆ. ಮುಂದೆ ಅವರು ಯಾರೂ ಪ್ರೀಮಿಯಂನ್ನು ಕೊಡಬೇಕಾಗಿಲ್ಲ ಎಂದು ಹೇಳಿದ್ದೀರಿ. ಆ ರೈತರನ್ನು ವಿಭಾಗ ಮಾಡಿದ್ದೇವೆ. ಹಿಂದೆ ವಿಭಾಗ ಮಾಡಿದ್ದು ತಪ್ಪು, ನಾವು ಎಲ್ಲರಿಗೂ ಬರುತ್ತೇವೆಂದು ತಾವು ಹೇಳಿದ್ದೀರಿ. ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಮತ್ತೆ ರೈತರಿಗೆ ನೋಟೀಸ್‌ಗಳನ್ನು ಕಳುಹಿಸುತ್ತಿದ್ದಾರೆ. ತೀರ್ಥಹಳ್ಳಿ ತಾಲ್ಲೂಕು ಅಗ್ರಹಾರ ಹೋಬಳಿ ಹುಲ್ಲತ್ತಿ ಗ್ರಾಮದ ಸರ್ವೆ ನಂ 4ಕ್ಕೆ ಸಂಬಂಧಪಟ್ಟಂತೆ ಜನವರಿ ತಿಂಗಳಲ್ಲಿ ನೋಟೀಸ್ ಬಂದಿದೆ. ಅದು ಈ ರೀತಿ ಇದೆ.

"ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ, ಭೂಸುಧಾರಣ ಕಾನೂನು ಅನ್ವಯ 16 74-75, 18-9-76, ಹುಲ್ಲತ್ತಿ ಗ್ರಾಮದ ಸರ್ವೆ ನಂ.ನಲ್ಲಿ 4 ಎಕರೆ ವಿಸ್ತೀರ್ಣ ನಿಮಗೆ ಮಂಜೂರಾಗಿರುತ್ತದೆ. ಈ ಬಾಬ್ತು ನೀವು ಪ್ರೀಮಿಯಂ ಹಣವನ್ನು ಅಂದರೆ 3728 ರೂಪಾಯಿ ಹಾಗೂ ಶೇಕಡ 5ರ ಬಡ್ಡಿಯನ್ನು ಈ ಹಿಂದೆ ಅನೇಕ ಸಾರಿ ಈ ಹಣವನ್ನು ಕಟ್ಟಲು ನಿರಾಕರಿಸಿರುತ್ತೀರಿ. ಆದುದರಿಂದ ಅಂತಿಮ ನೋಟೀಸನ್ನು ಪಡೆದ 7 ದಿನಗಳೊಳಗೆ ಮೇಲ್ಕಂಡ ಪ್ರೀಮಿಯಂ ಹಣವನ್ನು ಪಾವತಿ ಮಾಡಿ ರಸೀದಿ ಪಡೆಯತಕ್ಕದ್ದು ಎಂದು ನೋಟೀಸ್‌ನ್ನು

ಕೊಟ್ಟಿದ್ದಾರೆ. ಇದು ಸರ್ಕಾರದ ಯಾವ ನೀತಿ. ಇಲ್ಲ ಶಾಸನ ಸಭೆಗೆ ಕೊಟ್ಟಂಥ ಮಾತು ಏನು? ಇಲ್ಲ ಸಾಲ ಮನ್ನಾ ಬಗ್ಗೆ ಭರವಸೆಯನ್ನು ಕೊಟ್ಟು ಇದಕ್ಕೆ 12 ಕೋಟಿ ರೂ. ಖರ್ಚನ್ನು ಲೆಕ್ಕಹಾಕಿ ಮತ್ತೆ ಬಡ ಗೇಣಿದಾರರಿಂದ ವಸೂಲ್ಮಾಡುತ್ತಿದ್ದೀರಿ. ಇಧು ಸರ್ಕಾರದ ನೀತಿ.....

ಶ್ರೀ ಎಸ್. ಬಂಗಾರಪ್ಪ : ಎಷ್ಟು ಎಕರೆ?

ಶ್ರೀ ಡಿ.ಬಿ. ಚಂದ್ರೇಗೌಡ : 4 ಎಕರೆ. ತಮಗೆ ಈಗಲೇ ಇದರ ನಕಲನ್ನು ಕಳುಹಿಸಿಕೊಡುತ್ತೇನೆ. ಶಾಸನಸಭೆಯಲ್ಲಿ ಹಾಗೆ ಹೇಳಿ, ಹಣವನ್ನು ವಸೂಲ್ಮಾಡಿ ಎಂದು ನಿಮ್ಮ ಅಧಿಕಾರಿಗಳಿಗೆ ಹೇಳಿದ್ದೀರಾ? ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಒಟ್ಟು ಹೌಸಿಂಗ್ ಕಾರ್ಯಕ್ರಮ ಬಹಳ ಚೆನ್ನಾಗಿದೆ. ಹೊಟ್ಟೆಗೇ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂ. ಮನೆಯನ್ನೇ ಕಟ್ಟಿಲ್ಲ ಅದಕ್ಕೆ ಒಂದು ಲಾವೆಟ್ರಿಯಂತೆ. ಇದನ್ನು ಯಾವಾಗ ಮಾಡುತ್ತೀರಿ? ಇದನ್ನು ನೀವು ಮಾಡಿದಮೇಲೆ ನಾನು ಮಾತನಾಡುತ್ತೇನೆ. ಈಗ ಇದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ಕೆಲವು ಅಂಶಗಳನ್ನು ಇವತ್ತು ಬೆಳಿಗ್ಗೆ ಚರ್ಚೆ ಮಾಡಿದ್ದೇವೆ......

ಶ್ರೀ ಎಸ್. ಬಂಗಾರಪ್ಪ : ಮನೆಯನ್ನೇ ಕಟ್ಟಿಲ್ಲ ಎಂದರೆ, ನೀವು ಕಟ್ಟಿದಮೇಲೆ ನಾನು ಹೇಳುತ್ತೇನೆಂದು ನೀವು ಹೇಳುತ್ತಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮನೆಯನ್ನೇ ಕಟ್ಟಿಲ್ಲ, ಅಕ್ಷಯ ಕಾರ್ಯಕ್ರಮದಲ್ಲಿ ರೂಪಾಯಿಯನ್ನು ಕೊಟ್ಟಿಲ್ಲ, ಆರಾಧನಾ ಕಾರ್ಯಕ್ರಮದಲ್ಲಿ ಒಂದು ದೇವಸ್ಥಾನ ಕೂಡ ಬಂದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಆರಾಧನಾ ದೇವರ ಗುಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ವಿದ್ಯುಚ್ಛಕ್ತಿ ವಿಚಾರದಲ್ಲಿ ಕೆಲವು ಅಂಶಗಳನ್ನು ಬೆಳಿಗ್ಗೆ ಚರ್ಚೆ ಮಾಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ : ಮನೇನೆ ಕಟ್ಟಿಲ್ಲ ಎಂದ ಮೇಲೆ ನೀವು ಕಟ್ಟಿದ ಮೇಲೆ ಹೇಳುತ್ತೇನೆಂದು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮನೇನೆ ಕಟ್ಟಿಲ್ಲ, ಅಕ್ಷಯ ಕಾರ್ಯಕ್ರಮದಲ್ಲಿ ರೂಪಾಯಿ ಕೊಟ್ಟಿಲ್ಲ, ಆರಾಧನಾ ಕಾರ್ಯಕ್ರಮದಲ್ಲಿ ಒಂದು ಮನೆಯೂ ಬಂದಿಲ್ಲ ಒಂದು ದೇವಸ್ಥಾನ ಬಂದಿಲ್ಲ, ನಾನು ಏತಕ್ಕೆ ಕೊಟ್ಟಿಲ್ಲಂತ ಹೇಳಿದೆ ಗೊತ್ತೇ ಈ ಕಾಂಗ್ರೆಸ್‌ನವರು ಹೇಳುತ್ತಿದ್ದಾರೆ ನಮಗೆ ಕೊಟ್ಟಿದ್ದಾರೆಂದು ಇಲ್ಲಿಯೂ ಡಿಸ್‌ಕ್ರಿಮಿನೇಷನ್ ನಡೆಯುತ್ತಿದೆ.

ಶ್ರೀ ಕರಿಯಣ್ಣ ನಾವು ಶಿವಮೊಗ್ಗದವನು, ಶಿವಮೊಗ್ಗ ಜಿಲ್ಲೆದು, ಚಂದ್ರೇಗೌಡರು ಆ ...ಟಿಂಗ್‌ಗೆ ಅಟೆಂಡ್ ಆಗಿಲ್ಲ, ಶಿವಮೊಗ್ಗ ಜಿಲ್ಲೆದು. ಚಂದ್ರೇಗೌಡರು ಕಾಂಗ್ರೆ... ಎಂದು ಹೇಳುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷಣೆಯವರೆ ಎರಡು ನಿಮಿಷ ಕಾಲಾವಕಾಶ ಕೊಟ್ಟರೆ ಈ ನನ್ನ ಮಾತನ್ನು ಮುಗಿಸಿಬಿಡುತ್ತೇನೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷಣೆಯವರೇ ಶಿವಮೊಗ್ಗ ಜಿಲ್ಲೆಗೆ ನನ್ನ ತಾಲ್ಲೂಕಿಗೆ ದುಡ್ಡು ಬಂದಿದೆ. ಅವರ ತಾಲ್ಲೂಕಿಗೂ ದುಡ್ಡು ಬಂದಿದೆ. ಅವರು

ಮೀಟಿಂಗ್ ಮಾಡಿ ದುಡ್ಡನ್ನು ಹಂಚಿಲ್ಲ ಅಂದಹಾಗೆ ಕಾಣುತ್ತದೆ. ಜಿಲ್ಲಾ ಅಧಿಕಾರಿಗಳನ್ನು ಬೇಕಾದರೆ ಸಂಪರ್ಕಿಸಿ ಕೇಳಲಿ. ಎಲ್ಲಾ ಕ್ಷೇತ್ರಕ್ಕೂ ಒಂದು ಒಂದೂವರೆ ಲಕ್ಷ ರೂಪಾಯಿ ಕೊಡಲಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಬಗ್ಗೆ ಕರಿಯಣ್ಣನವರು ಬುದ್ಧಿವಾದ ಹೇಳುವುದು ಬೇಡ. ನಾವು ಉತ್ತರ ಹೇಳಲಿಲ್ಲ. ನನ್ನ ಕ್ಷೇತ್ರಕ್ಕೆ ದುಡ್ಡು ಬಂದಿಲ್ಲ ಇವರ ಈ ವಕಾಲತ್ತು ನನಗೆ ಏನು ಬೇಕಾಗಿಲ್ಲ ಶಿವಮೊಗ್ಗ ಜಿಲ್ಲೆ ಜಿಲ್ಲಾ ಅಧಿಕಾರಿಗಳನ್ನು ನಾನು ಕಾಂಟ್ಯಾಕ್ಟ್ ಮಾಡಬೇಕು. ದುಡ್ಡು ಕೊಡಿಸಿಕೊಡಬೇಕು ಎಲ್ಲ ನನಗೆ ಗೊತ್ತಿದೆ. ನಾನು ಇಪ್ಪತ್ತೆರಡು ವರ್ಷಗಳಿಂದ ಸಂಸದೀಯ ಜೀವನ ಮಾಡಿದ್ದೇನೆ. ನನಗೆ ತಿಳಿಯುತ್ತದೆ. ಈ ವಕಾಲತ್ತು ಬೇಡ, ಇದೂವರೆವಿಗೂ ನನ್ನ ಕ್ಷೇತ್ರಕ್ಕೆ ಒಂದು ರೂಪಾಯಿ ಬಂದಿಲ್ಲ. ನಿಮಗೆ ಬಂದಿದ್ದರೆ ಹೇಳಿ. ನೀವು ನನ್ನ ಪರವಾಗಿ ಮಾತನಾಡಿ.

ಶ್ರೀ ಕರಿಯಣ್ಣ : ನೀವು ನಿಮ್ಮ ಕ್ಷೇತ್ರಕ್ಕೆ ಹೋಗಿಲ್ಲ ಎಂದು ಅರ್ಥವಾಯಿತು. ನನಗೆ ಗೊತ್ತಿದೆ ಎಲ್ಲಾ ತಾಲ್ಲೂಕುಗಳಿಗೂ ಡಿಸ್ಟ್ರಿಬ್ಯೂಟ್ ಮಾಡಿದ್ದಾರೆ.

ಶ್ರೀ ಬಸವರಾಜ ರಾಯ ರೆಡ್ಡಿ : ನಿಮ್ಮ ಸಚಿವರೊಡನೆ ನಿನ್ನೆ ತಾನೆ ಚಂದ್ರೇಗೌಡರು ಅವರ ಕ್ಷೇತ್ರಕ್ಕೆ ಹೋಗಿದ್ದಾರೆ.

ಅಧ್ಯಕ್ಷಣೀಯವರು : ತಾವು ಮುಂದುವರಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷಣೀಯವರೇ ನಮ್ಮ ಸ್ಥಿತಿ ಹೇಗೆ ಆಗಿದೆ ಎಂದರೆ ಕರಿಯಣ್ಣನವರ ಹತ್ತಿರ ಕೂಡ ಸರ್ಟಿಫಿಕೇಟು ತೆಗೆದುಕೊಳ್ಳಬೇಕು. ನಮಗೆ ಯಾವ ಡಿಸ್ ಕ್ವಾಲಿಪಿಕೇಷನ್ ಬರುತ್ತಯೋ ಗೊತ್ತಿಲ್ಲ. ಶ್ರೀಮಾನ್ ನಾರಾಯಣಸ್ವಾಮಿಯವರಿಗೆ ಚುನಾವಣಾ ಆಯೋಗ ಒಂದು ಡಿಸ್-ಕ್ವಾಲಿಪಿಕೇಶನ್ ನೋಟೀಸ್ ಕಳುಹಿಸಿಬಿಟ್ಟಿದ್ದರು. ನಿಮ್ಮ ಸದಸ್ಯತ್ವವನ್ನು ಅಮಾನತ್ ಮಾಡಿದ್ದೇವೆ. ಕಾರಣವೇನು ಏನೂ ಗೊತ್ತಿಲ್ಲ. ಎಂದ ಹಾಗೆ ಕರಿಯಣ್ಣನವರು ಕೂಡ ನಮಗೊಂದು ದಿನ ಡಿಸ್ ಕ್ವಾಲಿಪಿಕೇಷನ್ ಮಾಡಿ ಕಳುಹಿಸಿಬಿಡಬಹುದು. ನಾವು ಯಾವ ಯಾವ ಕ್ಷೇತ್ರಕ್ಕೆ ಹೋಗಬೇಕು. ಯಾವ ಯಾವಾಗ ಬರಬೇಕು. ಯಾವ ರೀತಿ ಹೇಳಬೇಕು ಮತ್ತು ಯಾರನ್ನು ಸಂಪರ್ಕಿಸಬೇಕು ಮತ್ತು ನಾವು ಬಹಳ ಸ್ವಚ್ಛವಾಗಿದ್ದೇವೆ ಹೇಳಿ ಎಂದು ಅವರು ಸರ್ಟಿಫಿಕೇಟ್ ಕೊಡಬೇಕು. ಬಹಳ ಜನ ಈ ಸರ್ಟಿಫಿಕೇಟ್ ಕೊಡುವುದಕ್ಕೆ ಶುರು ಮಾಡಿದ್ದಾರೆ. ಈ ಎಲ್ಲಾ ವಿಚಾರಗಳ ಬಗ್ಗೆ ಹೆಚ್ಚು ಮಾತನಾಡದೆ ಇರುವುದು ಒಳ್ಳೆಯದು.

ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಜಯಪ್ರಕಾಶ್ ನಾರಾಯಣ್ ಅವರು ಇದಕ್ಕಾಗಿ ಹೇಳಿದ್ದರು. ಇಂಥ ಆಶ್ವಾಸನೆಗಳನ್ನು ಕೊಡುತ್ತೀವಿ ಆದರೆ ನಿಭಾಯಿಸುವುದಕ್ಕೆ ಸಾಧ್ಯವಿಲ್ಲ. ಮಾನ್ಯ ವಿರೇಂದ್ರ ಪಾಟೀಲರು ಬಂದಿದ್ದಾರೆ. ತುಂಬಾ ಸಂತೋಷ. ನಾನು ಗೌರವದಿಂದ ಅವರಿಗೆ ಸಮರ್ಪಣೆ ಮಾಡುತ್ತೇನೆ. ನಿಮ್ಮ ಕಾಲದಲ್ಲಿ ಪ್ರಸ್ತಾಪ ಮಾಡಿದಂಥ ಅನೇಕ ಆಡಳಿತಾತ್ಮಕ ಸುಧಾರಣೆಗಳನ್ನು ಇವತ್ತು ನಾವು ಪ್ರಸ್ತಾಪ ಮಾಡಿದ್ದೇವೆ. ಏಕೆ ಈ ರೀತಿ ಶಾಸನಸಭೆಯ ದುರ್ಬಳಕ್ಕೆ ಮಾಡುತ್ತೀರಿ? ಈ ಶಾಸನಸಭೆಯ ಗೌರವನ್ನು ಕಳೆಯುತ್ತೀರಿ. ಜನರಿಗೆ ಪೊಳ್ಳು ಭರವಸೆ ಕೊಡುತ್ತೀರಿ ಇಂತಹ ಪ್ರಸಂಗಗಳನ್ನು ಊಹೆ ಮಾಡಿಯೇ ಜಯಪ್ರಕಾಶ್ ನಾರಾಯಣ್ ಅವರು ರೈಟು ರಿಕಾಲ್ ಇರಬೇಕೆನ್ನತಕ್ಕಂಥ ಮಾತನ್ನು ಹೇಳಿದ್ದರು. ರೈಟು ರಿ ಕಾಲ್‌ಗೆ ಇಲ್ಲಿ ಅವಕಾಶ ಇಲ್ಲ. ಅದಕ್ಕೆ ನಾವು ಐದು

ವರ್ಷ ಕಾಯಬೇಕು. ನಿಜವಾಗಿ ಏನು ನಡೆದಿದೆ ಎನ್ನತಕ್ಕಂಥದ್ದನ್ನು ಪರೀಕ್ಷೆ ಮಾಡಬೇಕಾದರೆ ಕನಿಷ್ಟ ಶಾಸನಸಭೆಯನ್ನು ವಿಸರ್ಜನೆ ಮಾಡಿ ಚುನಾವಣೆಗೆ ಹೋಗಬೇಕಾಗಿತ್ತು. ಅದು ಸಾಧ್ಯ ಆಗದಿದ್ದರೆ ಜಿಲ್ಲಾ ಪರಿಷತ್ತು ಮಂಡಲಪಂಚಾಯತಿ ಚುನಾವಣೆಗೆ ಮಾಡಿದ್ದರು. ಈ ಸರ್ಕಾರ ಎಷ್ಟುಮಟ್ಟಿಗೆ ತನ್ನ ನಡವಳಿಕೆಯಿಂದ ಜನಪ್ರಿಯವಾಗಿದೆ ಎನ್ನುತಕ್ಕಂಥಾದ್ದು ಗೊತ್ತಾಗುತ್ತದೆ. ಎರಡೂ ಸಾಧ್ಯವಿಲ್ಲ. ಅದನ್ನು ನಾವು ಸಹಿಸಿಕೊಳ್ಳಬೇಕಾಗಿದೆ ಸಹಿಸಿಕೊಳ್ಳುತ್ತೇವೆ ಆದರೆ ಈ ಒಂದು ರಾಜ್ಯಪಾಲರ ಭಾಷಣ ಎಷ್ಟು ನೀರಸವಾದಂಥಾದ್ದು ಎಷ್ಟು ನಿಕೃಷ್ಟವಾಗಿ ಕಾಣುತಕ್ಕಂಥದ್ದು.

ಆಡಳಿತ ಪಕ್ಷದಲ್ಲಿ ಉತ್ಸಾಹವೇ ಹೋಗಿಬಿಟ್ಟಿದೆ. ನನಗೆ ಏತಕ್ಕೆಂದು ತಿಳಿಯುತ್ತಿಲ್ಲ ನೀವೆ ನಿರೂಪಣಾ ಮಾಡತಕ್ಕಂಥ ಈ ಕಾಲದಲ್ಲಿ ಕೂಡ ಅದರ ಬಗ್ಗೆ ತಮ್ಮ ಅಲೋಚನೆಗಳನ್ನು ಅಭಿವ್ಯಕ್ತ ಮಾಡತಕ್ಕಂಥ ಕನಿಷ್ಟ ಸೌಜನ್ಯಕ್ಕಾಗಿ ನಾನು ಹೇಳಿದೆ. ಸಭೆಯಲ್ಲಿ ಸೂಚನೆ ಮಾಡತಕ್ಕಂತವರು ಅನುಮೋದನೆ ಮಾಡತಕ್ಕಂಥವರು ಕೂಡ ನಮ್ಮ ಅಭಿಪ್ರಾಯವನ್ನು ಸಂಗ್ರಹಣೆ ಮಾಡುವುದಕ್ಕೆ ಸಭೆಯಲ್ಲಿ ಹಾಜರಿಲ್ಲದೇ ಇರತಕ್ಕಂಥ ಸ್ಥಿತಿ ಬಂದಿರತಕ್ಕಂಥ ದುರವಸ್ತೆಯನ್ನು ನೋಡಿ ಈ ರಾಜ್ಯಪಾಲರ ಭಾಷಣ ಬರೀ ರಾಜಕೀಯ ಭಾಷಣವೇ ಹೊರತು ಈ ರಾಜ್ಯದ ನೀತಿ ನಿರೂಪಣೆ ಮಾಡತಕ್ಕಂಥ ಒಂದು ಸಮರ್ಥ ದಾಖಲೆಯಾಗಲಿಲ್ಲ ಎಂದು ವಿಷಾದವನ್ನು ವ್ಯಕ್ತಮಾಡಿ ನನ್ನ ಪರಿಪೂರ್ಣವಾದಂಥ ಮನಶುದ್ಧಿಯಾದಂಥ ವಿರೋಧವನ್ನು ವ್ಯಕ್ತಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಅಧ್ಯಕ್ಷರು ಇಷ್ಟು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

4.45 ಪಿ.ಎಂ

+ ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ತಿಂಗಳ 21ರಂದು ಮಾನ್ಯ ರಾಜ್ಯಪಾಲರು ಜಂಟಿ ಶಾಸನಸಭೆಯನ್ನುದ್ದೇಶಿಸಿ ಮಾಡಿದ ಭಾಷಣವನ್ನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡಲು ಇಚ್ಛಿಸುತ್ತೇನೆ. ಹಳ್ಳಿಯಲ್ಲಿ ಒಂದು ಗಾದೆ ಇದೆ. ಆಡು ಮುಟ್ಟದ ಸೊಪ್ಪಿಲ್ಲ. ನನ್ನ ಸರ್ಕಾರ ಸಾಧಿಸದ ಪ್ರಗತಿ ಇಲ್ಲ. ಎಂದು ಅಂದರೆ ಪ್ರತಿಯೊಂದು ವಲಯದಲ್ಲೂ ಪ್ರತಿಯೊಂದು ಕ್ಷೇತ್ರದಲ್ಲೂ ಹೆಚ್ಚಿನ ಪ್ರಗತಿಯನ್ನು ಸಾಧಿಸತಕ್ಕ ಉದ್ದೇಶದಿಂದ ಅನೇಕ ಕಾರ್ಯಕ್ರಮಗಳನ್ನು ಈ ಸರ್ಕಾರ ಹಮ್ಮಿಕೊಂಡಿದೆ. ಅದರಲ್ಲಿ ಮುಖ್ಯವಾಗಿರತಕ್ಕದ್ದು ಉದಾಹರಣೆಗೆ ಹೇಳುವುದಾದರೆ 600 ಕೋಟಿ ರೂಪಾಯಿ ವೆಚ್ಚದಲ್ಲಿ 5 ವರ್ಷಗಳಲ್ಲಿ ಕಾರ್ಯಗತಗೊಳಿಸತಕ್ಕ ಕಾರ್ಯಕ್ರಮವನ್ನು ನಾವು ಹಮ್ಮಿಕೊಂಡಿದ್ದೇವೆ.

ಕರ್ನಾಟಕದ ಗ್ರಾಮಾಂತರ ಜನರಿಗೆ ವಿಫುಲವಾದ ಉದ್ಯೋಗವಕಾಶ ಕಲ್ಪಿಸಿಕೊಡುವ ವಿಶ್ವದಂತ ಬೃಹತ್ ಯೋಜನೆ ಬೇರೆ ಯಾವ ರಾಜ್ಯದಲ್ಲೂ ಇಲ್ಲ. ವಿಶ್ವ ಯೋಜನೆ ಅಡಿಯಲ್ಲಿ ತಯಾರಿಸಿದ ವಸ್ತುಗಳಿಗೆ ವಿದೇಶಗಳಲ್ಲಿ ಭಾರೀ ಪ್ರೋತ್ಸಾಹ ಸಿಕ್ಕಿದೆ. 65 ಸಾವಿರ ಡಾಲರ್ ಮೊತ್ತದ ಬೇಡಿಕೆ ಈಗಾಗಲೇ ಸಿಂಗಾಪುರದಿಂದ ಬಂದಿದೆ. ವಿಶ್ವ ವಸ್ತುಗಳಿಗೆ ಮಾರುಕಟ್ಟೆಯನ್ನು ವಿಸ್ತರಿಸಬೇಕೆಂದು ನಮ್ಮ ರಾಜ್ಯದ ಉನ್ನತ ಮಟ್ಟದ ಅಧಿಕಾರಿಗಳನ್ನು ಜಪಾನ್ ದೇಶಕ್ಕೆ ಶೀಘ್ರವಾಗಿ ಕಳುಹಿಸುವ ಕಾರ್ಯಕ್ರಮ ಇದೆ. ವಿಶ್ವ ಯೋಜನೆಯ ಅಡಿಯಲ್ಲಿ ಮಾರಾಟ ಮಾಡತಕ್ಕ ವಸ್ತುಗಳ ಗುಣಮಟ್ಟವನ್ನು ಕಾಪಾಡಿಕೊಂಡು ಬರಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶವನ್ನು ನೀಡಲಾಗಿದೆ. ಒಂದು ವೇಳೆ ವಿಶ್ವ ಯೋಜನೆ ಕೆಳಗೆ ಕಳಪೆ ವಸ್ತುಗಳು ತಯಾರಾಗಿದ್ದರೆ ಅಂಥ ವಸ್ತುಗಳನ್ನು ಮಾರಾಟಕ್ಕೆ ಬಿಡುವುದು ಬೇಡ.

ಅವನ್ನು ಅಲ್ಲೇ ಬಿಸಾಡಿ ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ಕೊಟ್ಟಿದ್ದೇವೆ. ಈಗ ಹೊಸದಾಗಿ ಕಟ್ಟತಕ್ಕ ಮನೆಗಳಿಗೆ ಬೇಕಾಗಿರತಕ್ಕ ಕಿಟಕಿ, ಬಾಗಿಲುಗಳಿಗೆ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯಿಂದ ಬೇಡಿಕೆ ಬಂದಿದೆ. ವಿಶ್ವ ಯೋಜನೆ ಅಡಿಯಲ್ಲಿ ಅವುಗಳನ್ನು ತಯಾರಿಸುವುದರಿಂದ ಆ ವಸ್ತುಗಳಿಗೆ 35 ಕೋಟಿ ರೂಪಾಯಿಗಳ ಬೇಡಿಕೆ ಬಂದಿದೆ.

ಶ್ರೀಮತಿ ಮೋಟಮ್ಮ : ನಮ್ಮ ಕಾರ್ಯಕ್ರಮಗಳನ್ನು ಆ ಕಡೆಯವರಿಗೆ ಹೇಳಬೇಕಾಗಿದೆ. ಯಾರೂ ಕೇಳುವವರು ಇಲ್ಲದಿದ್ದರೆ ಯಾರಿಗೆ ಹೇಳಬೇಕು?

ಉಪಾಧ್ಯಕ್ಷಿಣಿಯವರು : ಅವರು ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ಗೆ ಹೋಗಿದ್ದಾರೆ. ತಾವು ತಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ವಿರೋಧ ಪಕ್ಷದಲ್ಲಿ ಎಲ್ಲರೂ ಬಿ.ಎ.ಸಿ ಸದಸ್ಯರಲ್ಲ.

ಉಪಾಧ್ಯಕ್ಷಿಣಿಯವರು : ಇಬ್ಬರು ಇದ್ದಾರೆ. ನೀವು ಭಾಷಣ ಮುಂದುವರಿಸಿ

ಶ್ರೀ ಜಿ. ರಾಜುಗೌಡ : ಸರ್ಕಾರದ ಕಾರ್ಯನೀತಿ ಏನು, ಸರ್ಕಾರದ ಕಾರ್ಯಕ್ರಮಗಳು ಏನು ಎಂದು ಹೇಳುತ್ತಿದ್ದೆ. ವಿಶ್ವ ಯೋಜನೆ ಅಡಿಯಲ್ಲಿ ತಯಾರು ಮಾಡಿರತಕ್ಕ ವಸ್ತುಗಳಿಗೆ ಆಗ್ನೇಯ ಏಶಿಯಾದಲ್ಲಿ ಸಿಂಗಾಪುರ ಸಹ ಮುಂದೆ ಬಂದಿದೆ. ಅಕ್ಟೋಬರ್ 2ರಿಂದ ಇಲ್ಲಿಯವರೆಗೆ ವಿಶ್ವ ಯೋಜನೆ ಅಡಿಯಲ್ಲಿ ಸುಮಾರು 147 ವಸ್ತುಗಳನ್ನು ನಾವು ತಯಾರಿಸಿ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪ್ರದರ್ಶನಕ್ಕೆ ಇಟ್ಟಿದ್ದೆವು. ಅವನ್ನು ತಾವೆಲ್ಲರೂ ನೋಡಿದ್ದೇವೆಂದು ತಿಳಿದುಕೊಂಡಿದ್ದೇನೆ. ಕೆಲವರು ಮಾತನಾಡುತ್ತಾ ವಿಶ್ವಯೋಜನಾ ಕಾರ್ಯಕ್ರಮ ಇಂದು ಜಾರಿಯಲ್ಲಿ ಇಲ್ಲವೆಂದು ಹೇಳಿದರು. ನಾವು ಏರ್ಪಡಿಸಿದ್ದ ಪ್ರದರ್ಶನವನ್ನು ನೋಡಿಯೂ ಇನ್ನೂ ಆ ಯೋಜನೆ ಜಾರಿಗೆ ಬಂದಿಲ್ಲವೆಂದು ಹೇಳುವುದರಲ್ಲಿ ಹುರುಳಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಜಲ ವಿದ್ಯುತ್ ಯೋಜನೆ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಭಾರಿ ಪ್ರಮಾಣದ ಜಲ ವಿದ್ಯುತ್ ಯೋಜನೆಯಲ್ಲಿ ಪಾಲ್ಗೊಳ್ಳಲು ಖಾಸಗಿ ವಲಯಕ್ಕೆ ಆಹ್ವಾನಿಸಲು ಸರ್ಕಾರ ಉದ್ದೇಶಿಸಿದೆ. ಅತ್ಯುತ್ತಮ ತಂತ್ರಜ್ಞಾನ ಮತ್ತು ಆಧುನಿಕ ರೀತಿಯಲ್ಲಿ ಶೀಘ್ರವಾಗಿ ಪೂರ್ಣಗೊಳಿಸಲು ಕ್ರಿಸ್ತಶಕ 2000 ಇಸವಿಯೊಳಗೆ ಸ್ವಯಂಪರಿಪೂರ್ಣತೆಯನ್ನು ಸಾಧಿಸಲು ಯೋಜನೆಗಳನ್ನು ಸಾರ್ವಜನಿಕ, ಖಾಸಗಿ ಮತ್ತು ಜಂಟಿ ವಲಯಗಳಲ್ಲಿ ಕೈಗೆತ್ತಿಕೊಳ್ಳಲು ನಮ್ಮ ಸರ್ಕಾರ ನಿರ್ಧರಿಸಿದೆ. ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ಖಾಸಗಿ ವಲಯ ಪಾಲ್ಗೊಳ್ಳುವುದಕ್ಕೆ ಅನುಮತಿ ನೀಡುವ ಸರ್ಕಾರದ ಕಾರ್ಯನೀತಿಗನುಗುಣವಾಗಿ ಕೆಲವು ಸಣ್ಣಪುಟ್ಟ ಜಲ ವಿದ್ಯುತ್ ಯೋಜನೆಗಳ ಅನುಷ್ಠಾನಕ್ಕೆ ಈಗಾಗಲೇ ಖಾಸಗಿ ವಲಯಗಳಿಗೆ ವಹಿಸಿಕೊಡಲಾಗಿದೆ. ಅನೇಕ ಭಾರಿ ಪ್ರಮಾಣದ ಯೋಜನೆಗಳನ್ನು ಈಗಾಗಲೇ ಗುರುತಿಸಿದ್ದು ಅವುಗಳ ಅನುಷ್ಠಾನ ಕಾರ್ಯಕ್ರಮವನ್ನು ಶೀಘ್ರದಲ್ಲಿಯೇ ಕೈಗೆತ್ತಿಕೊಳ್ಳಲಾಗುವುದು. ಕೃಷ್ಣಾ ಪ್ರಾಧಿಕಾರ. ಕ್ರಿಸ್ತಶಕ 2 ಸಾವಿರದ ಇಸವಿಯೊಳಗೆ ಕೃಷ್ಣಾ ನದಿ ನೀರಿನ ರಾಜ್ಯದ ಪಾಲನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಸರ್ವ ಪ್ರಯತ್ನ ನಮ್ಮ ಸರ್ಕಾರ ನಡೆಸಿದೆ. ಈ ದಿಸೆಯಲ್ಲಿ ಸ್ವಾಯತ್ತ ಕೃಷ್ಣಾ ಕಣಿವೆ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ. ಈ ಪ್ರಕಾರ ಕೃಷ್ಣಾ ಪ್ರದೇಶದಲ್ಲಿರತಕ್ಕ ಬೃಹತ್, ಮಧ್ಯಮ ಮತ್ತು ಸಣ್ಣ ನೀರಾವರಿಗಳ ರಚನೆ, ಅನುಷ್ಠಾನ ಮತ್ತು ನಿರ್ವಹಣೆ ಜವಾಬ್ದಾರಿ ಜೊತೆಗೆ

ಈ ಪ್ರದೇಶದಲ್ಲಿ ಬರತಕ್ಕ ಅಚ್ಚುಕಟ್ಟು ಪ್ರದೇಶದ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಕೂಡ ಆ ಪ್ರಾಧಿಕಾರಕ್ಕೆ ವಹಿಸಲಾಗಿದೆ.

ಅದೇ ರೀತಿ ಕಾವೇರಿ ಕಣಿವೆ ಪ್ರದೇಶಗಳಿವೆ. ರೈತರ ಹಿತಾಸಕ್ತಿಗಳನ್ನು ಕಾಪಾಡುವ ಕಾರ್ಯಕ್ರಮಗಳನ್ನು ಕೂಡ ನಾವು ಹಾಕಿಕೊಂಡಿದ್ದೇವೆ. ಕಾವೇರಿ ನೀರಿನ ಸಮಸ್ಯೆಯನ್ನು ಈಗ ಪ್ರಧಾನ ಮಂತ್ರಿಯವರು ಕೈಗೆತ್ತಿಕೊಂಡಿದ್ದಾರೆ. ಎಲ್ಲಾ ರಾಜ್ಯಗಳ ರೈತರ ಹಿತಾಸಕ್ತಿಯನ್ನು ಗಮನಿಸಬೇಕು. ನದಿ ನೀರನ್ನು ರಾಷ್ಟ್ರೀಯ ಸಂಪನ್ಮೂಲವೆಂದು ಪರಿಗಣಿಸಬೇಕು ಮತ್ತು ನೀರನ್ನು ಬಿಡಬೇಕೆಂಬ ಬೇಡಿಕೆ ಬಂದಾಗ ಪ್ರಕೃತಿ ವಿಕೋಪ ಅಂದರೆ ಅನಾವೃಷ್ಟಿ ಮತ್ತು ದೊರೆಯತಕ್ಕ ನೀರಿನ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡು ಅದನ್ನು ಹಂಚಬೇಕು ಎಂದು ಹೇಳಿರುವುದು ಅದರ ಹಿನ್ನೆಲೆ ಏನು ಅರ್ಥವಾಗುತ್ತದೆ ಎಂದು ಹೇಳಿದರೆ ರಾಷ್ಟ್ರೀಯ ಜಲನೀತಿಯ ಆಧಾರದ ಮೇಲೆ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂಬ ವಿಚಾರವನ್ನು ಅವರು ಮನಸ್ಸಿನಲ್ಲಿ ಇಟ್ಟುಕೊಂಡಿದ್ದಾರೆ. ಅಂದರೆ ಕಾವೇರಿ ನದಿ ನೀರಿನ ವಿಷಯವಾಗಿ ನಮ್ಮ ರಾಜ್ಯಕ್ಕೆ ಯಾವುದೇ ರೀತಿಯಿಂದಲೂ ಧಕ್ಕೆಯಾಗುವುದಿಲ್ಲ ಎಂಬ ಭಾವನೆ ಅವರ ಮಾತಿನಲ್ಲಿ ಇರುವುದರಿಂದ ಆ ವಿಷಯದಲ್ಲಿ ಯಾರೂ ಗಾಬರಿಪಡಬೇಕಾಗಿಲ್ಲ ಎಂಬ ವಿಷಯವನ್ನು ಹೇಳಲು ಇಚ್ಛೆಪಡುತ್ತಿದ್ದೇನೆ.

ಇನ್ನು ಪಂಚಾಯತ್ ರಾಜ್ಯ. ರಾಜ್ಯದಲ್ಲಿ ಪಂಚಾಯಿತಿ ರಾಜ್ಯ ಸಂಸ್ಥೆಗಳ ಕಾರ್ಯ ನಿರ್ವಹಣೆಯಲ್ಲಿ ಕಳೆದ ಐದು ವರ್ಷದಲ್ಲಿ ಅನುಭವಿಸಿರುವ ಅನುಭವವನ್ನು ದೃಷ್ಟಿಯಲ್ಲಿಟ್ಟುಕೊಂಡು ಕ್ರಾಂತಿಕಾರಕ ಪಂಚಾಯಿತಿ ರಾಜ್ಯ ವಿಧೇಯಕವನ್ನು ನಮ್ಮ ಸರ್ಕಾರ ತರಲು ಉದ್ದೇಶಿಸಿದೆ. ಉದ್ದೇಶಿಸಿರತಕ್ಕ ಹೊಸ ವಿಧೇಯಕದಲ್ಲಿ ರಾಜಕೀಯ ಮತ್ತು ಆಡಳಿತ ವಿಕೇಂದ್ರೀಕರಣಗಳನ್ನು ತರಲು ಮತ್ತು 1991ರಲ್ಲಿ ನಡೆಸಿದ ಜನಗಣತಿ ಆಧಾರದ ಮೇಲೆ ಮತಕ್ಷೇತ್ರಗಳನ್ನು ಪುನರ್‌ವಿಂಗಡಿಸಿ ಚುನಾವಣೆ ನಡೆಸತಕ್ಕ ಉದ್ದೇಶ ಸರ್ಕಾರಕ್ಕಿದೆಯೇ ಹೊರತು ಮಂಡಲ ಪಂಚಾಯಿತಿ ಅಥವಾ ಜಿಲ್ಲಾ ಪರಿಷತ್ತುಗಳ ಚುನಾವಣೆ ಮಾಡುವುದಿಲ್ಲ ಎಂದು ನಮ್ಮ ವಿರೋಧಿ ಮಿತ್ರರು ಏನು ಹೇಳುತ್ತಾರೆ ಆ ಮಾತಿನಲ್ಲಿ ಹುರುಳಿಲ್ಲ ಎಂದು ಹೇಳುತ್ತೇನೆ. ಬಹುಶಃ ಅವರೇ ಈ ಕಡೆ ಕುಳಿತಿದ್ದಾಗ 91ರ ಜನಗಣತಿ ಆಧಾರದ ಮೇಲೆ ಚುನಾವಣೆ ನಡೆಸಬೇಕೆಂದಿದ್ದರು. ಏಕೆಂದರೆ ಅನೇಕ ಜನಗಳಿಗೆ ಈ ಸೌಲಭ್ಯ ತಪ್ಪುತ್ತದೆಂಬ ದೃಷ್ಟಿಯಿಂದ 1991ರಲ್ಲಿ ಏನು ಜನಗಣತಿ ಮಾಡಿದ್ದೇವೆ ಅದರಂತೆ ಎಲ್ಲಾ ಜನರೂ ಪಾಲ್ಗೊಳ್ಳುವುದಕ್ಕೆ ಒಂದು ಅವಕಾಶ ಕಲ್ಪಿಸುವ ದೃಷ್ಟಿಯಿಂದ ನಾವು ಚುನಾವಣೆ ಮುಂದಕ್ಕೆ ಹಾಕಿದ್ದೇವೆಯೇ ಹೊರತು ಪ್ರಜಾಪ್ರಭುತ್ವ ಕೊಲೆ ಮಾಡುತ್ತೇವೆ ಎಂಬ ವಿರೋಧಪಕ್ಷದ ಮಿತ್ರರ ಮಾತಿನಲ್ಲಿ ಯಾವ ಹುರುಳೂ ಇಲ್ಲ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. 1989-90ರ ದಶಕದಲ್ಲಿ ರಾಜ್ಯದಲ್ಲಿ ಕೃಷಿ ಉತ್ಪಾದನೆ ಇಳಿಮುಖವಾಗಿದೆ. ಆ ಬಗ್ಗೆ ನಮ್ಮ ಸರ್ಕಾರ ಯೋಚಿಸಿ ಕೃಷಿ ವಲಯದ ಸರ್ವತೋಮುಖ ಅಭಿವೃದ್ಧಿಗಾಗಿ ಆದ್ಯತೆ ಕೊಟ್ಟಿದೆ. ಮುಂಗಾರು ಮತ್ತು ಹಿಂಗಾರು ಬೆಳೆಗಳಲ್ಲಿ ಕನಿಷ್ಠ 82ಲಕ್ಷ ಟನ್ ಆಹಾರೋತ್ಪಾದನೆ ಗುರಿಯನ್ನು ಇಟ್ಟುಕೊಂಡು ಆ ಹಿನ್ನೆಲೆಯಲ್ಲಿ ಭೂಸಾರ ಪರೀಕ್ಷೆ ಸುಧಾರಿತ ಬೀಜಗಳ ಪೂರೈಕೆ, ಆಧುನಿಕ ಕೃಷಿ ಉಪಕರಣಗಳ ಸಲಕರಣೆ ಮುಂತಾದ ಸೌಲಭ್ಯಗಳನ್ನು ಕಲ್ಪಿಸತಕ್ಕ ಗುರಿ ಇಟ್ಟುಕೊಂಡಿದ್ದೇವೆ. ಕೃಷಿ ಕ್ಷೇತ್ರದಲ್ಲಿ ಉನ್ನತ ಶಿಕ್ಷಣ ಕೊಡಲು ಕೋಲಾರದಲ್ಲಿ ಒಂದು ರೇಷ್ಮೆ ಕಾಲೇಜು ಮತ್ತು ಕೊಡಗು ಜಿಲ್ಲೆಯಲ್ಲಿ ಒಂದು ಅರಣ್ಯ ಕಾಲೇಜು ಪ್ರಾರಂಭಿಸಲು ನಿಷ್ಕರ್ಷೆ ಮಾಡಿದೆ.

ಇನ್ನು ಬಸ್ ಪ್ರಯಾಣಿಕರಿಗೆ ಹೆಚ್ಚಿನ ಸಾಕರ್ಯ ಒದಗಿಸುವ ಸಲುವಾಗಿ ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಖಾಸಗೀ ಬಸ್‌ಗಳ ಸಂಚಾರಕ್ಕೆ ಅನುಮತಿ ನೀಡಲಾಗಿದೆ. ಮತ್ತು ಆಯ್ದ ಕೆಲಸವು ಸಾರ್ವಜನಿಕ ವಲಯದ ಕೈಗಾರಿಕೆಗಳನ್ನು ಖಾಸಗೀಕರಣಗೊಳಿಸಲು ನಿರ್ಧರಿಸಲಾಗಿದೆ. ಕೆಲವು ರೋಗಗ್ರಸ್ಥ ಕೈಗಾರಿಕೆಗಳಲ್ಲಿ ಸರ್ಕಾರ ಹೂಡಿರತಕ್ಕ ಹಣವನ್ನು ಹಿಂತೆಗೆದುಕೊಂಡು ಬಡವರ ಕಲ್ಯಾಣಕ್ಕಾಗಿ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಆ ಹಣವನ್ನು ತೊಡಗಿಸಬೇಕೆಂದು ನಮ್ಮ ಸರ್ಕಾರ ನಿರ್ಧಾರ ಮಾಡಿದೆ. ಮತ್ತು ಮಹಿಳೆಯರ ಮೇಲೆ ದೌರ್ಜನ್ಯ ಬಾಲ್ಯ ವಿವಾಹ, ವರದಕ್ಷಿಣೆ ಮುಂತಾದ ವಿಷಯಗಳ ಬಗ್ಗೆ ಗಮನಹರಿಸಲು ರಾಜ್ಯ ಮಟ್ಟದಲ್ಲಿ ಒಂದು ಮಹಿಳಾ ಆಯೋಗವನ್ನು ರಚಿಸಲು ಸರ್ಕಾರ ಮನಸ್ಸು ಮಾಡಿದೆ. ಅದೇ ರೀತಿ ಎಸ್‌ಸಿ ಎಸ್‌ಟಿ ಕಮಿಷನ್ ಎಂದು ಕರೆಯಲಾಗುವ ಉನ್ನತ ಮಟ್ಟದ ಪ್ರಾಧಿಕಾರವನ್ನು ರಚಿಸಲು ಉದ್ದೇಶಿಸಲಾಗಿದ್ದು ಸಂವಿಧಾನಾತ್ಮಕ, ಶಾಸನಾತ್ಮಕ ಹಾಗೂ ಆರ್ಥಿಕವಾಗಿ ಒದಗಿಸಿರುವ ರಕ್ಷಣೆಗಳಿಗೆ ಸಂಬಂಧಪಟ್ಟ ಎಲ್ಲ ಮೇಲ್ವಿಚಾರಣೆಗಳನ್ನು ಮಾಡುವ ಕೆಲಸವನ್ನು ಪ್ರಾಧಿಕಾರಕ್ಕೆ ವಹಿಸಲಾಗಿದೆ. ಮತ್ತು ಅಕ್ಕಿ, ಗೋಧಿ, ಸಕ್ಕರೆ ಮತ್ತು ಸೀಮೆಎಣ್ಣೆಯನ್ನು ಸಾರ್ವಜನಿಕ ವಿತರಣೆ ಮೂಲಕ ಹಂಚಲಾಗುತ್ತಿದೆ. ಮತ್ತು ದೂರದ ಸ್ಥಳಗಳಿಗೆ ಮನೆ ಬಾಗಿಲಿಗೆ ಸಾರ್ವಜನಿಕ ವಿತರಣೆ ವ್ಯವಸ್ಥೆಯನ್ನು ಕೊಡತಕ್ಕ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಹಮ್ಮಿಕ್ಕೊಂಡಿದೆ. ಮತ್ತು ರಾಜ್ಯದಲ್ಲಿ ಸಂಪೂರ್ಣ ಸಾಕ್ಷರತೆಯನ್ನು ಕೊಡುವ ಆಂದೋಳನವನ್ನು ನಮ್ಮ ಸರ್ಕಾರ ಪ್ರಾರಂಭಿಸಿದೆ.

ದಕ್ಷಿಣ ಕನ್ನಡದಲ್ಲಿ ಸಂಪೂರ್ಣ ಸಾಕ್ಷರತೆಯನ್ನು ಸಾಧಿಸಲಾಗಿದೆ. ತುಮಕೂರು, ಬೀದರ್, ಶಿವಮೊಗ್ಗ, ಬಿಜಾಪುರ ಜಿಲ್ಲೆಗಳನ್ನು ಈ ಕಾರ್ಯಕ್ರಮದ ವ್ಯಾಪ್ತಿಗೆ ತರಲಾಗಿದೆ. ಅನಕ್ಷರತೆಯನ್ನು ಹೋಗಲಾಡಿಸುವ ಗುರಿಯನ್ನು ನಾವು 8 ನೇ ಯೋಜನೆಯಲ್ಲಿ ಇಟ್ಟಿದ್ದೇವೆ. ಪಂಚಸೂತ್ರ ಎನ್ನುವ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಆರಂಭಿಸಿದೆ. ಇದರ ಉದ್ದೇಶ, ಆಡಳಿತ ಯಂತ್ರವನ್ನು ಚುರುಕುಮಾಡುವುದು. ಈ ಪಂಚಸೂತ್ರದ ಪರಿಣಾಮವಾಗಿ ಶ್ರೀಮಾನ್ ಮೊಯ್ಲಿಯವರು ಈಗಾಗಲೇ ಅವರ ಇಲಾಖೆಯಲ್ಲಿ ಸಂಬಂಧಪಟ್ಟಹಾಗೆ ಎರಡನೇ ಬಾರಿಗೆ ಈ ಕಡತಯಜ್ಞವನ್ನು ಅವರು ಪ್ರಾರಂಭ ಮಾಡಿದ್ದಾರೆ. ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕ, ಪರಿಹಾರ ಸಿಗದೇ ಇರುವ ಯಾವ ಕಡತಗಳು ಇವೆಯೋ ಆ ಕಡತಗಳನ್ನು ತಕ್ಷಣ ವಿಲೇವಾರಿ ಮಾಡುವುದೇ ಇದರ ಉದ್ದೇಶ. ಪಂಚಸೂತ್ರದ ಆಧಾರದ ಮೇಲೆ ನಮ್ಮ ಸರ್ಕಾರ ಇನ್ನಿತರ ಎಲ್ಲಾ ಇಲಾಖೆಗಳಿಗೂ ಕಟ್ಟುನಿಟ್ಟಿನ ಆದೇಶವನ್ನು ಕೊಟ್ಟಿದೆ. ಅದರ ಪ್ರಕಾರ ಹಿಂದೆ ವಿಲೇವಾರಿ ಆಗದೆ ಇರುವ ಎಲ್ಲ ಕಡತಗಳನ್ನು ಬಾಕಿ ಇಲ್ಲದ ಹಾಗೆ ವಿಲೇವಾರಿ ಮಾಡಬೇಕು ಎನ್ನುವ ವಿಶ್ವಾಸದಿಂದ ಆ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ನಮ್ಮ ಸರ್ಕಾರ ವಿಶ್ವ, ಅಕ್ಷಯ, ಆಶ್ರಯ, ಆರಾಧನ ಮುಂತಾದ ಯೋಜನೆಗಳನ್ನು ತಂದು ಕ್ರಾಂತಿಕಾರಕ ಬದಲಾವಣೆ ಮಾಡಬೇಕೆಂದು ಆಸಕ್ತಿ ವಹಿಸಿದೆ. ನಮ್ಮ ಸರ್ಕಾರ ಹೆಚ್ಚಿನ ಗಮನವನ್ನು ಹೆಚ್ಚಿನ ಆಸಕ್ತಿಯಿಂದ ವಹಿಸಿ ಇವೆಲ್ಲವನ್ನೂ ಜಾರಿಗೆ ತಂದು ತನ್ಮೂಲಕ ರಾಜ್ಯದಲ್ಲಿರುವ ಹಿಂದುಳಿದ ವರ್ಗದ ಜನರಿಗೆ ಅನುಕೂಲ ಒದಗಿಸಿಕೊಡಬೇಕೆಂದು ಒಳ್ಳೆಯ ದೃಷ್ಟಿಯಿಂದ ಕೆಲಸ ಮಾಡುತ್ತಿರುವಾಗ ನಮ್ಮ ಕೆಲವು ವಿಚಾರಗಳನ್ನು ವಿರೋಧ ಪಕ್ಷದವರು ಹಳದಿ ಕಣ್ಣಿನಲ್ಲಿ ನೋಡುತ್ತಾರೆಂದು ಹೇಳುತ್ತೇನೆ. ಆರಾಧನ ಎಂಬುದು ಗೊತ್ತೇ ಇಲ್ಲ ಎಂದು ವಿರೋಧ ಪಕ್ಷದ ನಾಯಕರು ಹೇಳಿದರು. ಪ್ರತಿಯೊಬ್ಬ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆ ಮಾಡಿದ್ದು ಎಲ್ಲೆಲ್ಲಿ ಹರಿಜನರ

ಬೀದಿಯಲ್ಲಿ, ಪರಿಶಿಷ್ಟ ಪಂಗಡದವರು ಇರುವ ಬೀದಿಗಳಲ್ಲಿ, ಒಡ್ಡರ ಕೇರಿಗಳಲ್ಲಿ ಇರತಕ್ಕ ದೇವಸ್ಥಾನಗಳ ಜೀರ್ಣೋದ್ಧಾರ, ದುರಸ್ಥಿ ಅಥವಾ ಹೊಸ ದೇವಸ್ಥಾನಗಳ ನಿರ್ಮಾಣ ಕಾರ್ಯ ಕೈಗೊಳ್ಳುವುದೇ ಇದಾಗಿದೆ.

ಮೈಸೂರು ಜಿಲ್ಲೆಯಲ್ಲಿ ಸುಮಾರು 69 ಲಕ್ಷ ರೂಪಾಯಿಗಳನ್ನು ಸರ್ಕಾರ ಕೊಟ್ಟಿದೆ. ನಮ್ಮ ತಾಲ್ಲೂಕಿನಲ್ಲಿ 2 ಲಕ್ಷ ರೂ. ಗಳನ್ನು ನಾವು ತೆಗೆದುಕೊಂಡಿದ್ದೇವೆ. ಇದು ಎಲ್ಲರಿಗೂ ತಿಳಿದಿರುವ ಕಾರ್ಯಕ್ರಮ. ಇಡೀ ರಾಜ್ಯದಲ್ಲಿ ಅನೇಕ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಈ ಹಣ ಬಿಡುಗಡೆಯಾಗಿದೆ. ಇದು ನಮ್ಮ ಕಣ್ಣೆದುರಿಗೆ ಇರುವಾಗ ಸಾಕ್ಷಿ ಬೇಕೇ? ಆರಾಧನಾ ಕಾರ್ಯಕ್ರಮ ಜಾರಿಯಲ್ಲಿಇದೆ ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಆಶ್ರಯ ಯೋಜನೆ ಬಗ್ಗೆ ಹೇಳುವುದಾದರೆ ಇದುವರೆವಿಗೂ ಯಾವ ಮುಖ್ಯಮಂತ್ರಿಗಳೂ ಇಂತಹ ಒಂದು ಒಳ್ಳೆಯ ಕಾರ್ಯಕ್ರಮವನ್ನು ಕೈಗೊಂಡಿಲ್ಲವೆಂದು ಹೇಳಬೇಕಾಗಿದೆ. ಪ್ರತಿಯೊಂದು ಕ್ಷೇತ್ರಕ್ಕೆ ಕನಿಷ್ಟ 1 ಸಾವಿರ ಮನೆಗಳನ್ನು ಕೊಟ್ಟಿದ್ದೇವೆಂದು ಹೇಳುತ್ತೇವೆ. ಅಂಬೇಡ್ಕರ್‌ರವರ ಹೆಸರನ್ನು ಏಕೆ ಕೆಡಿಸುತ್ತೀರಿ ಎಂದು ಹೇಳುತ್ತೀರಿ. ಅಂಬೇಡ್ಕರ್‌ರವರ ಹೆಸರಿನಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ 100 ಮನೆಗಳನ್ನು ಕೊಟ್ಟಿದ್ದೇವೆ. ಈ ಯೋಜನೆ ಕೆಳಗೆ ನಾವು ಫಲಾನುಭವಿಗಳನ್ನು ಆಯ್ಕೆ ಮಾಡಿದ್ದೇವೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ 1,100 ಮನೆಗಳನ್ನು ಕೊಟ್ಟಿದ್ದೇವೆ. ನಗರ ಕೇಂದ್ರ, ತಾಲ್ಲೂಕು ಕೇಂದ್ರದಲ್ಲಿ 200 ಮನೆಗಳನ್ನು ಕೊಟ್ಟು ತಾಲ್ಲೂಕಿನಲ್ಲಿರುವ ಇನ್ನಿತರೇ ಗ್ರಾಮಾಂತರ ಪ್ರದೇಶದಲ್ಲಿ 800 ಮನೆಗಳನ್ನು ಕೊಟ್ಟಿದ್ದೇವೆ.

800+200 ಒಟ್ಟು ಸಾವಿರ ಮನೆಗಳಾಗುತ್ತವೆ. ಎಲ್ಲಿ ತಾಲ್ಲೂಕು ಕೇಂದ್ರಗಳು ಇಲ್ಲವೋ ಅಂತಹ ಸ್ಥಳಗಳಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಸಾವಿರ ಮನೆಗಳನ್ನು ಕೊಟ್ಟಿದ್ದೇವೆ ಮನೆಗಳ ಕೆಲಸ ಕಾರ್ಯಗಳು ನಡೆಯುತ್ತಿವೆ. ನಮ್ಮ ಮೈಸೂರು ಜಿಲ್ಲೆಯಲ್ಲಿ ಒಂದು ಏಜೆನ್ಸಿಗೆ ಕೊಟ್ಟಿದ್ದಾರೆ. 'ನಿತ್ಯಾನಂದ ಏಜೆನ್ಸಿ' ಅವರು ಈಗಾಗಲೇ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿ ಅವರು ನನ್ನನ್ನು ನಾಲ್ಕೈದು ಕಡೆ ಕರೆದುಕೊಂಡು ಹೋಗಿ ಪೂಜೆ ಮಾಡಿಸಿದ್ದಾರೆ. ಅವರು ಒಂದು ಕಡೆ ಮೋಲ್ಡ್ ಮನೆ ತಯಾರು ಮಾಡಿದ್ದಾರೆ. ಆ ಮನೆ ಎರಡು ಚದರವಿದೆ. ಅದರಲ್ಲಿ ಲೆಟ್ರಿನ್, ಬಾತ್‌ರೂಮ್, ಅಡಿಗೆ ಕೋಣೆ ಒಂದು ಹಜಾರ ಇದೆ. ಅದು ಒಂದು ಬಡ ಕುಟುಂಬಕ್ಕೆ ಸಾಕಾಗುತ್ತದೆ. ತಾರಸಿ ಮಾಡಿದ್ದಾರೆ ಅದು ಬಹಳ ಗಟ್ಟಿಯಾಗಿದೆ. ಅದು ಹತ್ತಾರು ವರ್ಷಗಳೇಕೆ ನೂರಾರು ವರ್ಷ ಬಾಳಿಕೆ ಬರುವಂತಹ ಶಕ್ತಿ ಆ ಮನೆಗೆ ಇದೆ. ತಳ್ಳಿದರೆ ಬಿದ್ದುಹೋಗುತ್ತವೆಂದು ವಿರೋಧ ಪಕ್ಷದ ಸದಸ್ಯರು ಹೇಳಿದರು. ನಾವು ಮಾಡಿರತಕ್ಕ ಕೆಲಸವನ್ನು ಕಣ್ಣಾರೆ ನೋಡಿ ಮಾತನಾಡಿ. ನೀವು ನಿಜವಾಗಿಯೂ ರಚನಾತ್ಮಕ ಸಲಹೆಗಳನ್ನು ಕೊಡಿ ನಾವು ಒಪ್ಪಿಕೊಳ್ಳುತ್ತೇವೆ. ಮಾಡಿರತಕ್ಕ ಕೆಲಸವನ್ನು ಕಣ್ಣಾರೆ ನೋಡಿ ಅದು ಕಳಪೆ ಕೆಲಸವೆಂದು ಹೇಳಬೇಕಾದರೆ ಅವರ ಮನಸ್ಸಿನಲ್ಲಿ ನಮ್ಮ ಸರಕಾರದ ಬಗ್ಗೆ ಜಿಗುಪ್ಸೆ ಇದೆಯೆಂದು ಒತ್ತಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ದಯಮಾಡಿ ನನ್ನ ಕ್ಷೇತ್ರದಲ್ಲಿ ಕರೆದುಕೊಂಡು ಹೋಗಿ ತೋರಿಸುತ್ತೇನೆ ನಾವು ನಿರ್ಮಾಣ ಮಾಡಿರತಕ್ಕ ಮನೆಗಳನ್ನು ನೋಡಲಿ. ನಮ್ಮ ವಿರೋಧ ಪಕ್ಷದ ನಾಯಕರು ನಾಳೆಯೇ ಬಂದು ನೋಡಲಿ. ಆಗಿರತಕ್ಕ ಒಳ್ಳೆಯ ಕೆಲಸಗಳಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಒಳ್ಳೆಯ ಸಲಹೆ ಸೂಚನೆಯನ್ನು ಕೊಡಿ.

ಮಾಡಿರತಕ್ಕ ಕೆಲಸವನ್ನು ಕಳಪೆ ಕೆಲಸವೆಂದೂ ನಿಮ್ಮ ಸರ್ಕಾರ ಏನೂ ಕೆಲಸವನ್ನೂ ಮಾಡಿಲ್ಲವೆಂದು ಹೇಳುವುದು ಸರಿಯಲ್ಲ, ಅದನ್ನು ನೋಡಿಯೇ ಇಲ್ಲ ಎಂದು ಹೇಗೆ ಹೇಳುತ್ತೀರಿ? ಒಬ್ಬರು ಒಂದು ಕಡೆ ಹೇಳುತ್ತಾರೆ ಅವರ

ಹೆಸರು ಹೇಳುವುದು ಬೇಡ, ಅವರು ಟೀಕೆ ಮಾಡಿದ್ದಾರೆ. ಏನು ಟೀಕೆ ಮಾಡಿದ್ದಾರೆಂದರೆ ಮಾನ್ಯ ಬಂಗಾರಪ್ಪನವರ ಸರ್ಕಾರ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ, ಅಭಿವೃದ್ಧಿ ಕೆಲಸ ಕಾರ್ಯಗಳು ಸ್ಥಗಿತಗೊಂಡಿವೆ ಏನೂ ಕೆಲಸ ಮಾಡುತ್ತಿಲ್ಲವೆಂದೂ ಸರ್ಕಾರ ನಡೆಸುವುದಕ್ಕೆ ದುಡ್ಡಿಲ್ಲವೆಂದೂ ತುಂಬಾ ತೊಂದರೆ ಅನುಭವಿಸುತ್ತಿದ್ದಾರೆಂದೂ ಜನರ ಬಗ್ಗೆ ಅವರಿಗೆ ಸಹಾನುಭೂತಿಯಿಲ್ಲವೆಂದು ಹೇಳಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರು ಒಂದು ನಿದರ್ಶನ ಹೇಳಲಿ. ಅವರ ಕಾಲದಲ್ಲಿ 8 ರೂಪಾಯಿ ಚೆಕ್ ಬೋನ್ಸ್ ಆಗಿತ್ತು. ನನ್ನ ಹತ್ತಿರ ಉದಾಹರಣೆ ಇದೆ. ನಮ್ಮ ಸರ್ಕಾರದಲ್ಲಿ ಆ ರೀತಿ ಆಗಿರುವುದನ್ನು ತೋರಿಸಲಿ. ಅವರ ಆಡಳಿತದಲ್ಲಿ 8 ರೂಪಾಯಿ ಚೆಕ್ ಬೋನ್ಸ್ ಆಗಿದೆ. ಬರೀ ಟೀಕೆ ಮಾಡುವುದು ಅಷ್ಟು ಸಮಂಜಸವಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮನೆಗಳನ್ನು ಕಟ್ಟಲಿಕ್ಕಾಗಿ ಒಂದು ಕ್ಷೇತ್ರಕ್ಕೆ ಸಾವಿರ ಮನೆಯೆಂದು ಹೇಳಿದರೆ, ಒಂದು ಮನೆಗೆ 15 ಸಾವಿರ ರೂಪಾಯಿಯಂತೆ ಒಂದು ಕ್ಷೇತ್ರಕ್ಕೆ ಒಂದೂವರೆ ಕೋಟಿ ರೂಪಾಯಿಯಾಗುತ್ತದೆ. 224 ಕ್ಷೇತ್ರಗಳಿಗೆ 336 ಕೋಟಿ ರೂಪಾಯಿ ಮನೆಗಳಿಗಾಗಿ ನಾವು ವೆಚ್ಚ ಮಾಡುತ್ತಿದ್ದೇವೆನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಷ್ಟು ವರ್ಷಗಳಾದರೂ ಇಷ್ಟೊಂದು ಮನೆಗಳನ್ನು ಕಟ್ಟಿರಲಿಲ್ಲ. ನಮ್ಮಸರ್ಕಾರ ಒಂದೇ ವರ್ಷದಲ್ಲಿ ಸಾಮೂಹಿಕವಾಗಿ ಇಷ್ಟು ಮನೆಗಳನ್ನು ಕಟ್ಟಿದೆ. ನೀವು ಆ ಕೆಲಸ ಮಾಡಲಿಕ್ಕೆ ಆಗಲಿಲ್ಲ. ಇವತ್ತಿನ ದಿವಸ ನಾವು ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಎಂದು ಹೆಮ್ಮೆಯಿಂದ ಹೇಳುವುದಕ್ಕೆ ತಯಾರಾಗಿದ್ದೇನೆ. ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಮ್ಮಿಕ್ಕೊಂಡಿದೆ. ಒಂದು ಪ್ರಶ್ನೆಯನ್ನು ಈ ಟೈಮ್‌ನಲ್ಲಿ ಹೇಳಿದರೆ ಅದು ಸಮಂಜಸವೆಂದು ನಾನು ತಿಳಿದುಕೊಂಡಿದ್ದೇನೆ. ಯೋಜನಾ ಆಯೋಗ ನಮ್ಮ ಸರ್ಕಾರಕ್ಕೆ ಒಂದು ಪ್ರಶಂಸೆಯನ್ನು ಕೊಟ್ಟಿದೆ. ಪ್ರಶಂಸೆಯನ್ನು ಕೊಟ್ಟಿರತಕ್ಕ ವಿಷಯವನ್ನು ವಿರೋಧಪಕ್ಷದ ನಾಯಕರ ಗಮನಕ್ಕೆ ತಂದಾಗ ಅವರು ಏನು ಹೇಳಿದ್ದಾರೆಂದರೆ, ಸುಳ್ಳು ಮಾಹಿತಿಗಳನ್ನು ಕೊಟ್ಟು ಪ್ರಶಂಸಾಪತ್ರ ಪಡೆದಿದ್ದಾರೆ. ಅವರು ಮಾಡಿರತಕ್ಕ ಕೆಲಸ ಬೋಗಸ್ ಇದಕ್ಕೆ ಯಾವುದೇ ಆಧಾರವಿಲ್ಲ, ಸುಳ್ಳು ಮಾಹಿತಿಯನ್ನು ಕೊಟ್ಟು ಪ್ರಶಂಸಾ ಪತ್ರವನ್ನು ಪಡೆದಿದ್ದಾರೆಂದು ಹೇಳಿದ್ದಾರೆ. ವಿರೋಧ ಪಕ್ಷದ ನಾಯಕರಾಗಿರತಕ್ಕವರು ಹಿಂದೆ ಜವಾಬ್ದಾರಿ ಸ್ಥಾನಗಳಲ್ಲಿ ಇದ್ದಂತಹವರು ಈ ತರಹ ಹೇಳಿದರೆ ಅದಕ್ಕೆ ಬೆಲೆ ಇದೆಯೇ? ಆ ರೀತಿಯ ಪ್ರಶಂಸಾ ಪತ್ರವನ್ನು ಯೋಜನಾ ಆಯೋಗದವರು ಕೊಡುವುದಕ್ಕೆ ಆಗುತ್ತದೆಯೇ? ನಮ್ಮ ದೇಶದಲ್ಲಿ ಎಷ್ಟೋ ರಾಜ್ಯಗಳಿವೆ. ಆ ರಾಜ್ಯಗಳ ಮುಖ್ಯಮಂತ್ರಿಗಳಾರೂ ಈ ತರಹ ಪ್ರಶಂಸಾಪತ್ರ ಪಡೆದಿಲ್ಲ. ಮಾನ್ಯ ಬಂಗಾರಪ್ಪನವರಿಗೆ ಈ ತರಹ ಪ್ರಶಂಸಾಪತ್ರ ಬಂದಿರುವುದರಿಂದ ಇವರಿಗೆ ಹೊಟ್ಟೆಕಿಚ್ಚು ಬಂದಿದೆ. ಇವರಿಗೆ ಕಣ್ಣುಹುರಿ ಬಂದಿದೆ. ರಾಜ್ಯದಲ್ಲಿ ಅಭಿವೃದ್ಧಿ ಕೆಲಸಕಾರ್ಯಗಳು ಸ್ಥಗಿತಗೊಂಡಿವೆ, ಹಣವಿಲ್ಲ, ಯೋಜನಾ ಆಯೋಗದಿಂದ ಸುಳ್ಳು ಮಾಹಿತಿಗಳನ್ನು ಕೊಟ್ಟು ಪ್ರಶಂಸಾ ಪತ್ರ ಪಡೆದುಕೊಂಡಿದ್ದಾರೆಂದು ಹೇಳುವುದು ವಿರೋಧಪಕ್ಷದ ನಾಯಕರಿಗೆ ಸರಿಯೇ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಮಹಿಳೆಯರು, ಮಕ್ಕಳು, ಬಡವರು, ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳವರೆಗೆ ಎಲ್ಲವನ್ನೂ ದೊರಕುವಂತೆ ಮಾಡಿ ಆಯಾ ವರ್ಗಗಳವರಿಗೆ ಬೇಕಾದ ಕಲ್ಯಾಣ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವುಗಳನ್ನು ಯಾವ ರೀತಿಯಲ್ಲಿ ಸಾಧಿಸಬೇಕು ಎನ್ನುವ ದೃಷ್ಟಿಯಲ್ಲಿ ನಾವು ಯೋಜನೆಯನ್ನು ತಯಾರು ಮಾಡಿ ಅವುಗಳನ್ನು ಜಾರಿಯಲ್ಲಿ ತಂದಾಗಲೂ ಸಮಾಧಾನವಿಲ್ಲವೆಂದು ಹೇಳಿದರೆ ಏನು ಹೇಳುವುದಕ್ಕಾಗುತ್ತದೆ?

ದಯಮಾಡಿ ತಾವೇ ಯೋಚನೆ ಮಾಡಬೇಕು. ಆದ್ದರಿಂದ ನಮ್ಮ ಸರ್ಕಾರ ಪ್ರತಿಯೊಂದು ಕೆಲಸದಲ್ಲಿ ಕೂಡ ಬಡವರ ಕಾರ್ಯಕ್ರಮದಲ್ಲಿ ಹೆಚ್ಚಿನ ಗಮನವಿಟ್ಟು, ಹೆಚ್ಚಿನ ಶ್ರದ್ಧೆ ಇಟ್ಟು, ಹೆಚ್ಚಿನ ಭಕ್ತಿಯಿಂದ ಈ ಕಾರ್ಯಗಳನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಬೇಕು ಎನ್ನುವ ದೃಷ್ಟಿಯಿಂದ ಕೆಲಸ ಮಾಡುತ್ತಿದೆ ಎಂದು ನಾನು ಘಂಟಾಘೋಷವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ದಯಮಾಡಿ ಇದರಲ್ಲಿ ಯಾವುದೇ ವ್ಯತ್ಯಾಸ ಇದ್ದರೂ ಕೂಡ, ಯಾರಾದರೂ ಮಾತನಾಡತಕ್ಕಂಥ ಸಂದರ್ಭದಲ್ಲಿ ನನಗೆ ಉತ್ತರ ಹೇಳಲಿ. ಇಂತಹ ಕಾರ್ಯಕ್ರಮ ಸರಿಯಿಲ್ಲ, ಇಂತಹ ಕಾರ್ಯಕ್ರಮ ಅನುಷ್ಠಾನಕ್ಕೆ ಬಂದಿಲ್ಲ, ಇಂತಹ ಯೋಜನೆ ವಿಫಲವಾಗಿದೆ. ಇಂತಹ ಯೋಜನೆಗೆ ನಾನು ಸಾಕಷ್ಟು ದುಡ್ಡು ಕೊಟ್ಟಿಲ್ಲ, ಇಂತಹ ಯೋಜ ನಿಷ್ಫಲಗೊಂಡಿದೆ. ಇದರಿಂದ ಬಡವರಿಗೆ ಅನುಕೂಲ ಆಗಿಲ್ಲವೆಂದು ತಾವು ತೋರಿಸಿವುದಾದರೆ, ತಪ್ಪಿದ್ದರೆ ಒಪ್ಪಿಕೊಳ್ಳುವುದಕ್ಕೆ ನಾನು ತಯಾರಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ: ಈಗಲೇ ಹೇಳಿಬಿಡೋಣವೇ 1991-92ರ ಸಾಲಿನಲ್ಲಿ ಯೋಜನಾ ಆಯೋಗದವರು ಒಪ್ಪಿಗೆ ನೀಡಿದಂಥ 1510 ಕೋಟಿ ರೂಪಾಯಿಗಳಲ್ಲಿ ಇಲ್ಲಿಯವರೆಗೆ ಅಂದರೆ ಡಿಸೆಂಬರ್ 31ರವರೆಗೆ ಎಷ್ಟು ಹಣವನ್ನು ಯೋಜನೆಗಾಗಿ ಖರ್ಚುಮಾಡಿದ್ದೀರಿ ಎಂದು ಹೇಳುತ್ತೀರಾ ಸ್ವಾಮೀ?

ಶ್ರೀ ಜಿ. ರಾಜುಗೌಡ: ನಮೂದು ಮಾಡಿರತಕ್ಕಂಥಾದ್ದರಲ್ಲಿ ಕೆಲವನ್ನು ಪೂರ್ಣ ಮಾಡಲಿಕ್ಕೆ ಕೆಲವು ಕಾರಣಗಳಿಂದ ಸಾಧ್ಯವಿಲ್ಲ.

ಶ್ರೀ ಹೆಚ್. ಏಕಾಂತಯ್ಯ: ಸ್ಪೆಸಿಫಿಕ್ ಆಗಿ ಹೇಳಿ. ಈ ರೀತಿ ಹೇಳಿದರೆ ನಮಗೂ ಹೇಳುವುದಕ್ಕೆ ಬರುತ್ತದೆ. ಮುಖ್ಯವಾದಂಥ ವಲಯಗಳು ಏನಿವೆ, ಅವುಗಳಿಗೆ ಆಯೋಗದವರು ಒಪ್ಪಿಗೆ ನೀಡಿದ್ದಾರೆ. 1510 ಕೋಟಿ ರೂಪಾಯಿಗಳಲ್ಲಿ 991ನೇ ಇಸವಿ ಡಿಸೆಂಬರ್ 31ರವರೆಗೆ ನೀವು ಎಷ್ಟು ಹಣ ಖರ್ಚು ಮಾಡಿದ್ದೀರಿ ಎಂದು ತಾವು ಹೇಳಿದರೆ ಮುಂದೆ ನಾನು ತಮ್ಮನ್ನು ಕೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್: ಲೆಕ್ಕ ಇಟ್ಟುಕೊಳ್ಳುವುದಕ್ಕೆ ಎ.ಜಿ. ಆಫೀಸ್ ಇದೆ. ಶ್ರೀ ರಾಜುಗೌಡರು ಹೇಗೆ ಇಟ್ಟುಕೊಳ್ಳುತ್ತಾರೆ?

ಶ್ರೀ ಹೆಚ್. ಏಕಾಂತಯ್ಯ: ಹಾಗಾದರೆ ನನ್ನ ಕಾಮೆಂಟ್ಸ್ ಇಲ್ಲ.

ಶ್ರೀ ಜಿ. ರಾಜುಗೌಡ: ಯೋಜನೆಗೆ ಮೀಸಲಿಟ್ಟಿಲತಕ್ಕಂಥ ಹಣವನ್ನು ಪೂರ್ಣ ಮಟ್ಟದಲ್ಲಿ ನಾವು ಬಳಕೆ ಮಾಡದೇ ಇದ್ದರೂ ಸಹ, ಅದು ಕೆಲವು ಕಾರಣಗಳಿಗೆ ಮಾಡಲಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಕೆಲವು ಮಟ್ಟದಲ್ಲಿ ಅಲ್ಲ, ಯಾವ ಮಟ್ಟದಲ್ಲಿ ಏನು ವಿನಿಯೋಗ ಮಾಡಿದ್ದೀರಿ? 1510 ಕೋಟಿ ರೂಪಾಯಿಗಳಲ್ಲಿ ಮುಖ್ಯವಾದ ವಲಯಗಳಲ್ಲಿ ಏನು ವಿನಿಯೋಗ ಮಾಡಬೇಕಿತ್ತು, ಆ ಪೈಕಿ 1991ರ ಡಿಸೆಂಬರ್ 31ರವರೆಗೆ ಎಷ್ಟು ಪರ್ಸೆಂಟ್ ಮಾಡಿದ್ದೀರಿ ಎಂದು ಹೇಳಿ ನೋಡೋಣ. ಸುಮ್ಮನೆ ಅಂಕಿ ಅಂಶಗಳು ಇಲ್ಲದೆ ಮಾತನಾಡಿದ್ದರೆ, ಯಾರುಬೇಕಾದರೂ ಮಾತನಾಡಬಹುದು.

ಶ್ರೀ ಜಿ. ರಾಜುಗೌಡ: ನಾವು ಹಾಕಿಕೊಂಡಿಲತಕ್ಕಂಥ ಕಾರ್ಯಕ್ರಮಗಳನ್ನು ನೋಡಿ, ಸಾಧಿಸಿರುವ ಬಗ್ಗೆ ತಾವು ಹೇಳಬೇಕು. ಬರೀ ಅಂಕಿ ಅಂಶಗಳಿಂದ ಸರ್ಕಾರವನ್ನು ತೂಕ ಮಾಡುವುದಕ್ಕೆ ಆಗುವುದಿಲ್ಲ. ಕೆಲವು ಸಂದರ್ಭದಲ್ಲಿ

ಜಾಸ್ತಿಯಾಗಿರಬಹುದು, ಕೆಲವು ಸಂದರ್ಭದಲ್ಲಿ ಕಡಿಮೆ ಆಗಿರಬಹುದು. ಆದ್ದರಿಂದ ಸರ್ಕಾರದ ಕಾರ್ಯವೈಖರಿಯನ್ನು ಅಂಕಿಅಂಶಗಳ ಮೂಲಕ ತೂಕ ಮಾಡುವುದು ಸರಿಯಲ್ಲ.

ಶ್ರೀ ಹೆಚ್. ಏಕಾಂತಯ್ಯ: ಆಯಿತು. ಮುಂದೆ ನಮ್ಮದು ಮಾತೇ ಇಲ್ಲ.

ಶ್ರೀ ಜಿ. ರಾಜುಗೌಡ: ದಯವಿಟ್ಟು ನಮ್ಮ ಕಾರ್ಯನೀತಿಯನ್ನು..

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ: ನಿಮ್ಮ ಅಂಕಿಅಂಶಗಳು ಸರಿಯಾಗಿತ್ತೇ ಎಂಬುದನ್ನು ನೋಡಬೇಕು ತಾವು.

ಶ್ರೀ ಹೆಚ್. ಏಕಾಂತಯ್ಯ: ಈ ಭಾಷಣಕ್ಕಿಂತ ಬೇರೆ ಭಾಷಣವನ್ನು ನಾವು ನಿಮ್ಮಿಂದ ನಿರೀಕ್ಷಣೆ ಮಾಡಿರಲಿಲ್ಲ.

ಶ್ರೀ ಜಿ. ರಾಜುಗೌಡ: ಆದ್ದರಿಂದ ರಾಜ್ಯಪಾಲರ ಭಾಷಣದ ಮುಖಾಂತರ ನಮ್ಮ ಸರ್ಕಾರ ಏನೇನು ಕಾರ್ಯನೀತಿಯನ್ನು ಹಾಕಿಕೊಂಡಿದೆ. ಯಾವ ರೀತಿ ನಮ್ಮ ಸರ್ಕಾರದ ಕಾರ್ಯನೀತಿಯನ್ನು ರೂಪಿಸಿದ್ದೇವೆ, ಅದು ಈ ವರ್ಷ ಪೂರ್ತಿಯಾಗದಿದ್ದರೂ ಕೂಡ ಕಾರ್ಯನೀತಿಯನ್ನು ಧ್ವನಿಪೂರ್ಣವಾಗಿ ಅನುಷ್ಠಾನಕ್ಕೆ ತಂದು, ಬಡವರ ಸಾಮಾಜಿಕ ಕಲ್ಯಾಣ ಕಾರ್ಯದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ, ಅವರಿಗೆ ಹೆಚ್ಚಿನ ಸೌಲಭ್ಯವನ್ನು ನಮ್ಮ ಸರ್ಕಾರ ಕೊಡುತ್ತವೆಂದು ನಿರೀಕ್ಷಿಸಿ ಮಾನ್ಯ ಉಪಾಧ್ಯಕ್ಷಿಣಿಯವರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವೀರೇಂದ್ರ ಪಾಟೀಲ್(ಚಿಂಚೋಳಿ): ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ನಾನು ಮಾತನಾಡಬೇಕು ಎನ್ನತಕ್ಕಂಥ ವಿಚಾರದಿಂದ ಇವತ್ತು ಬಂದಿದ್ದೇನೆ. ರಾಜ್ಯಪಾಲರ ಭಾಷಣವನ್ನು ನನ್ನ ಕಡೆಯಿಂದ ಎಷ್ಟು ಸಾಧ್ಯವಾಗುತ್ತದೋ ಅಷ್ಟು ನಾನು ಓದಿ ನೋಡಿದ್ದೇನೆ. ಮತ್ತು ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಏನೇನು ಸಾಧಿಸಿದೆ, ಮುಂದೆ ಏನು ಸಾಧಿಸಬೇಕು ಎನ್ನುವಂಥಾದ್ದನ್ನು ಇಟ್ಟುಕೊಂಡಿದೆ ಎಂಬುದರ ಬಗ್ಗೆ ಹೇಳಬೇಕಾದದ್ದು ಅವಶ್ಯ. ಸರ್ಕಾರದ ಪಾಲಿಸಿ, ಪ್ರೋಗ್ರಾಮ್ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಬೇಕಾದದ್ದು ಅವಶ್ಯವೆಂದು ನಾನು ತಿಳಿದುಕೊಂಡಿದ್ದೇನೆ.

ಈಗಿರುವಂಥ ಸರ್ಕಾರ ಒಂದು ವರ್ಷದಲ್ಲಿ ಏನೂ ಸಾಧಿಸಿಲ್ಲವೆಂದು ಹೇಳುವಂಥ ವಿಚಾರದವನು ನಾನಲ್ಲ, ಸಾಧಿಸಿದ್ದಾರೆ, ಇಲ್ಲ ಎಂದು ಹೇಳುವ ಹಾಗಿಲ್ಲ. ಆದರೆ, ಏನು ಸಾಧಿಸಿದ್ದಾರೆ? ಏನು ದುರ್ದೈವ ಎಂದು ಹೇಳಬೇಕಾಗುತ್ತದೆ. ಅದನ್ನು ರಾಜ್ಯಪಾಲರ ಭಾಷಣದಲ್ಲಿ ನಮೂದಿಸಿಲ್ಲ. ಅದನ್ನು ರಾಜ್ಯಪಾಲರ ಭಾಷಣದಲ್ಲಿ ನಮೂದಿಸಬೇಕಾಗಿತ್ತು. ಬರೆಯಬೇಕಾಗಿತ್ತು. ಹೋದವರ್ಷ ಈ ತರಹ ಜನರಿಗೆ ಅನುಕೂಲಗಳನ್ನು ಮಾಡಿಕೊಟ್ಟಿದ್ದೇವೆ, ಈ ರೀತಿ ಕೆಲವನ್ನು ಮೂಡುವುದಕ್ಕಾಗಿಲ್ಲ ಎಂದು ಹೇಳುವುದು ತಪ್ಪೇನೂ ಅಲ್ಲ; ಇದನ್ನು ಹೇಳಬೇಕಾದುದು ಅವಶ್ಯ. ಆದರೆ, ಆ ತರಹ ಹೇಳಲಿಲ್ಲ. ನಾನು ರಾಜ್ಯಪಾಲರ ಭಾಷಣ ನೋಡಿದ ಪ್ರಕಾರ, ಈ ವರ್ಷದ ಭಾಷಣಕ್ಕಿಂತ, ಹೋದವರ್ಷದ ಭಾಷಣ ಇನ್ನೂ ಸ್ವಲ್ಪ ಚೆನ್ನಾಗಿತ್ತೆಂದು ಅನಿಸುತ್ತದೆ. ಈ ವರ್ಷದ ಭಾಷಣ, ಬಹಳ ಬ್ಲಾಂಕ್, ಏನೂ ಅರ್ಥವಿಲ್ಲ, ಓದಿದರೆ ಅರ್ಥವೂ ಆಗುವುದಿಲ್ಲ. ಈ ವರ್ಷ ಅಂದರೆ, ನಾನು 1992-93ನೇ ಸಾಲಿಗೆ ಹೇಳುತ್ತಿದ್ದೇನೆ. ಸರ್ಕಾರ ಏನು ಮಾಡಬೇಕು ಎನ್ನುವುದು ಮತ್ತು ಸರ್ಕಾರದ ಕಾರ್ಯಕ್ರಮ ಏನು ಎನ್ನುವುದನ್ನು ರಾಜ್ಯಪಾಲರು ತಮ್ಮ

ಭಾಷಣದಲ್ಲಿ ಹೇಳಲಿಲ್ಲ. ಇದು ನಿಜವಾಗಿಯೂ ದುರ್ದೈವ ಎಂದು ಅನಿಸುತ್ತದೆ. ನಾನು ಇವತ್ತಿನ ಭಾಷಣದಲ್ಲಿ ಹೆಚ್ಚು ಮಾತನಾಡಲಾರದೇ, ಸರ್ಕಾರದ ಕೆಲವು ದೋಷಗಳ ಬಗ್ಗೆ ಹೇಳಬೇಕೆನ್ನುವ ವಿಚಾರದವನಾಗಿದ್ದೇನೆ. ಸರ್ಕಾರದಲ್ಲಿ ದೋಷ ಇದೆ, ಈ ದೋಷವನ್ನು ಯಾವ ರೀತಿಯಿಂದ್ಧ ನಿವಾರಣೆ ಮಾಡಬೇಕು ಮತ್ತು ಸರ್ಕಾರ ಜನತೆಗೆ ಸಮರ್ಪಕವಾದ ಆಡಳಿತ ನೀಡುವುದಕ್ಕೆ ಏನು ಪ್ರಯತ್ನ ಮಾಡಬೇಕೆನ್ನುವಂಥ ವಿಚಾರವನ್ನು ಹೇಳಬೇಕೆಂದು ಇಲ್ಲಿಗೆ ಬಂದಿದ್ದೇನೆ. ಇವತ್ತು ಬಹುಶಃ ನಾನು ಹೇಳುತ್ತೇನೆ, ನಿಮಗೆ ಇದು ಸೂಕ್ತವೆಂದು ಅನಿಸುತ್ತದೆಯೋ ಏನೋ. ಸರ್ಕಾರದ ಬಗ್ಗೆ ಜನಗಳಲ್ಲಿ ಸಮಾಧಾನ ಇಲ್ಲ, ಸಮಾಧಾನ ಇದೆಯೆಂದು ತಿಳಿದುಕೊಂಡರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ನನಗೆ ಗೊತ್ತಿರುವ ಹಾಗೆ ಜನರಿಗೆ ಅಸಮಾಧಾನ ಇದೆಯೇ ಹೊರತು ಸಮಾಧಾನ ಹೆಚ್ಚಿದೆ ಎಂದು ನಾನು ತಿಳಿದುಕೊಂಡಿಲ್ಲ. ಸರ್ಕಾರದ ಬಗ್ಗೆ ಜನರಿಗೆ ಅಸಮಾಧಾನ ಇದೆ. ಸರ್ಕಾರ ಚೆನ್ನಾಗಿ ಕೆಲಸ ಮಾಡಬೇಕು ಒಂದು ವೇಳೆ ಮಾಡಲಾರದೇ ಹೋದರೆ, ಈ ಪಕ್ಷದ ಕೈಯಲ್ಲಿ ಇದ್ದಂತ ಸರ್ಕಾರವನ್ನು ಕಿತ್ತುಕೊಂಡು, ಇನ್ನೊಂದು ಪಕ್ಷದ ಕೈಗೆ ಸರ್ಕಾರವನ್ನು ಕೊಡಲು ಜನಗಳು ಬಯಸುತ್ತಾರೆಂದು ಹೇಳಿದರೆ ಅತಿಶಯೋಕ್ತಿ ಅಲ್ಲ. ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಹೆಚ್ಚು ಹೇಳಬೇಕಾದರೆ ಸಮಯವೂ ಸಾಕಷ್ಟು ಬೇಕಾಗುತ್ತದೆ ಮತ್ತು ನನ್ನ ಹತ್ತಿರ ಶಕ್ತಿಯೂ ಹೆಚ್ಚು ಬೇಕಾಗುತ್ತದೆ. ಇದರ ಬಗ್ಗೆ ಕೆಲವು ಪಾಯಿಂಟ್ಸ್ ಮಾತ್ರ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ವರ್ಷದ ರಾಜ್ಯಪಾಲರ ಭಾಷಣವನ್ನು ಬಹುಶಃ ನೀವೆಲ್ಲರೂ ಓದಿರಬಹುದೆಂದು ನನಗನಿಸುತ್ತದೆ. ಹೋದವರ್ಷ, 1991ರಲ್ಲಿ ಏನು ರಾಜ್ಯಪಾಲರು ಭಾಷಣ ಮಾಡಿದರು,

ಅದರ ರಿಪೀಟೇಷನ್ ಹೆಚ್ಚಿದೆ ಎಂದು ಹೇಳದೆ ಇರಲಾರೆ. ನಾನು ಹೆಚ್ಚು ಹೇಳುವ ಹಾಗಿಲ್ಲ. ಒಂದೆರಡು ಉದಾಹರಣೆ ಹೇಳಿದರೆ ತಮಗೆ ಗೊತ್ತಾಗಬಹುದೆಂದು ತಿಳಿದುಕೊಂಡಿದ್ದೇನೆ. ಈ ವರ್ಷದ ರಾಜ್ಯಪಾಲರ ಭಾಷಣ ಮತ್ತು ಹೋದವರ್ಷದ ರಾಜ್ಯಪಾಲರ ಭಾಷಣವನ್ನು ನೋಡಿದರೆ, ನಮಗೆ ಗೊತ್ತಾಗುತ್ತದೆ. ಒಂದೆರಡು ಉದಾಹರಣೆಯನ್ನು ಮಾತ್ರ ಹೇಳುತ್ತೇನೆ, ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲಾ ಹೇಳಬೇಕಾದರೆ ಸಮಯ ಬೇಕಾಗುತ್ತದೆ. ಮತ್ತು ಅನೇಕ ಮಾನ್ಯ ಸದಸ್ಯರು ಈ ಸದನದಲ್ಲಿದ್ದಾರೆ. ನೀವೂ ಕೂಡ ಅನೇಕ ವಿಚಾರಗಳನ್ನು ಹೇಳಬೇಕೆಂದು ಅಭಿಪ್ರಾಯ ಇಟ್ಟುಕೊಂಡಿರುವುದರಿಂದ, ನಾನು ಎಲ್ಲಾ ವಿಚಾರಹೇಳುವುದಕ್ಕೆ ಹೋಗುವಹಾಗಿಲ್ಲ. ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಹೋದ ವರ್ಷದ ರಾಜ್ಯಪಾಲರ ಭಾಷಣಕ್ಕೂ, ಇವತ್ತಿನ ರಾಜ್ಯಪಾಲರ ಭಾಷಣಕ್ಕೂ ಬಹಳ ವ್ಯತ್ಯಾಸ ಇದೆ ಎನ್ನುವುದನ್ನು ತಿಳಿದುಕೊಳ್ಳಬೇಕಾದುದು ಅವಶ್ಯ. ಒಂದೆರಡು ಉದಾಹರಣೆ ಮಾತ್ರ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ಕರ್ನಾಟಕ ಪವರ್ ಕಾರ್ಪೊರೇಷನ್ ಇದೆ. ನಮ್ಮ ರಾಜ್ಯದಲ್ಲಿ ನಮ್ಮ ಹತ್ತಿರ ಸಾಕಷ್ಟು ಪವರ್ ಇಲ್ಲ ಎನ್ನುವಂತಹುದು ಎಲ್ಲರಿಗೂ ಗೊತ್ತಿದೆ, ಇದು ಇಡೀ ದೇಶಕ್ಕೆ ಗೊತ್ತಿರುವಂತಹ ವಿಚಾರ. ಒಂದು ಕಾಲ ಇತ್ತು, ನಾವು ಹೈಡಲ್ ಪವರ್‌ನಲ್ಲಿ ಇಡೀ ದೇಶದಲ್ಲಿ ಮುಂದಿದ್ದೆವು. ಮತ್ತು ಪವರ್‌ನಲ್ಲಿ ನಮ್ಮ ರಾಜ್ಯ ಸರ್‌ಪ್ಲಸ್ ಆಗಿ ಮುಂದಿತ್ತು. ಅಂತಹ ರಾಜ್ಯಕ್ಕೆ ಇವತ್ತು ಬಹಳ ಹಿಂದೆ ಉಳಿದಿರುವಂತಹ ಪರಿಸ್ಥಿತಿ ಬಂದಿದೆ. ನಮ್ಮ ಹತ್ತಿರ ಸಾಕಷ್ಟು ಪವರ್ ಇಲ್ಲ. ಅದಕ್ಕಾಗಿ ನಮ್ಮಲ್ಲಿ ಸಾಕಷ್ಟು ಪವರ್ ಉತ್ಪಾದನೆ ಮಾಡಬೇಕಾಗಿರತಕ್ಕಂಥ ಪರಿಸ್ಥಿತಿ ಬಹಳವಾಗಿ ಇದೆ. ಆದರೆ ನಾವು ಇದರ ಬಗ್ಗೆ 1991ರ ಗೌರ್ನರ್ ಅಡ್ರೆಸ್‌ನಲ್ಲಿ ಏನು ಹೇಳಿದ್ದೇವೋ ಅದನ್ನೇ

92ರಲ್ಲೂ ಹೇಳುತ್ತಿದ್ದೇವೆ. ಹೆಚ್ಚು ವ್ಯತ್ಯಾಸ ಇಲ್ಲ. 91ರಲ್ಲಿ ಏನು ಹೇಳಿದ್ದೆವೋ, ಅದನ್ನೇ 92 ರಲ್ಲೂ ಹೇಳಿದ್ದೇವೆಯೇ ಹೊರತಾಗಿ ಮತ್ತೇನೂ ಇಲ್ಲ. 91-92ಕ್ಕೆ ನಮ್ಮ ಪಕ್ಷ ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಆಗಿ ಹೋಯಿತು. ಇನ್ನು ಇರುವುದು ಎರಡೂವರೆ ವರ್ಷ. ಈ ಎರಡೂವರೆ ವರ್ಷದಲ್ಲಿ ನಾವು ಚೆನ್ನಾಗಿ ಕೆಲಸ ಮಾಡದೇ ಹೋದರೆ ಜನ ನಮ್ಮನ್ನು ಅಧಿಕಾರದಿಂದ ಕಿತ್ತು ಹಾಕುತ್ತಾರೆ. ಜನ ನಮ್ಮನ್ನು ಅಧಿಕಾರದಲ್ಲಿ ಇಡುವುದಿಲ್ಲ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ನಾನು ಹೇಳುವಂತಹುದು 1991-92ರ ಗೌರ್ನರ್ ಅಡ್ರೆಸ್ ಏನಿದೆಯಲ್ಲ ಅದರ ಬಗ್ಗೆ ನಾನು ಹೇಳಬೇಕೆಂದರೆ 1991 ರಲ್ಲಿ You have mentioned,

"The Karnataka Power Corporation has already indentified, both, Hydel and Thermal Projects in which the State Goverment expected the private participation. The private entrepreneurs have shown keen interest in taking up these projects."

ಇದು 1991ರಲ್ಲಿ. 1992ರ ಇವತ್ತಿನ ಸ್ಪೀಚ್‌ನಲ್ಲಿ ಏನು ಹೇಳಿದ್ದಾರೆ? 92-93ಮುಂದಿನ ವರ್ಷ ಆಗುತ್ತದೆ. ರಾಜ್ಯಪಾಲರು ಹೊಸ ವರ್ಷದಲ್ಲಿ ಒಂದು ಸಲ ಭಾಷಣ ಮಾಡುತ್ತಾರಲ್ಲ ಅದರಲ್ಲಿ ಪವರ್ ಪ್ರಾಜೆಕ್ಟ್ ಬಗ್ಗೆ ಏನು ಹೇಳಿದ್ದಾರೆ ವಿಚಾರ ಮಾಡೋಣ.

"It is necessary to associate the private sector in the large Hydel Power Projects. Accordingly, My Government has decided to take up these projects in different Private Sector and Joint sector for the early completion of these projects."

ಎಂದು ಹೇಳಿದ್ದಾರೆ. ನಾನು ಹೇಳುತ್ತೇನೆ ಹೋದ ವರ್ಷ ಇದೇ ಮಾತನಾಡಿದ್ದೆವು, ಏನೂ ಕೆಲಸ ಆಗಲಿಲ್ಲ. ಈ ವರ್ಷ ಅದೇ ಮಾತನ್ನು ಹೇಳುತ್ತಿದ್ದೇವೆ. ಏನೂ ಆಗುವುಹಾಗೆ ಇಲ್ಲ. ಇನ್ನು ಎರಡು ವರ್ಷ ರಾಜ್ಯಪಾಲರ ಭಾಷಣದಲ್ಲಿ ಇದೇ ರೀತಿಯ ಮಾತನಾಡಿದರೆ, ನಮ್ಮ ಜನ ಸುಮ್ಮನೆ ಬಿಡುವುದಿಲ್ಲ. ನಾವು ಏನು ಈ ಕಡೆ ಇದ್ದೇವೆ, ಆ ಮೇಲೆ ಆ ಕಡೆಗೆ ಹೋಗಬೇಕಾಗುತ್ತದೆ. ನಮ್ಮ ಜನ ಏನು ಮಾಡಿದ್ದಾರೆ ಎಂದರೆ ಐದು ವರ್ಷ ಅಧಿಕಾರಕ್ಕೆ ತಂದು ನಮ್ಮನ್ನು ಇಲ್ಲಿ ಕೂರಿಸಿದ್ದಾರೆ. ಐದು ವರ್ಷದಲ್ಲಿ ಎರಡೂವರೆ ವರ್ಷ ಏನೂ ಮಾಡಲಿಲ್ಲ. ಯಾವುದೇ ಪ್ರೈವೇಟ್ ಪಾರ್ಟೀಸ್ ಬರಲಿಲ್ಲ. ನಾನು ಮುಖ್ಯಮಂತ್ರಿ ಇದ್ದಾಗ ನನಗೆ ಗೊತ್ತಿರುವ ಹಾಗೆ ಒಂದೇ ಒಂದು ಪ್ರೈವೇಟ್ ಪಾರ್ಟಿ ಬಂದಿತ್ತು, ಅದನ್ನು ಬಿಟ್ಟರೆ ಬೇರೆ ಯಾವ ಪ್ರೈವೇಟ್ ಪಾರ್ಟೀಸ್ ಇನ್ನೂ ಬಂದಿಲ್ಲ, ಮತ್ತೆ ಬರುತ್ತಾರೆ ಎಂದು ನನಗೆ ಅನ್ನಿಸುವುದಿಲ್ಲ. ಅದಕ್ಕಾಗಿ ನಾವು ಬರೀ ಹೇಳುತ್ತಾ ಹೋಗುತ್ತಿದ್ದೇವೆ, ಇದೇ ರೀತಿ ಅದೇ ಮಾತನ್ನು ಹೇಳಿಕೊಂಡು ಹೋದರೆ ಹಾಡಿದ್ದೇ ಹಾಡೋ ಕಿಸುಬಾಯಿದಾಸ ಎಂಬ ಪರಿಸ್ಥಿತಿ ಉಂಟಾಗುತ್ತದೆ. ಅದರಿಂದಾಗಿ ಇನ್ನೂ ಒಂದೆರಡು ವರ್ಷ ಏನು ಅಧಿಕಾರದಲ್ಲಿದ್ದು ಅಲ್ಲಿಂದ ಆ ಕಡೆ ಹೋಗಿ ಕುಳಿತುಕೊಂಡು ಏನು ಹೇಳುತ್ತೇವೋ ಗೊತ್ತಿಲ್ಲ. ನಾನು ಹೇಳುವುದು ಅದು ಮಾಡುತ್ತೇವೆಂದು ಹೇಳುವುದು ಅದೂ ಮಾಡುವ ಹಾಗೆ ಇಲ್ಲ, ಇದು ಮಾಡುತ್ತೇವೆಂದು ಹೇಳುವುದು, ಇದೂ ಮಾಡುವ ಹಾಗೆ ಇಲ್ಲ, ಆದುದರಿಂದ

ಯಾವುದನ್ನು ಮಾಡುವುದಕ್ಕೆ ಸಾಧ್ಯ ಇದೆಯೋ ಅದನ್ನು ಮಾಡುತ್ತೇವೆಂದು ಹೇಳಬೇಕು, ಯಾವುದನ್ನು ಮಾಡುವುದಕ್ಕೆ ಸಾಧ್ಯ ಇಲ್ಲ, ಅದನ್ನು ಮಾಡುವುದಿಲ್ಲ ಎಂದು ಹೇಳಬೇಕು. ಜನರಿಗೆ ತಪ್ಪಾಗಿ ಹೇಳಬಾರದು. ಈ ರೀತಿ ತಪ್ಪಾಗಿ ಅಷ್ಯೂರೆನ್ಸ್ ಕೊಟ್ಟುಕೊಂಡು ಬಂದರೆ, ಜನರೂ ಒಂದು ಮಿತಿಯವರೆಗೆ, ಒಂದು ಲಿಮಿಟ್‌ವರೆಗೆ ಕಾಯುತ್ತಾರೆ. ಕೊನೆಗೆ ಇವರು ಸುಳ್ಳು ಮಾತನಾಡುತ್ತಾರೆ, ಇವರು ಮಾಡುವುದೂ ಇಲ್ಲ, ಅದು ಆಗುವುದೂ ಇಲ್ಲ, ಇವರ ಮೇಲೆ ವಿಶ್ವಾಸ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ.

ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ ನಾನು ಮುಖ್ಯಮಂತ್ರಿಯಾಗಿದ್ದಾಗ ಆಫೀಸರ್ಸ್ ಬಂದು ನನಗೆ ಹೇಳಿದರು, ಪ್ರವೇಟ್ ಪಾರ್ಟಿಗಳಿಗೆ ನಾವು ಬೇಕಾದಷ್ಟು ಅನುಕೂಲ ಮಾಡಿಕೊಟ್ಟಿದ್ದೇವೆ. ಆದರೂ ಪ್ರವೇಟ್ ಪಾರ್ಟಿಗಳು ಮುಂದೆ ಬರುತ್ತಿಲ್ಲ. ಒಬ್ಬರು ಮಾತ್ರ ಮುಂದೆ ಬಂದಿದ್ದಾರೆ. ಮಿನಿ ಹೈಡಲ್ ಪ್ರಾಜೆಕ್ಟ್ ಮಾಡುವುದಕ್ಕೆ. ಇದಕ್ಕೆ ಪಬ್ಲಿಕ್ ರೆಸ್‌ಪಾನ್ಸ್ ಇಲ್ಲ. ಏತಕ್ಕೆ ಮಾಡಬೇಕೆಂದು ನಾನು ಹೇಳುತ್ತೇನೆ. ಅಲ್ಲಿಂದ ರಿವರ್ ವಾಟರ್ ಪ್ರಾಜೆಕ್ಟ್ಸ್ ಬಗ್ಗೆ ಹೇಳುವುದಾದರೆ, ಕೃಷ್ಣಾ ಬೇಸಿನ್ ಬಗ್ಗೆ ಹೋದ ವರ್ಷದ ಅಂದರೆ 1991ರ ರಾಜ್ಯಪಾಲರ ಭಾಷಣದಲ್ಲಿ ಅಗ್ರಿಕಲ್ಚರ್‌ಗೆ ಆದ್ಯತೆ ಕೊಡುತ್ತೇವೆಂದು ಹೇಳಿದ್ದಾರೆ. ಎಲ್ಲಾ ಭಾರೀ ಮಧ್ಯಮ ಹಾಗೂ ಸಣ್ಣ ನೀರಾವರಿ ಯೋಜನೆಗಳನ್ನು ಮಾಡುತ್ತೇವೆಂದು ಇವತ್ತಿನವರೆಗೂ ಏನೂ ಮಾಡಿಲ್ಲ. ಆದರೆ ನಮಗೇನು ನೀರು ಸಿಗುತ್ತದೆ ಆ ನೀರನ್ನು ನಾವು ಉಪಯೋಗ ಮಾಡಿದ್ದೇವೆಯೇ ಇವತ್ತು? 1991ರಲ್ಲಿ ಏನು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೋ ಅದನ್ನೇ ಈ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಈ ವರ್ಷದ ರಾಜ್ಯಪಾಲರ ಭಾಷಣ ಪುಟ 7 ರಲ್ಲಿ ಈ ರೀತಿ ಹೇಳಿದ್ದಾರೆ.

"The Hon'ble Members are aware that the State is required to utilise its share of waters of Krishna basin by the year 2000 A.D. Many projects have, therefore, been taken up on the Krishna basin and are under various stages of execution, with assistance from the World Bank." ಎಂದು ಇದರಲ್ಲಿ ಹೇಳಿದ್ದಾರೆ. ಇದು ನನಗೇನೂ ಗೊತ್ತಾಗುತ್ತಾ ಇಲ್ಲ, ಯಾರು ಇದನ್ನು ಬರೆದರೋ ಗೊತ್ತಿಲ್ಲ, ಡೆಸ್ಕ್ ಮೇಲೆ ಕುಳಿತುಕೊಂಡು ಹೋದ ವರ್ಷ ಯಾವ ರೀತಿ ನಾವು ಜನಗಳಿಗೆ ಆಶ್ವಾಸನೆ ಕೊಟ್ಟಿದ್ದೇವೆ ಎನ್ನುವುದನ್ನು ನೋಡಲಾರದೆ ಬರೆದಂತೆ ಕಾಣಿಸುತ್ತದೆ. ಬಚಾವತ್ ಅವಾರ್ಡ್‌ನಲ್ಲಿ ನಮ್ಮ ಷೇರು ಕೊಟ್ಟಿಲ್ಲ. ಅವರೇನು ಹೇಳಿದ್ದಾರೋ ಅದು ಇವರಿಗೆ ಗೊತ್ತಿಲ್ಲ. ಅವರು ಏನು ಹೇಳಿದ್ದಾರೆ 2 ಸಾವಿರ ಎ.ಡಿ ವರೆಗೆ ನೀರನ್ನು ಉಪಯೋಗ ಮಾಡಿಕೊಳ್ಳಿ. ಇದರಲ್ಲಿ 800 ಟಿ.ಎಂ.ಸಿ. ಕರ್ನಾಟಕಕ್ಕೆ 700 ಟಿ.ಎಂ.ಸಿ. ಆಂಧ್ರಪ್ರದೇಶಕ್ಕೆ ಮತ್ತು ಮಹಾರಾಷ್ಟ್ರಕ್ಕೆ 550 ಟಿ.ಎಂ.ಸಿ. ಉಪಯೋಗ ಮಾಡಿಕೊಳ್ಳಬೇಕೆಂದು ಹೇಳಿದ್ದಾರೆಯೇ? ಹೊರತಾಗಿ ನೀರಿನ ಹಂಚಿಕೆ ಆಗಬೇಕೆಂದು ಹೇಳಿಲ್ಲ, ಅವರೇನು ಹೇಳಿಲ್ಲ, ಇಷ್ಟು ನೀರನ್ನು ಉಪಯೋಗ ಮಾಡಿಕೊಂಡು 2 ಸಾವಿರ ಎ.ಡಿ. ಆದ ಮೇಲೆ ಆ ವೇಳೆಗೆ ನೀರು ಏನಿದೆ ಅದನ್ನು ಹಂಚಿಕೊಳ್ಳುವುದಕ್ಕೆ ನೀವು ಪ್ರಯತ್ನ ಮಾಡಬಹುದೆಂದು ಅಷ್ಟೇ ಹೇಳಿದ್ದಾರೆ. ಯಾರೋ ಬರೆದಿದ್ದನ್ನು ಪಾಪ ರಾಜ್ಯಪಾಲರು ಈ ಭಾಷಣದಲ್ಲಿ ಹೇಳಿದರು.

"Hon'ble Members are aware that the State is required to utilise its share of waters."

ಬಚಾವತ್ ಅವಾರ್ಡ್‌ನಲ್ಲಿ ಶೇರು ಕೊಟ್ಟಿಲ್ಲ. 2 ಸಾವಿರ ಎ.ಡಿ. ಒಳಗೆ ಇಷ್ಟು ನೀರು ಉಪಯೋಗ ಮಾಡಿಕೊಳ್ಳಿ ಎಂದಷ್ಟೇ ಹೇಳಿದ್ದಾರೆ ಹೊರತು ನಿಮಗೆ ಇಷ್ಟೇ ನೀರು ಇದೆ ಎನ್ನುವ ಮಾತನ್ನು ಹೇಳಿಲ್ಲ. ಯಾವ ರೀತಿಯಾಗಿ ಕೊಡಬೇಕು ಎನ್ನತಕ್ಕಂಥಾದ್ದನ್ನು ಕೂಡ ಅವರು ಹೇಳಿಲ್ಲ. ಕರ್ನಾಟಕಕ್ಕೆ 800 ಟಿಎಂಸಿ ಆಂಧ್ರಪ್ರದೇಶಕ್ಕೆ 700 ಟಿಎಂಸಿ ಮಹಾರಾಷ್ಟ್ರಕ್ಕೆ 550 ಟಿಎಂಸಿ ನಾವು ಇಷ್ಟು ನೀರನ್ನು 2 ಸಾವಿರ ಎ.ಡಿ ಒಳಗೆ ಉಪಯೋಗಿಸಿಕೊಳ್ಳಬೇಕು. ಬೇಕಾದರೆ 2 ಸಾವಿರ ಎ.ಡಿ. ಒಳಗೆ ಮತ್ತೆ ಕುಳಿತುಕೊಂಡು ಪ್ರಯತ್ನ ಮಾಡಿಕೊಳ್ಳಬಹುದೆಂದು ಹೇಳಿದ್ದಾರೆ. 2 ಸಾವಿರ ಎ.ಡಿ.ಗೆ ನಾವೆಲ್ಲ ಕುಳಿತುಕೊಳ್ಳಬಹುದು. 3 ರಾಜ್ಯಗಳ ಜನರು ನೀರನ್ನು ಹಂಚಿಕೊಳ್ಳಬೇಕು. ಈಗ ನಾವು ಉಪಯೋಗ ಮಾಡಿಕೊಳ್ಳಲಾರದ ನೀರಿನ ಪರಿಸ್ಥಿತಿ ಏನಾಗಿದೆ? ಅದನ್ನು ನಾನು ಹೇಳುವುದು ಕಷ್ಟವಾಗುತ್ತದೆ. ನಾನು ಮುಖ್ಯಮಂತ್ರಿಯಾಗಿದ್ದಾಗ ಹೇಳಿದೆ. ನಾನು ಹೈದ್ರಾಬಾದ್ ಹೋಗಿ ಅಲ್ಲಿನ ಅಂದಿನ ಮುಖ್ಯಮಂತ್ರಿಗಳಾದ ಡಾ. ಚೆನ್ನಾರೆಡ್ಡಿಯವರನ್ನು ಭೇಟಿ ಮಾಡಿ ನಾವು 2 ಸಾವಿರ ಎ.ಡಿ.ವರೆಗೂ ಏತಕ್ಕೆ ಕಾಯಬೇಕು? ಹಾಗೆ ಹಂಚಿಕೊಳ್ಳಬಹುದಲ್ಲಾ. ಈಗ ನಮಗೆ ಸರ್‌ಪ್ಲಸ್ ವಾಟರ್ ಎಷ್ಟು ಇದೆ? ಅದನ್ನು ನಾವು ನೀವು ಕುಳಿತುಕೊಂಡು ಹಂಚಿಕೊಳ್ಳೋಣ. ಈಗ 3 ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿರುವುದರಿಂದ ನಾವೆಲ್ಲ ಒಂದು ಕಡೆ ಸೇರಿ ಹಂಚಿಕೊಳ್ಳಬೇಕಾಗುತ್ತದೆಂದು ಹೇಳಿದಾಗ ಇದು ಒಳ್ಳೆಯ ವಿಚಾರ ನಮ್ಮ ತೆಲುಗು ಗಂಗಾ ಕ್ಲಿಯರ್ ಆಗುತ್ತದೆ. ನೀವು ಏನು ಮಾಡುತ್ತಿದ್ದೀರಿ ನಿಮ್ಮ ಪ್ರಾಜೆಕ್ಟ್ಸ್ ಕ್ಲಿಯರ್ ಆಗುತ್ತವೆ. ಅದೇ ರೀತಿ ಮಹಾರಾಷ್ಟ್ರದ ಪ್ರಾಜೆಕ್ಟ್ ಏನಿವೆ ಅವು ಕ್ಲಿಯರ್ ಆಗುತ್ತವೆಂದು ಹೇಳಿದರು. ಆಗ ನಾವು ತಿರುಪತಿಯಲ್ಲಿ ಮೊದಲನೆಯ ಮೀಟಿಂಗ್ ಮಾಡಿದೆವು. ಎರಡನೆ ಮೀಟಿಂಗ್ ಮೈಸೂರಿನಲ್ಲಿ ಮಾಡಿದೆವು. ಮೂರನೇಯ ಮೀಟಿಂಗ್ ಮಹಬಲೇಶ್ವರದಲ್ಲಿ. ಮೂರನೇಯ ಮೀಟಿಂಗ್ ಲಾಸ್ಟ್ ಮೀಟಿಂಗ್ ಆ ಮೂರು ಜನರು ಈಗ ಇಲ್ಲ. ಡಾ. ಚೆನ್ನಾರೆಡ್ಡಿಯವರು ರಾಜಾಸ್ಥಾನದ ರಾಜ್ಯಪಾಲರಾದರು. ನಾನು ಅಧಿಕಾರ ಕಳೆದುಕೊಂಡೆ.

ಅಲ್ಲಿಂದ ಶರದ್‌ಪವಾರ್‌ರವರು ಕೇಂದ್ರದಲ್ಲಿ ಮಂತ್ರಿಯಾಗಿದ್ದಾರೆ. ಅವರ ನಂತರ ಮಹಾರಾಷ್ಟ್ರದಲ್ಲಿ ಮೂರು ಜನ ಮುಖ್ಯ ಮಂತ್ರಿಗಳಾದರು. ಆಂಧ್ರಪ್ರದೇಶದಲ್ಲೂ ಹೊಸ ಮುಖ್ಯ ಮಂತ್ರಿಯಾಗಿದ್ದಾರೆ. ಆಮೇಲೆ ಮೀಟಿಂಗ್ಸ್‌ನಲ್ಲಿ ನಡೆದ ವಿಚಾರವನ್ನು ಏನು ಮಾಡಿದರೆಂದು ಗೊತ್ತಾಗಲಿಲ್ಲ.ಇದನ್ನು ಫೈನಲ್ ಮಾಡೋಣ, ಸುಮ್ಮನೆ ಮೀಟಿಂಗ್ ಮಾಡುವುದರಿಂದ ಏನೂ ಪ್ರಯೋಜನವಿಲ್ಲವೆಂದು ನಾನು ಹೇಳಿದ್ದೆ. ಅದಕ್ಕೆ ಅವರು ಒಪ್ಪಿಕೊಂಡಿದ್ದರು. ಇದುವರೆಗೂ ಅದರ ಬಗ್ಗೆ ಏನಾಯಿತೆಂದು ನನಗೆ ಗೊತ್ತಾಗಲಿಲ್ಲ. 2 ಸಾವಿರ ಎ.ಡಿ.ಯವರೆಗೂ ಏಕೆ ಕಾಯಬೇಕು. ನೀರಿನ ಪೂರ್ಣ ಉಪಯೋಗವನ್ನು ಏಕೆ ಈಗಲೇ ಮಾಡಿಕೊಳ್ಳಬಾರದು ಎಂದು ನಾನು ಸಲಹೆ ಮಾಡಿದ್ದಕ್ಕೆ ಅವರೆಲ್ಲಾ ಒಪ್ಪಿಕೊಂಡಿದ್ದರು. ಬಚಾವತ್ ತೀರ್ಪಿನ ಪ್ರಕಾರ 22 ಟಿ.ಎಂ.ಸಿ.ಎಫ್. ಟಿ.ಯಷ್ಟು ನೀರನ್ನು ಮೂರು ರಾಜ್ಯಗಳು ಹಂಚಿಕೊಳ್ಳಬಹುದು. 22 ಟಿ.ಎಂ.ಸಿ.ಎಫ್.ಟಿ. ಗಿಂಥಾ 2 ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರು ಅಲ್ಲಿ ಹೆಚ್ಚಿಗೆ ಸಿಗುತ್ತದೆ. ನಾವು ತಿರುಪತಿಯಲ್ಲಿ ಮತ್ತು ಮೈಸೂರಿನಲ್ಲಿ ಮೀಟಿಂಗ್ ಮಾಡಿದಾಗ ಇವರು ಏನೋ ಮಾಡುತ್ತಿದ್ದಾರೆಂದು ನಮ್ಮ ಮೇಲೆ ಗೂಬೆ ಕೂರಿಸುವ ಪ್ರಯತ್ನಮಾಡಿದರು. ಆಮೇಲೆ, ಸಂಬಂಧಪಟ್ಟ ಮುಖ್ಯ ಮಂತ್ರಿಗಳಿಗೆ ನಾವು ಬೇರೆ ಕಡೆ ಎಲ್ಲೂ ಮೀಟಿಂಗ್ ಮಾಡುವುದು ಬೇಡ, ಹೇಗಿದ್ದರೂ ತಿಂಗಳಲ್ಲಿ

ಎರಡು ಸಲ ಡೆಲ್ಲಿಯಲ್ಲಿ ಸೇರುವುದು ಗ್ಯಾರಂಟಿ ಇರುವಾಗ ನಾವು ಅಲ್ಲೇ ಮಾತನಾಡೋಣವೆಂದು ಹೇಳಿದೆ. ಅದಕ್ಕೆ ಅವರೂ ಒಪ್ಪಿಕೊಂಡಿದ್ದರು. ಒಟ್ಟಿನಲ್ಲಿ ನಮಗೆ ಪ್ರಶ್ನೆ ಬಗೆಹರಿಯಬೇಕು. ಎಲ್ಲಿ ಮೀಟಿಂಗ್ ಮಾಡಿದರೂ ಒಂದೆ.

(ಈ ಸಂದರ್ಭದಲ್ಲಿ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಈ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಹೋದ ವರ್ಷ ಏನು ಹೇಳಿದ್ದಾರೋ ಅದೇ ಮಾತನ್ನು ಹೇಳಿದ್ದಾರೆಯೇ ಹೊರತಾಗಿ ಹೊಸ ಮಾತನ್ನು ಏನು ಹೇಳಿಲ್ಲವೆಂದು ನಾನು ಹೇಳಬೇಕಾಗುತ್ತದೆ. 2 ಸಾವಿರ ಎ.ಡಿ.ಯವರೆಗೆ ನಾವು ನೀರನ್ನು ಉಪಯೋಗ ಮಾಡಿದ್ದರೆ ನಮ್ಮ ಪಾಲಿನ ನೀರನ್ನು ನಾವು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ನೀರಾವರಿ ಬಾಬಿಗೆ ಹೆಚ್ಚಿನ ಹಣವನ್ನು ಸರ್ಕಾರ ಬಿಡುಗಡೆ ಮಾಡಿ ತ್ವರಿತವಾಗಿ ಕೆಲಸ ಮಾಡುವುದಕ್ಕೆ ನಿಗಾವಹಿಸಬೇಕು.ನಾನು ಹೇಳುವುದೇನೆಂದರೆ, 2 ಸಾವಿರ ಎ.ಡಿ.ಯವರೆಗೆ ಏಕೆ ಕಾಯಬೇಕು? ಅದಕ್ಕೂ ಮುಂಚೆ ನಮ್ಮ ಪಾಲಿನ ನೀರನ್ನು ನಾವು ಉಪಯೋಗ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮ ಪಾಲಿನ ನೀರನ್ನು ನಾವು ಉಪಯೋಗ ಮಾಡಿಕೊಂಡ ನಂತರ ಮುಂದಿನದನ್ನು ಸರ್ಕಾರ ಯೋಚನೆ ಮಾಡಬಹುದು. ನಾನು ತಿಳಿದ ಮಟ್ಟಿಗೆ 2 ಸಾವಿರ ಎ.ಡಿ. ಯೊಳಗೆ ಈ ಯೋಜನೆ ಮುಗಿಸುವ ಹಾಗೆ ಕಾಣುವುದಿಲ್ಲ. ಸುಮ್ಮನೆ ನೀರು ಸಮುದ್ರಕ್ಕೆ ಸೇರುತ್ತಿದೆ. ನಾವು ಮಾತನಾಡುತ್ತಾ ಸುಮ್ಮನೆ ಕಾಲವನ್ನು ಮುಂದಕ್ಕೆ ತಳ್ಳುತ್ತಿದ್ದೇವೆಯೇ ಹೊರತು ಸಮಯಕ್ಕೆ ಸರಿಯಾಗಿ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಇದನ್ನು ನಾವು ತಿಳಿದುಕೊಳ್ಳಬೇಕು. ನಾನು ಒಂದು ಸಲ ಕೇಂದ್ರದ ಮಂತ್ರಿಯಾಗಿದೆ. ಆಗ ನಾವು ಅವೇಳೆಗೆ ಹೈದರಾಬಾದ್‌ಗೆ ಹೋದಾಗ ಆಂಧ್ರಪ್ರದೇಶದ ಕಾಂಗ್ರೆಸ್‌ನ ದೊಡ್ಡ ನಾಯಕರುಗಳು ಬಂದು ಏನು ನಿಮ್ಮ ರಾಜ್ಯದವರು ತಮ್ಮ ಪಾಲಿಗೆ ಬಂದು ನೀರನ್ನು ಉಪಯೋಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ನಾವು ಉಪಯೋಗ ಮಾಡಿಕೊಳ್ಳುವುದಕ್ಕೂ ಬಿಡುವುದಿಲ್ಲ ಎಂದು ಹೇಳಿದರು. ಸುಮ್ಮನೆ ನದಿ ನೀರುಸಮುದ್ರಕ್ಕೆ ಸೇರುತ್ತಿದೆ ಎಂಬ ಮಾತನ್ನು ಹೇಳಿದರು. ಆದ್ದರಿಂದ, ಇನ್ನು ಮುಂದಾದರೂ ಸರ್ಕಾರ ಎಚ್ಚೆತ್ತುಗೊಂಡು ಬಜೆಟ್‌ನಲ್ಲಿ ನೀರಾವರಿ ಕಾಮಗಾರಿಗಳನ್ನು 2 ಸಾವಿರ ಎ.ಡಿ.ಯೊಳಗೆ ಮುಗಿಸುವುದಕ್ಕೆ ಸಾಕಷ್ಟು ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮ ಪಾಲಿನ ನೀರನ್ನು ನಾವು ಉಪಯೋಗ ಮಾಡಿಕೊಳ್ಳದಿದ್ದರೆ ಅನ್ಯಾಯ ಮಾಡಿದ ಹಾಗಾಗುತ್ತದೆ.

ನಾನು ಅದಕ್ಕೆ ಹೇಳುವುದು ಏನೆಂದರೆ 2000 ಇಸವಿಯೊಳಗೆ ಎಷ್ಟು ನೀರನ್ನು ಉಪಯೋಗ ಮಾಡಿಕೊಳ್ಳಬೇಕು ಎಂದು ಬಚಾವತ್ ಅವಾರ್ಡ್‌ನಲ್ಲಿ ನಿಗದಿ ಆಗಿದ್ದರೂ ಸಹ ನಾವು ನಮ್ಮ ನೀರನ್ನು ಉಪಯೋಗ ಮಾಡಿಕೊಳ್ಳಲಿಲ್ಲ. ಅನೇಕ ಜನ ಮುಖ್ಯಮಂತ್ರಿಗಳು ಬಂದು ಹೋಗಿದ್ದಾರೆ ನಮ್ಮ ರಾಜ್ಯದಲ್ಲಿ, ಬಂದವರೆಲ್ಲಾ ಹೇಳಿ ಹೋಗಿದ್ದಾರೆ ನಾವು ನೀರನ್ನು ಉಪಯೋಗ ಮಾಡುತ್ತೇವೆ ಎಂದು. ನಮ್ಮ ಪಾಲಿನ ಒಂದು ಹನಿ ನೀರನ್ನು ಬಿಡುವುದಿಲ್ಲ, ನಮ್ಮ ಪಾಲಿನ ನೀರನ್ನು ನಾವು ಉಪಯೋಗ ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದರೂ ಸಹ ನನಗೆ ಅನಿಸುತ್ತದೆ ನಾವು ನೀರನ್ನು ಸರಿಯಾಗಿ ಉಪಯೋಗಿ ಮಾಡಿಕೊಂಡಿಲ್ಲ ಎಂದು ವಾಟರ್ ಕಮಿಟ್‌ಮೆಂಟ್ ಎಂದರೆ ಏನು, ವಾಟರ್ ಯುಟಿಲೈಸೇಷನ್ ಎಂದರೆ ನಮಗೆ ಗೊತ್ತಿಲ್ಲ, ಇವತ್ತು ನಾನು ಅದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ

ಮಾಡುತ್ತಿದ್ದೇನೆ. ವಾಟರ್ ಯುಟಿಲೈಸೇಷನ್ ಆಗಬೇಕಾದರೆ ಕೆನಾಲ್‌ಗೆ ಡಿಸ್ಟ್ರಿಬ್ಯೂಷನ್ ಮಾಡಬೇಡವೇ? ವಾಟರ್ ಡಿಸ್ಟ್ರಿಬ್ಯೂಷನ್ ಅನ್ನು ಕ್ಯಾನಾಲ್‌ಗೆ ಮಾಡಿದರೆ ಅದು ವಾಟರ್ ಯುಟಿಲೈಸೇಷನ್ ಆಗುತ್ತದೆ. ಇದನ್ನು ಆಲೋಚನೆ ಮಾಡಬೇಕು. ನನಗೆ ಇದರ ಬಗ್ಗೆ ಮಾಹಿತಿ ಇಲ್ಲ, ಪ್ರತಿ ಒಂದು ವಿಷಯವನ್ನು ಸರ್ಕಾರ ತಿಳಿಸಬೇಕು. ವಾಟರ್ ಕಮಿಟ್‌ಮೆಂಟ್ ಎಂದರೆ ಏನು ಎಂದು ನಾವು ಸರ್ಕಾರವನ್ನು ಕೇಳಬೇಕಾಗಿದೆ. ಇದನ್ನು ನಮ್ಮ ಸರ್ಕಾರ ತಿಳಿದುಕೊಂಡು ಹೇಳಲಿ.

ಅಲ್ಲಿಂದ ಮೂರನೇ ಪಾಯಿಂಟ್ ಹೇಳುತ್ತೇನೆ. ಬರೀ ಪಾಯಿಂಟ್ಸ್‌ಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಹಿಂದುಳಿದ ವರ್ಗಗಳ ಸಾಮಾಜಿಕ ಹಾಗೂ ಶೈಕ್ಷಣಿಕ, ಆರ್ಥಿಕ ತೊಂದರೆಗಳ ನಿವಾರಣೆ ಮತ್ತು ಅವರುಗಳಿಗಾಗಿ ಇರುವ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕೋಸ್ಕರವಾಗಿ ಚಿನ್ನಪ್ಪ ರೆಡ್ಡಿ ನೇತೃತ್ವದ ಹಿಂದುಳಿದ ಆಯೋಗದ ಶಿಫಾರಸ್ಸನ್ನು ತೀವ್ರವಾಗಿ ನನ್ನ ಸರ್ಕಾರವು ಪರಿಗಣಿಸುತ್ತದೆ ಎಂದು ಹೇಳಿದ್ದೀರಿ. ಜನತಾ ಪಾರ್ಟಿಯವರು ತಮ್ಮ ಅಧಿಕಾರದ ಅವಧಿಯಲ್ಲಿ ಮಾಡಿದ ಆಯೋಗ ಇದು. ಈ ಆಯೋಗದ ಶಿಫಾರಸ್ಸುಗಳನ್ನು ಅವರು ಜಾರಿಗೊಳಿಸಲಿಲ್ಲ. ಯಾವುದಾದರೂ ಸರ್ಕಾರ ಒಂದು ಕಮೀಷನ್ ಅನ್ನು ಮಾಡಿದ ಮೇಲೆ ಅದನ್ನು ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ಮುಂದೆ ನೇಮಕ ಆಗುವ ಕಮೀಷನ್‌ಗಳಲ್ಲಿ ಛೇರ್ಮನ್ ಆಗಿ ಕೆಲಸ ಮಾಡುವುದಕ್ಕೆ ಯಾರೂ ಸಿದ್ಧರಾಗುವುದಿಲ್ಲ ಎಂದು ನನಗನಿಸುತ್ತದೆ.

ವೆಂಕಟಸ್ವಾಮಿ ಅವರು ಬಹಳ ಅಭ್ಯಾಸ ಮಾಡಿ ಚೆನ್ನಾಗಿ ವರದಿಯನ್ನು ಕೊಟ್ಟಿದ್ದರು. ಆದರೆ ಜನತಾ ಪಾರ್ಟಿಯವರು ವೆಂಕಟಸ್ವಾಮಿ ಆಯೋಗದ ವರದಿಯನ್ನು ಒಪ್ಪಿಕೊಳ್ಳಲಿಲ್ಲ, ರಿಜೆಕ್ಟ್ ಮಾಡಿದರು. ಚಿನ್ನಪ್ಪರೆಡ್ಡಿ ಕಮೀಷನ್ ವರದಿ ಬಂತು, ಅದರ ವರದಿಯನ್ನು ಒಪ್ಪಿಕೊಳ್ಳಲಿಲ್ಲ. ಚಿನ್ನಪ್ಪರೆಡ್ಡಿ ಕಮೀಷನ್ ವರದಿ ಕೊಟ್ಟು ಎಂದು ವರ್ಷ ಆಯಿತು. ನಾನು ಇದ್ದಾಗ ರಿಪೋರ್ಟ್ ಕೊಟ್ಟಿದ್ದುದು. ನಾನು ಅದನ್ನು ಅಸೆಂಬ್ಲಿಯಲ್ಲಿ ಕೊಟ್ಟಿದ್ದೇನೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ, ನನಗೆ ನೆನಪು ಇಲ್ಲ, ರೆಡ್ಡಿ ಕಮೀಷನ್ ಅನ್ನು ಒಪ್ಪಬಹುದು ಎಂದು ಹೇಳಿದೆ. ಮಂಡಲ್ ಕಮೀಷನ್ ವರದಿ ಬಂದ ನಂತರ ಚಿನ್ನಪ್ಪ ರೆಡ್ಡಿ ಕಮೀಷನ್ ವರದಿ ಜಾರಿಗೆ ಕೊಡಬಹುದು ಎಂದು ಹೇಳುವುದು ಸರಿಯಲ್ಲ, ಮಂಡಲ್ ಕಮೀಷನ್ ವರದಿ ಅದು ಆಲ್ ಇಂಡಿಯಾ ಪೋಸ್ಟ್‌ಗಳಿಗೆ ಬೇಸ್ಡ್, ಅದು ನಮಗೆ ಅಪ್ಲೈ ಆಗುವುದಿಲ್ಲ. ಎ.ಎಎಸ್,ಐಪಿಎಸ್.ಐಎಫ್‌ಎಸ್ ಇತ್ಯಾದಿ ಪೋಸ್ಟ್‌ಗಳಿಗೆ ಮಂಡಲ್ ಕಮೀಷನ್ ವರದಿ ಅಪ್ಲೈ ಆಗುತ್ತದೆಯೇ ಹೊರತು ನಮ್ಮ ಕಮೀಷನ್‌ಗೆ ಅದು ಅಪ್ಲೈ ಆಗುವ ಹಾಗೆ ಇಲ್ಲ, ಮಂಡಲ್ ಕಮೀಷನ್ ವರದಿ ಜಾರಿ ಆಗುವವರಗೆ ಚಿನ್ನಪ್ಪ ರೆಡ್ಡಿ ವರದಿಯ ಅನುಷ್ಠಾನಕ್ಕೆ ಕಾಯಬೇಕಾದ ಆವಶ್ಯಕತೆ ಇಲ್ಲ, ವೆಂಕಟಸ್ವಾಮಿ ಆಯೋಗದ ವರದಿಯನ್ನು ತಯಾರು ಮಾಡಿದ್ದರು. ಈಗ ನಮ್ಮ ರಾಜ್ಯದಲ್ಲಿ 91-92 ಪರ್ಸೆಂಟ್ ಬ್ಯಾಕ್‌ವರ್ಡ್ ಇರಬಹುದು. ನಮ್ಮ ರಾಷ್ಟ್ರದಲ್ಲಿಯೂ ಸಹ ಬಹಳ ಪರ್ಸೆಂಟ್ ಬ್ಯಾಕ್‌ವರ್ಡ್ ಇರಬಹುದು, ಇಲ್ಲವೆಂದಲ್ಲ. ಆದರೆ ನನಗೆ ಅನಿಸುವುದು ಏನೆಂದರೆ ಯಾರು ರಿಯಲ್ ಆಗಿ ಬ್ಯಾಕ್‌ವರ್ಡ್ ಇದ್ದಾರೆ, ಯಾರು ರಿಯಲ್ ಆಗಿ ಬ್ಯಾಕ್‌ವರ್ಡ್ ಇರುವುದಿಲ್ಲ ಅವರೂ ಸಹ ಬ್ಯಾಕ್‌ವರ್ಡ್ ಎಂದು ಸೇರಿಸಿಕೊಂಡಿರುತ್ತಾರೆ. ನಿಜವಾಗಿ ಹಿಂದುಳಿದವರಿಗೆ ಇದರಿಂದ ಲಾಭ ಸಿಗುತ್ತಿಲ್ಲ, ಯಾರೋ ಮಧ್ಯದಲ್ಲಿರುವವರು ಇದರ ಲಾಭ ಹೊಡೆಯುತ್ತಾರೆ. ಇದರ ಬಗ್ಗೆ ಆಲೋಚನೆ ಮಾಡಬೇಕಾಗಿದೆ.

ಇನ್ನು 1991ರಲ್ಲಿ ನಾವು ಏನು ಹೇಳಿದ್ದೇವೆ ಎಂದು ನೋಡಬೇಕಾಗಿದೆ.

1991ರಲ್ಲಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ

'My Government is considering the recommendations of the Third Backward Classes Commission headed by Mr. Justice O. Chinnappa Reddy.'

ಇದನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ 1991ರಲ್ಲಿ ಹೇಳಿದ್ದರು. ಆವೊತ್ತು ಏನು ಹೇಳಿದ್ದಾರೆ ಎಂಬುದನ್ನು ನಾವು ವಿಚಾರ ಮಾಡಬೇಕು. ಅವರು ಆವೊತ್ತು ಹೇಳಿದ್ದುದು "I would like to inform the Hon'ble Members that the recommendations of the III Backward Classes Commission headed by Justice O. Chinnappa Reddy are under the active consideration of my Government.

ಹಾಗೆ ಹೇಳಿದ ಪ್ರಕಾರ ಮುಂದಿನ ವರ್ಷ ತೀವ್ರವಾಗಿ ಪರಿಶೀಲಿಸುತ್ತದೆ ಎಂದು ಹೇಳಿದ್ದಾರೆ..

ಏನುಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯೇ ಎಂಬುದು ಮುಖ್ಯವಾದುದು.

"My Government proposes to appoint a permanent Commission for Backward Classes...

"Very actively considering..'

ಹೀಗೆ ಹೇಳಿದರೆ ಅದಕ್ಕೆ ಏನು ಅರ್ಥ ಬರುತ್ತದೆ? ನಾನು ಈ ಬಗ್ಗೆ ಹೇಳುವುದೇನೆಂದರೆ ಎಷ್ಟು ದಿವಸ ನಮ್ಮರಾಜ್ಯದ ಜನರಿಗೆ ನೀವು ಹೀಗೆ ಹೇಳುತ್ತಾ ಹೋಗುತ್ತೀರಿ? ಒಂದೊಮ್ಮೆ ಇನ್ನೂ ಎರಡು ಬಜೆಟ್ ಭಾಷಣದ ಅಧಿವೇಶನದಲ್ಲಿ ಹೇಳಬಹುದು. ಎರಡು ರಾಜ್ಯಪಾಲರ ಭಾಷಣದಲ್ಲಿ ಇದನ್ನು ಹೇಳಬಹುದು. ಹೀಗೆ ಎರಡರಲ್ಲಿಯೂ ಚಿನ್ನಪ್ಪರೆಡ್ಡಿ ಕಮಿಷನ್ ಬಗ್ಗೆ ತೀವ್ರವಾಗಿ ಪರಿಶೀಲಿಸುತ್ತದೆ, ಅತ್ಯಂತ ತೀವ್ರವಾಗಿ ಪರಿಶೀಲಿಸುತ್ತದೆ ಎಂದು ಹೇಳಿಕೊಂಡು ಹೋದರೆ ನಮಗೆ ಏನಾದರೂ ಬೆಲೆ ಉಳಿಯುತ್ತದೆಯೇ? ಆ ಬಗ್ಗೆ ನಾವುಗಳು ವಿಚಾರ ಮಾಡಬೇಕು. ನಾವು ಈಗ ಐದು ವರ್ಷಗಳ ಕಾಲಕ್ಕೆ ಆರಿಸಿ ಬಂದಿದ್ದೇವೆ, ಅಲ್ಲಿಯವರೆಗೆ ಯಾರ ಮುಲಾಜು ಇಲ್ಲದೆ ಇರುತ್ತೇವೆ, ಇಲ್ಲಿಯೇ ಕುಳಿತಿರುತ್ತೇವೆ. ಆಮೇಲೆ ಜನರು ನಮ್ಮ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳಬಹುದು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಒಂದೊಮ್ಮೆ ನಾವು ಆ ಕಡೆಯಲ್ಲಿ ಕುಳಿತಿದ್ದೆವು. ಜನತಾದಳದವರು ಈ ಕಡೆಯಲ್ಲಿ ಕುಳಿತಿದ್ದರು. ಈಗ ನಾವು ಇಲ್ಲಿ ಕುಳಿತಿದ್ದೇವೆ. 1994-95ರಲ್ಲಿ ಈ ಸ್ಥಳಕ್ಕೆ ಯಾರು ಬರುತ್ತಾರೆ, ಆಸ್ಥಳಕ್ಕೆ ಯಾರು ಹೋಗುತ್ತಾರೋ ಎಂಬುದನ್ನು ಈಗ ಹೇಳಲಾಗುವುದಿಲ್ಲ. ಹಾಗೆ ಹೇಳುವುದು ಕಷ್ಟ ಕೂಡ ಆಗಿದೆ. ಹೀಗೆ ನಾವು ಸುಳ್ಳು ಹೇಳಿದರೆ ಜನರು ನಮ್ಮ ಬಗ್ಗೆ ಏನು ಹೇಳುತ್ತಾರೆ? ಈ ಸರಕಾರದವರು ಸುಳ್ಳು ಹೇಳುತ್ತಾರೆ, ಅಲ್ಲಿ ಒಳ್ಳೆಯ ವಿಚಾರ ಮಾತನಾಡುವವರು ಯಾರೂ ಇಲ್ಲ ಎಂಬ ವಿಚಾರ ಬರುತ್ತದೆ. ಹಾಗೆ ನಮಗೆ ಆಗಬಾರದು ಎಂದು ನಾನು ಕೆಲವು ವಿಚಾರಗಳನ್ನು ಹೇಳಿದ್ದೇನೆ.

ಇನ್ನು ಸರಕಾರದ ಯಂತ್ರವನ್ನು ಹೇಗೆ ಸುಧಾರಣೆ ಮಾಡಬೇಕೆಂಬ ಬಗ್ಗೆ ನನ್ನಲ್ಲಿ ಕೆಲವು ಸಲಹೆಗಳು ಇವೆ. ಆಡಳಿತ ಸುಧಾರಣೆಗಾಗಿ ನಾವು ಕೇವಲ ಅಥಾರಿಟೀಸ್, ಬೋರ್ಡ್ಸ್ ಮತ್ತು ಕಮಿಟಿಗಳನ್ನು ಮಾಡುವುದರಿಂದ ಸರಕಾರದ

ಎಫಿಶಿಯನ್ಸಿ ಇಂಪ್ರೂವ್ ಆಗುವುದಿಲ್ಲ. ಇವೊತ್ತು ನಮ್ಮಲ್ಲಿ ಅಡ್ಮಿನಿಸ್ಟ್ರೇಟಿವ್ ಇಂಪ್ರೂವ್‌ಮೆಂಟ್ ಆಗಬೇಕೆಂದು ಒಂದು ಸಮಿತಿ ಮಾಡುವುದು ಇತ್ಯಾದಿಯಿಂದ ಯಾವುದೇ ಅಭಿವೃದ್ಧಿಯಾಗುವುದಿಲ್ಲ ಎಂಬ ಮಾತನ್ನು ಹೇಳಬೇಕಾಗುತ್ತದೆ.

ಅಡ್ಮಿನಿಸ್ಟ್ರೇಷನ್ ಇಂಪ್ರೂವ್ ಆಗಬೇಕೆಂದರೆ ಜವಾಬ್ದಾರಿಯುತ ಅಧಿಕಾರಿಗಳನ್ನು ಆಯಾಯ ಸ್ಥಾನಗಳಲ್ಲಿ ನೇಮಿಸಬೇಕು. ನಾನು ಇದ್ದಾಗ ಅಂಥ ಒಂದು ಪ್ರಯತ್ನವನ್ನು ಮಾಡಿದ್ದೆ. ಸರಕಾರದಲ್ಲಿ ಎಲ್ಲರೂ ಕೆಟ್ಟ ಅಧಿಕಾರಿಗಳು ಎಂದು ನಾನು ಹೇಳುವುದಕ್ಕೆ ಹೋಗಲಾರೆ. ಒಳ್ಳೆಯ ಅಧಿಕಾರಿಗಳು ಕೂಡ ಸಾಕಷ್ಟು ಜನರಿದ್ದಾರೆ. ಈಗ ಹೊರಗಡೆ ನಾವು ಹೋಗುವಾಗ ಒಂದು ಆಟೋದಲ್ಲಿ ಕುಳಿತಾಗ, ಟ್ಯಾಕ್ಸಿಯಲ್ಲಿ ಕುಳಿತಾಗ, ಬಸ್‌ಸ್ಟ್ಯಾಂಡ್‌ಗಳಲ್ಲಿ ಇರುವಾಗ ಜನರು ಏನು ಹೇಳುತ್ತಾರೆ ಎಂಬುದನ್ನು ಕೇಳಬೇಕು. ಈಗಿನ ಸರಕಾರದಲ್ಲಿ ರೊಕ್ಕ ಕೊಡಲಾರದೆ ಯಾವುದೇ ಕೆಲಸ ಆಗುವುದಿಲ್ಲ ಎಂಬ ಒಂದು ಅಭಿಪ್ರಾಯದ ಮಾತುಗಳು ಕೇಳಿ ಬರುತ್ತವೆ. ಇಂಥ ಅಭಿಪ್ರಾಯದ ಮಾತುಗಳನ್ನು ಸರಕಾರ ಪಡೆಯುವಂತೆ ಆಗಬಾರದು. ಅದರ ಸಲುವಾಗಿ ನಾನು ಹೇಳುವುದೇನೆಂದರೆ ನಮ್ಮ ಒಳ್ಳೆಯ ಅಧಿಕಾರಿಗಳನ್ನು ಜವಾಬ್ದಾರಿಯುತ ಸ್ಥಾನದಲ್ಲಿ ಇಡಬೇಕು. ಅಂಥವರಿಗೆ ಪ್ರೋತ್ಸಾಹಕರ ವಾತಾವರಣವನ್ನು ಕಲ್ಪಿಸಿಕೊಡಬೇಕು. ಅಂಥವರು ತಮ್ಮ ಆಡಳಿತ ನೈಪುಣ್ಯತೆಯನ್ನು ತೋರಿಸಲು ಅವಕಾಶ ಕೊಡಬೇಕು. ಅಂದರೆ ಮಾತ್ರ ನಮ್ಮ ಆಡಳಿತದಲ್ಲಿ ಸುಧಾರಣೆಯನ್ನು ಕಾಣಬಹುದು. ಇಲ್ಲದಿದ್ದಲ್ಲಿ ಆಗುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ನನ್ನ ಕಾಲದಲ್ಲಿ ಈ ದಿಕ್ಕಿನಲ್ಲಿ ಸ್ವಲ್ಪ ಪ್ರಯತ್ನ ಮಾಡಿದೆ. ಆಡಳಿತ ಸುಧಾರಣಾ ಸಲಹಾ ಸಮಿತಿಗೆ ಚೇರ್ಮನ್ ಆಗಿ ಇರಬೇಕು ಎಂದು ಒಬ್ಬ ಹೈಕೋರ್ಟ್ ರಿಟೈರ್ಡ್ ಜಡ್ಜ್‌ನ್ನು ಕೇಳಿಕೊಂಡಿದ್ದೆ ಅವರು ಒಪ್ಪಿಕೊಂಡಿದ್ದರು, ಅದರ ಜೊತೆಗೆ ಸದಸ್ಯರಾಗಿ ಇನ್ನಿಬ್ಬರು ಗಣ್ಯ ವ್ಯಕ್ತಿಗಳನ್ನು ಕೆಲಸಮಾಡಲು ಕೇಳಿದ್ದಾಗ ಅವರೂ ಒಪ್ಪಿದ್ದರು. ಅಷ್ಟರಲ್ಲೇ ನನ್ನ ಅಧಿಕಾರ ಹೋಯಿತು. ಆ ಕೆಲಸ ಆನಂತರಆಗಲೇ ಇಲ್ಲ. ನಾನು ಏನೂ ಮಾಡುವುದಕ್ಕೆ ಆಗಲಿಲ್ಲ ಏಕೆ ಈ ವಿಚಾರ ಹೇಳುತ್ತಿದ್ದೇನೆಂದರೆ ಒಬ್ಬ ಕಿರಿಯ ಸಚಿವರು ನನ್ನ ಬಳಿ ಬಂದಿದ್ದರು. ನನ್ನನ್ನು ಅಡ್ಮಿನಿಸ್ಟ್ರೇಷನ್ ಅನ್ನು ಹೇಗೆ ಎಫೆಕ್ಟೀವ್ ಮಾಡಬೇಕೆಂದು ಸಲಹೆ ಕೇಳಿದರು. ನಾನು ಹೇಳಿದೆ. ನೋಡಿ ಒಳ್ಳೆಯ ಆಫೀಸರ್ಸ್ ಇಲ್ಲ ಎಂದು ಅಂದುಕೊಳ್ಳಬಾರದು, ಅವರೂ ಇದ್ದಾರೆ, ಅಂಥವರಿಗೆ ಎನ್‌ಕರೇಜ್‌ಮೆಂಟ್ ಕೊಡಿ ಎಂದೆ. ಜನಗಳಲ್ಲಿ ಆಗ ಒಳ್ಳೆಯ ಭಾವನೆ ಬರುತ್ತದೆ. ಪರವಾಗಿಲ್ಲಪ್ಪ, ಈ ಸರ್ಕಾರಕ್ಕೆ ಒಳ್ಳೆಯ ಕೆಲಸ ಮಾಡಬೇಕೆಂಬ ಇರಾದೆ ಇದೆ, ಒಳ್ಳೆಯ ಆಫೀಸರ್ಸನ್ನು ಇವರು ಇಟ್ಟಿದ್ದಾರೆ ಎಂದು. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ 20-25 ವರ್ಷ ಸರ್ವೀಸ್ ಮಾಡಿದ ಮೇಲೆ ಅಂತಹ ನೌಕರರನ್ನು ನೋಡಪ್ಪ, ನಿನ್ನ ಸರ್ವೀಸ್ ಸಾಕಾಗಿದೆ, ಇನ್ನು ನೀನು ನಿವೃತ್ತನಾಗು, ಬೇರೆಯವರಿಗೆ ಯುವಕರಿಗೆ ನಾವು ಕೆಲಸ ಕೊಡುತ್ತೇವೆ. ಎಂದರೆ ಅವರು ಏನೂ ಮಾಡುವ ಹಾಗಿಲ್ಲ. ಸರ್ಕಾರಿ ನೌಕರರು ರಿಟೈರಾಗುವ ಕೊನೆಯ ಎರಡು ಮೂರು ವರ್ಷಗಳಲ್ಲಿ ಬಹಳ ಡೇಂಜರಸ್ ಆಗುತ್ತಾರೆ. ಇನ್ನು ಹೇಗಿದ್ದರೂ ರಿಟೈರ್ ಆಗುತ್ತೇವೆ ಅಷ್ಟರಲ್ಲಿ ಎಷ್ಟು ಸಾಧ್ಯವೋ ಅಷ್ಟೂ ರೊಕ್ಕ ಮಾಡಿಕೊಂಡು ಬಿಡಬೇಕು ಎಂದು ಯೋಚಿಸುತ್ತಾರೆ. ಅಲ್ಲದೆ ಇದರಲ್ಲಿ ಇನ್ನೊಂದು ವಿಷಯವೂ ಇದೆ. ನಮ್ಮ ಗುಲ್ಬರ್ಗದಲ್ಲಿ ಕೆಲವು ಆಫೀಸರ್ಸ್ ಶಾಸಕರ ಮುಂದೆಯೇ ಹೇಳುತ್ತಾರಂತೆ; ನೋಡ್ರಿ, ನಾವು ಲಂಚ ತಗೊಳ್ಳಲೇಬೇಕು, ಏಕೆಂದರೆ ಈ ಜಾಗಗೆ ಬರಲು

ನಾವು ಅಷ್ಟು ಕೊಟ್ಟಿದ್ದೇವೆ, ಇಷ್ಟು ಕೊಟ್ಟಿದ್ದೇವೆ, ಜೊತೆಗೆ ಮೇಲಿನವರಿಗೂ ನಾವು ಪ್ರತಿತಿಂಗಳೂ ಲಂಚ ಪೂರೈಸಬೇಕು ಎಂದು. ಯಾವ ಕಾಲದಲ್ಲೂ ಕರ್‌ಪ್ಶನ್ ಇರಲಿಲ್ಲ ಎಂದು ನಾನು ಹೇಳುವುದಿಲ್ಲ. ಅದು ಎಲ್ಲ ಕಾಲಕ್ಕೂ ಇತ್ತು, ಬ್ರಿಟೀಷರ ಕಾಲಕ್ಕೂ ಇತ್ತು, ಈಗಲೂ ಇದೆ. ಇದರರ್ಥವೇನೆಂದರೆ ಮೇಲಿನವರು ಕರಪ್ಟ್ ಆದರೆ ಕೆಳಗಿನವರೂ ಕರಪ್ಟ್ ಆಗಿರುತ್ತಾರೆ.

ಬರೀ ಸಮಿತಿ ಅಥಾರಿಟಿಗಳನ್ನು ಮಾಡುವುದರಿಂದ ಅಡ್ಮಿನಿಸ್ಟ್ರೇಶನ್ ಇಂಪ್ರೂವ್ ಆಗುವುದಿಲ್ಲ, ಅದಾಗಬೇಕಾದರೆ ಒಂದು ಒಳ್ಳೆಯ ವಾತಾವರಣ ಕ್ರಿಯೇಟ್ ಮಾಡಿ ಅದೇನೆಂದರೆ ಇನ್ನು ಮುಂದೆ ಒಳ್ಳೆಯ ಆಫೀಸರ್‌ಗೆ ಸ್ಕೋಪ್ ಹೊರತು ಇನೆಫಿಶಿಯಂಟ್ ಆಫೀಸರ್ಸ್‌ಗೆ ಸ್ಕೋಪಿಲ್ಲ ಎನ್ನುವುದು. ನಾವು ಕರಪ್ಟ್ ಆದರೆ ಸರ್ಕಾರ ಮನೆಗೆ ಕಳಿಸುತ್ತಾರೆ ಎಂಬ ಭಯ ತರಬೇಕು, ಆಗ ಸರ್ವಿಸಿನ ಕೊನೆಯಲ್ಲಾದರೂ ಹಾನೆಸ್ಟಾಗಿ ಇದ್ದು ಎಫೆಕ್ಟೀವಾಗಿ ಕೆಲಸ ಮಾಡಿ ಒಳ್ಳೆಯ ಹೆಸರನ್ನು ಪಡೆದು ರಿಟೈರಾಗೋಣ ಎಂಬ ಭಾವನೆ ಅವರಿಗೆ ಬರುತ್ತದೆ.

5.45 ಪಿ.ಎಂ.

ಇರುವವರೆಗೂ ಆನೆಸ್ಟ್ ಆಗಿ ಇರೋಣ ಎನ್ನತಕ್ಕಂಥ ವಿಚಾರ ಅವರಲ್ಲಿ ಬರಬಹುದು ಎಂದು ನನಗನ್ನಿಸುತ್ತದೆ. ಇಲ್ಲಿ ಏನಾಗಿದೆ ಎಂದರೆ ಹೋದ ಸಲ ಮತ್ತು ಈ ಸಲದ ರಾಜ್ಯಪಾಲರ ಭಾಷಣದಲ್ಲಿ ಇದೇ ರಿಪಿಟಿಷನ್ ಇದೆಯೇ ಹೊರತಾಗಿ ಹೊಸದಾಗಿ ಏನೂ ಇಲ್ಲ ಎನ್ನತಕ್ಕಂಥ ವಿಚಾರವನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪಂಚಾಯತ್ ರಾಜ್ ಮತ್ತು ಜಿಲ್ಲಾ ಪರಿಷತ್ತುಗಳು ಅಸ್ತಿತ್ವದಲ್ಲಿರುವಾಗ ನಾವು 179 ಜನರು ಆರಿಸಿ ಬಂದಿದ್ದೇವೆ. ನನಗೆ ಏನು ಅನಿಸುತ್ತದೆ ಎಂದರೆ ಕರ್ನಾಟಕ ರಾಜ್ಯದಲ್ಲಿ ಇಷ್ಟೊಂದು ಜನ ಯಾವ ಪಾರ್ಟಿಯಲ್ಲೂ ಕೂಡ ಆರಿಸಿ ಬಂದಿದ್ದನ್ನು ನಾನು ನೋಡಿಲ್ಲ. ಈಗ ಸರ್ಕಾರ ಏನು ಹೇಳುತ್ತಿದೆ ಎಂದರೆ 91ರ ಜನಗಣತಿ ಪ್ರಕಾರ, ಡಿ-ಲಿಮಿಟೇಷನ್ ಆಫ್ ಕಾನ್‌ಸ್ಟಿಟ್ಯೂಯೆನ್ಸೀಸ್ ಮಾಡಿ ಎಲೆಕ್ಷನ್ನನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಹೊರಗಡೆ ಜನರ ಮನಸ್ಸಿನಲ್ಲಿ ಏನು ಫೀಲಿಂಗ್ ಇದೆ ಎಂದು ಹೇಳಿದರೆ ಇವರು ಚುನಾವಣೆಗೆ ಹೆದರಿಕೊಂಡಿದ್ದಾರೆ, ಅದಕ್ಕಾಗಿಯೇ ಚುನಾವಣೆಗೆ ಇವರು ಹೋಗುತ್ತಿಲ್ಲ ಎನ್ನತಕ್ಕಂಥ ಒಂದು ಫೀಲಿಂಗ್ ಕೂಡ ಇದೆ. ನೀವು ಬೇಕಾದ್ದು ಹೇಳಬಹುದು, ನಾವು ಚುನಾವಣೆಗೆ ಹೆದರುವುದಿಲ್ಲ, ಹೋಗಿಯೇ ಹೋಗುತ್ತೇನೆ ಎಂದು ಹೇಳಬಹುದು. ಜನರಲ್ಲಿ ಇರತಕ್ಕಂಥ ಒಂದು ಫೀಲಿಂಗನ್ನು ನಾನು ಹೇಳುತ್ತಿದ್ದೇನೆ. 89ರ ನವೆಂಬರ್ ಎಲೆಕ್ಷನ್ ಮ್ಯಾನಿಫೆಸ್ಟೋನಲ್ಲಿ ಪಂಚಾಯತ್‌ರಾಜ್ ಬಿಲ್ಲನ್ನು ತರುತ್ತೇನೆ ಎಂದು ಹೇಳಿದ್ದೆವು. ನಮ್ಮ ನಾಯಕರಾದಂಥ ರಾಜೀವ್ ಗಾಂಧಿಯವರೂ ಕೂಡ ಈ ವಿಷಯವನ್ನು ಒಪ್ಪಿಕೊಂಡಿದ್ದರು. ನಾವು ಇದಕ್ಕೆ ಸಪೋರ್ಟ್ ಮಾಡುತ್ತೇವೆ. ಪಂಚಾಯತ್ ರಾಜ್‌ನಲ್ಲಿ ನಮಗೆ ಅಚಲವಾದಂಥ ವಿಶ್ವಾಸ ಇದೆ ಎನ್ನತಕ್ಕಂಥ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿಂದ ಕೇಂದ್ರ ಸರ್ಕಾರದಲ್ಲಿ ನಾವು ಅಧಿಕಾರಕ್ಕೆ ಬರುವುದಕ್ಕೆ ಮೊದಲು ಅಲ್ಲಿಯೂ ಕೂಡ ಎಲೆಕ್ಷನ್ ಮ್ಯಾನಿಫೆಸ್ಟೋನಲ್ಲಿಯೂ ಹೇಳಿದ್ದೆವು. 89ರದ್ದನ್ನು ನಾನು ಹೇಳುತ್ತಿಲ್ಲ, ನಾನು 91ರ ಬಗ್ಗೆ ಹೇಳುತ್ತೇನೆ.

91ರ ಎಲೆಕ್ಷನ್‌ನಲ್ಲಿ ನಾವು ನಮಗೆ ಪಂಚಾಯತ್ ರಾಜ್ ಬಗ್ಗೆ ಅಚಲವಾದಂಥ ವಿಶ್ವಾಸ ಇದೆ ಎಂದು ಹೇಳಿದ್ದೇವೆ. ಅಲ್ಲಿಂದ ಮೂರು ತಿಂಗಳಲ್ಲಿಯೇ ಪಂಚಾಯತ್

ರಾಜ್‌ನ್ನು ಮತ್ತೆ ಅಸ್ತಿತ್ವಕ್ಕೆ ತರುತ್ತೇವೆ ಎಂದು ಹೇಳಿದ್ದೆವು. ಇವತ್ತು ಅಲ್ಲಿಗೆ ಕೊಟ್ಟಂಥ ದುಡ್ಡನ್ನು ಯಾವ ರೀತಿ ಖರ್ಚು ಮಾಡುತ್ತಿದ್ದಾರೋ ಎಷ್ಟು ಜನ ಅಧಿಕಾರಿಗಳು ಅದನ್ನು ಜೇಬಿಗೆ ಬಿಡುತ್ತಿದ್ದಾರೋ ನನಗಂತೂ ಗೊತ್ತಿಲ್ಲ. ಇದಕ್ಕೆ ನಾವು ಏನು ಮಾಡುವುದಕ್ಕಾಗುವುದಿಲ್ಲ. ಜನರು ಹೊರಗಡೆ ನೀವು ಹೇಳಿದ್ದು ಒಂದು, ಮಾಡುವುದು ಇನ್ನೊಂದು ಎಂದು ದೂರುತ್ತಿದ್ದಾರೆ. ಅದಕ್ಕಾಗಿ ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೆ. 89ರ ಎಲೆಕ್ಷನ್ ಮ್ಯಾನಿಫೆಸ್ಟೊವನ್ನು ಕೂಡ ನೋಡಿದ್ದೇನೆ. ನಾನು ಆಗ ಕರ್ನಾಟಕ ಕಾಂಗ್ರೆಸ್ ಪ್ರದೇಶ ಕಮಿಟಿಯ ಅಧ್ಯಕ್ಷನಾಗಿದ್ದೆ. 1991ರ ಎಲೆಕ್ಷನ್ ಮ್ಯಾನಿಫೆಸ್ಟೊವನ್ನು ಕೂಡ ನಾನು ನೋಡಿದ್ದೇನೆ. ನಾವು ಮೂರು ತಿಂಗಳಲ್ಲಿ ಪಂಚಾಯತ್ ಬಿಲ್ಲನ್ನು ಪಾಸ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಪಂಚಾಯತ್ ರಾಜ್ ಬಿಲ್ ಪಾಸಾಗಿಲ್ಲ, ಸೆಲೆಕ್ಟ್ ಕಮಿಟಿಗೇನಾದರೂ ಹೋಗಿದೆಯೋ ಅದೂ ಕೂಡ ನನಗೆ ಗೊತ್ತಿಲ್ಲ. ಇದುವರೆಗೂ ಅದು ಕೇಂದ್ರದಲ್ಲಿ ಹಾಗೆಯೇ ಬಿದ್ದಿದೆ. ಆದರೆ ಇದುವರೆಗೂ ಪಂಚಾಯತ್ ರಾಜ್ ಬಿಲ್ಲನ್ನು ಪಾಸ್ ಮಾಡಲಿಲ್ಲ. ಪಂಚಾಯತ್ ರಾಜ್‌ನ್ನು ಮತ್ತೆ ಅಸ್ತಿತ್ವಕ್ಕೆ ತರಬೇಕು ಎಂದು ಹೇಳುತ್ತೇವೆ. ನಾವು ಇದನ್ನು ನಿಧಾನ ಮಾಡುವ ಹಾಗೆ ಇಲ್ಲ ಎಂದು ಕೇಂದ್ರ ಸರ್ಕಾರದವರೂ ಹೇಳಿದ್ದರು. ಆದರೆ ಅದನ್ನು ಅಬಾಲಿಷ್ ಮಾಡಬಾರದಾಗಿತ್ತು. ಅದನ್ನು ಕಂಟಿನ್ಯೂ ಮಾಡಬಹುದಾಗಿತ್ತು. ಹೇಗೂ ಐದು ವರ್ಷ ಮಾಡಿದ್ದೀರಿ, ಇನ್ನು ಐದಾರು ತಿಂಗಳು ಮಾಡಿಕೊಂಡು ಹೋಗಿ ಎಂದು ಹೇಳಬಹುದಾಗಿತ್ತು. ಏತಕ್ಕೆ ಹೇಳುತ್ತಿದ್ದೇನೆಂದರೆ ನಾವು ಪಂಚಾಯತ್‌ರಾಜ್ ಮತ್ತು ಜಿಲ್ಲಾ ಪರಿಷತ್ತುಗಳನ್ನು ನೋಡಿದ್ದೇವೆ. ಆ ವೇಳೆಗೆ ಅವುಗಳು ಬಹಳ ಪಾಪ್ಯುಲರ್ ಆಗಿದ್ದವು. ನಾನು ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ ಪ್ರೆಸಿಡೆಂಟ್ ಆಗಿ ಟೂರ್ ಮಾಡುತ್ತಿದ್ದಾಗ ಯಾರೋ ಒಬ್ಬರು ಹೇಳಿದರು.

ಇವತ್ತು ಜಿಲ್ಲಾ ಪರಿಷತ್ತು ಮಂಡಲ್ ಪಂಚಾಯತಿ ಅಸ್ಥಿತ್ವದಲ್ಲಿದೆ. ನಾವು 179ಜನ ಶಾಸಕರು ಇಲ್ಲಿಗೆ ಆರಿಸಿ ಬಂದಿದ್ದೇವೆ. ಇಷ್ಟೊಂದು ಬಹುಮತದಿಂದ ಹಿಂದೆಂದೂ ಯಾವ ಪಕ್ಷವೂ ಆಡಳಿತ ನಡೆಸಿರಲಿಲ್ಲ, ಈಗ ಜಿಲ್ಲಾಪರಿಷತ್ತುಗಳಿಗೆ ಅಡ್ಮಿನಿಸ್ಟ್ರೇಟರ್‌ಗಳನ್ನು ನೇಮಕ ಮಾಡಿರುವುದನ್ನು ನೋಡಿದರೆ ಜನಗಳಲ್ಲಿ ಏನು ಭಾವನೆ ಇದೆ ಎಂದರೆ ಕಾಂಗ್ರೆಸ್ ಪಕ್ಷಕ್ಕೆ ಎಲೆಕ್ಷನ್‌ನಲ್ಲಿ ನಿಂತರೆ ಸೋತು ಹೋಗಿ ಬಿಡುತ್ತೇವೆಂದು ಭಯ ಇದೆ. ಅದಕ್ಕೆ ಚುನಾವಣೆಯನ್ನು ನಡೆಸುತ್ತಿಲ್ಲ ಎಂಬ ಭಾವನೆ ಇದೆ. ರಾಜ್ಯಪಾಲರ ಭಾಷಣದಲ್ಲೂ ಸ್ಪಷ್ಟವಾದ ತೀರ್ಮಾನವನ್ನು ಸರ್ಕಾರ ಪ್ರಕಟಮಾಡಿಲ್ಲ, ನಾವು ನಮ್ಮ ಚುನಾವಣಾ ಪ್ರನಾಳಿಕೆಯಲ್ಲಿ ರಾಜೀವ್ ಗಾಂಧಿಯವರು ಅನುಮೋದಿಸಿದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರುತ್ತೇವೆಂದು ಹೇಳಿಕೊಂಡಿದ್ದೇವೆ. ಆದರೆ ಆ ಸಂಸ್ಥೆಗಳನ್ನು ಅಧಿಕಾರದಲ್ಲಿ ಮುಂದುವರಿಯಲು ಮಾತ್ರ ಬಿಡುತ್ತಿಲ್ಲ. ಜನಗಣತಿಯ ಆಧಾರದ ಮೇಲೆ ಚುನಾವಣೆಗಳನ್ನು ನಡೆಸುವುದಾದರೆ ಪಾರ್ಲಿಮೆಂಟ್ ಅಥವಾ ಅಸೆಂಬ್ಲಿ ಚುನಾವಣೆಗಳನ್ನು ನಿಲ್ಲಿಸಬೇಕಾಗುತ್ತದೆ. ಆದರೆ ವಾಸ್ತವದಲ್ಲಿ ಈ ಚುನಾವಣೆಗಳೆಲ್ಲವೂ ಎಂದಿನಂತೆ ನಡೆಯುತ್ತಲೇ ಇವೆ.

ಹಾಗೆ ಇನ್ನೊಂದು ದೊಡ್ಡ ಗೊಂದಲ ರಾಜ್ಯದಲ್ಲಿ ಈಗ ನಡೆದಿದೆ. ಅದು ಗ್ರಾನೈಟ್ ಗಣಿ ವ್ಯವಹಾರಕ್ಕೆ ಸಂಬಂಧಪಟ್ಟದ್ದು. ಮೂರು ಮತ್ತು ಮೂರು(ಎ) ರೂಲ್‌ಗಳನ್ನು ಬದಲಾವಣೆ ಮಾಡುತ್ತೇವೆಂದು ಹೇಳಿ, ರಾತ್ರೋರಾತ್ರಿ ನೂರಾರು ಜನಕ್ಕೆ ಗ್ರಾನೈಟ್ ಲೈಸನ್ಸ್‌ಗಳನ್ನು ಕೊಟ್ಟಿದ್ದೀರಿ. ಅದರಲ್ಲಿ ಒಂದೇ ಕುಟುಂಬಕ್ಕೆ

ಸೇರಿದ ಎಷ್ಟು ಜನಗಳ ಹೆಸರಿನಲ್ಲಿ ಇದೆ . ಎಷ್ಟು ನಿಜವಾದ ಉದ್ದಿಮೆದಾರರಿಂದ ಬಂದವು ಎಂಬ ಬಗ್ಗೆ ವಿರೋಧ ಪಕ್ಷದವರು ಸಹ ಸರ್ಕಾರವನ್ನು ಗ್ರಿಲ್ ಮಾಡುತ್ತಲೇ ಬಂದಿದ್ದಾರೆ. ನೀವು ಸರಿಯಾದ ಚಿತ್ರವನ್ನು ಸದನದ ಮುಂದೆ ಮಂಡಿಸಬಹುದಾಗಿತ್ತು ಅದರಲ್ಲಿ ಎಷ್ಟು ಅರ್ಜಿಗಳು ಬಂದಿದ್ದವು ಸರ್ಕಾರ ಎಷ್ಟನ್ನು ಅಂಗೀಕರಿಸಿತು. ಎಷ್ಟನ್ನು ರಿಜೆಕ್ಟ್ ಮಾಡಿತ್ತು. ಅದಕ್ಕೆ ಕಾರಣಗಳು ಏನಿತ್ತು ಎಂಬುದನ್ನು ಸದನಕ್ಕೆ ಒದಗಿಸಬಹುದಾಗಿತ್ತು.

ಅನಂತರ ಕ್ಯಾಪಿಟೇಶನ್ ಶುಲ್ಕ ಅಬಾಲಿಷ್ ಮಾಡುತ್ತೇವೆಂದು ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷವಂತೂ ಹೇಳಿಕೊಂಡಿತ್ತು. ಆದರೆ ಇವತ್ತಿನವರೆಗೂ ಅದರ ಬಗ್ಗೆ ಒಂದು ಚೂರು ಕೆಲಸ ನಮಗೆ ಕಾಣುತ್ತಿಲ್ಲ. ಹಿಂದಿನ ಸರ್ಕಾರಗಳು ಮುಂದಿಡುತ್ತಿದ್ದ ವಾದವನ್ನೇ ಈ ಸರ್ಕಾರ ಮುಂದುವರೆಸಿಕೊಂಡು ಬಂದಿದೆ.

ಶಿಕ್ಷಣ ನೀತಿಯ ಬಗ್ಗೆ ಈ ಸರ್ಕಾರ ಹೊಸದೇನನ್ನೂ ರಾಜ್ಯಪಾಲರ ಬಾಯಿಂದ ಹೇಳಿಸಲಿಲ್ಲ. ಹೊಸ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಉತ್ಸುಕತೆಯಿಂದ ತೋರದಿದ್ದರೂ ಇರುವ ಕಾಲೇಜುಗಳಲ್ಲಿ ಇನ್‌ಫ್ರಾಸ್ಟ್ರಚ್ಚರ್ ನಿರ್ಮಾಣವಾಗಿಯೇ ಎಂಬುದನ್ನು ಖಾತರಿ ಮಾಡಿಕೊಳ್ಳಬೇಕಾದದ್ದು ಅದರ ಜವಾಬ್ದಾರಿ. ಇನ್ನು ಖಾಸಗಿ ಕಾಲೇಜುಗಳು, ವಿದ್ಯಾಕಾಂಕ್ಷಿಗಳಾದ ಬಡವರಿಂದಲೂ ಸಹ ಕ್ಯಾಪಿಟೇಶನ್ ಶುಲ್ಕವನ್ನು ವಸೂಲು ಮಾಡುವುದು ನಡೆದಿದೆ. ಒಬ್ಬ ವಿದ್ಯಾರ್ಥಿಗೆ ತಲಾ 1.5 ಲಕ್ಷ ರೂಪಾಯಿಯನ್ನು ವಿಧಿಸಿದರೂ ಕೋಟ್ಯಾಂತರ ರೂಪಾಯಿಗಳ ಸಂಪಾದನೆ ಆ ಕಾಲೇಜುಗಳಿಗೆ ಆಗುತ್ತಿದೆ. ಇದರ ಬಗ್ಗೆ ಅವರನ್ನು ಹೇಳುವವರು ಕೇಳುವವರು ಇಲ್ಲವಾಗಿದೆ. ಈ ವಿಷಯದಲ್ಲೂ ಸಹ ಈ ಸರ್ಕಾರದ ನೀತಿ ನಿಖರವಾಗಿ ಪ್ರಕಟವಾಗಬೇಕಾಗಿತ್ತು.

ಅಂತಹ ಕಾಲೇಜುಗಳಲ್ಲಿ ಒಂದು ಸೀಟಿಗೆ ಒಂದು ಲಕ್ಷ, ಒಂದೂವರೆ ಲಕ್ಷ, ಎರಡೂವರೆ ಲಕ್ಷ ರೂಪಾಯಿಗಳಂತೆ ಕ್ಯಾಪಿಟೇಶನ್ ಶುಲ್ಕವನ್ನು ವಸೂಲು ಮಾಡುತ್ತಿದ್ದಾರೆ. ಹಾಗಿದ್ದರೆ, ಇಂತಹ ಕಾಲೇಜುಗಳನ್ನು ನಾವು ಏತಕ್ಕೆ ಸ್ಥಾಪಿಸಬೇಕಾಗಿತ್ತು? ನಾನು ಮುಖ್ಯಮಂತ್ರಿಯಾಗಿದ್ದಾಗ ಹಾಸನ ಜಿಲ್ಲೆಯಿಂದ ಕೆಲವು ಜನರು ನನ್ನ ಹತ್ತಿರ ಬಂದು ನಾವು ಶ್ರೀ ನಿಜಲಿಂಗಪ್ಪನವರ ಹೆಸರಿನಲ್ಲಿ ಒಂದು ಡೆಂಟಲ್ ಕಾಲೇಜ್ ಅನ್ನು ಸ್ಥಾಪಿಸುತ್ತಿದ್ದೇವೆ, ಅದಕ್ಕೋಸ್ಕರ, ಡೆಂಟಲ್ ಕಾಲೇಜನ್ನು ಸ್ಥಾಪಿಸುವುದಕ್ಕೆ ತಾವು ಸರ್ಕಾರದಿಂದ ಅನುಮತಿ ಕೊಡಬೇಕು ಎಂದು ಕೇಳಿದರು. ಅದಕ್ಕೆ ನಾನು ನಾವು ಇರುವ ತನಕ ಯಾವುದೇ ಡೆಂಟಲ್ ಕಾಲೇಜ್ ಆಗಲಿ, ಇಂಜಿನಿಯರಿಂಗ್ ಕಾಲೇಜ್ ಆಗಲಿ ಪ್ರಾರಂಭಿಸುವುದಕ್ಕೆ ಅನುಮತಿ ಕೊಡುವ ಹಾಗಿಲ್ಲ, ಕಾರಣ ಈಗಾಗಲೇ ಮಂಜೂರಾಗಿರುವ ಕಾಲೇಜುಗಳು ಕ್ಯಾಪಿಟೇಶನ್ ಬೇಸಿಸ್ ಮೇಲೆ ನಡೆಯುತ್ತಿರುವುದರಿಂದ, ನಿಮ್ಮ ಕಾಲೇಜನ್ನು ಮಂಜೂರು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದೆ. ನಂತರ ಅವರು ಹೈಕೋರ್ಟಿಗೆ ಹೋದರು. ಅವರ ಹೆಸರನ್ನು ಇಲ್ಲಿ ಹೇಳುವ ಹಾಗಿಲ್ಲ. ಅವರು ಕೆಲವು ಉದ್ದೇಶಗಳಿಗಾಗಿ ಹೈಕೋರ್ಟಿಗೆ ಹೋಗಿದ್ದರು. ಹೈಕೋರ್ಟ್ 'ಇವರ ಅಪ್ಲಿಕೇಶನ್ ಅನ್ನು ಕನ್ಸಿಡರ್ ಮಾಡಿ' ಎಂದು ಹೇಳಿತು. ಆಗ ಅವರ ಅಪ್ಲಿಕೇಶನ್ ಅನ್ನು ಕನ್ಸಿಡರ್ ಮಾಡಿದೆವು. ಒಂದು ವಿಚಾರ ಹೇಳಬೇಕೆಂದರೆ, ಇಡೀ ಹಿಂದೂಸ್ತಾನದಲ್ಲಿ ನಾವು ಮೆಡಿಕಲ್ ಕಾಲೇಜ್, ಇಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪನೆ ಮಾಡಿ ಕ್ಯಾಪಿಟೇಶನ್ ಶುಲ್ಕವನ್ನು ತೆಗೆದುಕೊಳ್ಳುವುದು ನಮಗೆ ಬೇಕಾಗಿಲ್ಲ.

ಅದರ ಅವಶ್ಯಕತೆಯೂ ಇಲ್ಲ. ಈಗಾಗಲೇ ಸುಮಾರು ಆರು ಡೆಂಟಲ್ ಕಾಲೇಜುಗಳನ್ನು ಡಿಸ್ಪೆನ್ಸರಿ ಕಾಲೇಜುಗಳನ್ನು ಕೊಟ್ಟಿದ್ದೇವೆ. ನನ್ನ ಸಲಹೆ ಏನೆಂದರೆ ಕೂಡಲೇ ಅವುಗಳನ್ನು ಕ್ಯಾನ್ಸಲ್ ಮಾಡಿ. ನಿಮಗೆ ಒಳ್ಳೆಯ ಹೆಸರು ಬರುತ್ತದೆ. ನೀವುಗಳು, ಕ್ಯಾಪಿಟೇಶನ್ ಬೇಸಿಸ್ ಮೇಲೆ ನಡೆಯತಕ್ಕಂಥ ಯಾವುದೇ ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜುಗಳ ವಿಷಯದಲ್ಲಿ ಕೈಹಾಕಬೇಡಿ. ಮತ್ತು ಕಾಲೇಜುಗಳಲ್ಲಿ ಮುಂದೆ ಯಾವುದೇ ರೀತಿಯ ಕ್ಯಾಪಿಟೇಶನ್ ಶುಲ್ಕ ಪಡೆಯದೆ ಸೀಟನ್ನು ಕೊಡುವ ಬಗ್ಗೆ ಒಂದು ನಿರ್ಣಯ ಮಾಡಿ. ಅದು ಜನರಿಗೆ ಗೊತ್ತಾಗಲಿ. ಮೆಡಿಕಲ್ ಕಾಲೇಜು, ಡೆಂಟಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ತೆರೆಯುವ ಅನುಮತಿ ಕೊಟ್ಟು ತಪ್ಪು ಮಾಡಿದ್ದೇವೆ. ಆ ತಪ್ಪನ್ನು ನಾವು ಜನತೆಯ ಮುಂದೆ ಒಪ್ಪಿಕೊಳ್ಳಬೇಕು. ಮಹಾತ್ಮಗಾಂಧೀಜಿಯವರೇ ತಮ್ಮ ತಪ್ಪನ್ನು ಒಮ್ಮೆ ಒಪ್ಪಿಕೊಂಡಿದ್ದಾರೆ. ಮಹಾತ್ಮಾ ಗಾಂಧೀಜಿಯವರು ಇಟ್ಟಂಥ ಹೆಜ್ಜೆ, ಹಾಕಿಕೊಟ್ಟಂಥ ಮಾರ್ಗದರ್ಶನದ ಪ್ರಕಾರ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾವು ತಪ್ಪು ಮಾಡಿದ್ದೇವೆಂದು ಜನತೆಯ ಮುಂದೆ ಹೇಳಬೇಕು. ಮತ್ತು ಇನ್ನು ಮುಂದೆ ತಪ್ಪು ಮಾಡುವುದಿಲ್ಲವೆಂದು, ತಪ್ಪು ಮಾಡಿದ್ದನ್ನು ತಿದ್ದುಕೊಂಡಂಥ ವಿಚಾರವನ್ನು ಹೇಳಬೇಕು. ಅದಕ್ಕೆ ಇವೊತ್ತು ಜನರು ಮನ್ನಣೆ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಬೆಲೆ ಏರಿಕೆ ಬಗ್ಗೆ ತಮಗೆ ಸ್ಪಷ್ಟವಾಗಿ ಹೇಳಬೇಕೆಂದರೆ, ಈ ವಿಚಾರ ಕೇಂದ್ರ ಸರ್ಕಾರಕ್ಕೆ ಸಂಬಂಧಪಡುತ್ತದೆಯೇ ವಿನಃ ರಾಜ್ಯಕ್ಕೆ ಸಂಬಂಧಪಡುವುದಿಲ್ಲ. ಏಕೆಂದರೆ, ರೂಪಾಯಿಯ ಮೌಲ್ಯ ಕಡಿಮೆಯಾಗುತ್ತಿದೆ, ಹಣದುಬ್ಬರ ಹೆಚ್ಚಾಗುತ್ತಿದೆ. ಇದಕ್ಕೆ ಕೇಂದ್ರ ಸರ್ಕಾರ ಜವಾಬ್ದಾರವೇ ಹೊರತು ರಾಜ್ಯ ಸರ್ಕಾರವಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

ಇಂದು ಬೆಲೆಗಳು ಏರುತ್ತಿವೆ. ಇದರ ಬಗ್ಗೆ ಕೇಂದ್ರ ಸರ್ಕಾರದವರು ಕಡಿಮೆ ಮಾಡಲು ಪ್ರಯತ್ನ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಅದು ಆಗಿಲ್ಲ. ಬೆಲೆ ಏರಿಕೆಯು ಮುಂದುವರೆಯುತ್ತಾ ಹೋಗುತ್ತಿದೆ. ಇದನ್ನು ಕಡಿಮೆ ಮಾಡಲು ನಾವು ವಿಫಲರಾಗಿದ್ದೇವೆ. ಕೇಂದ್ರ ಸರ್ಕಾರವು ಬೆಲೆಯನ್ನು ಕಡಿಮೆ ಮಾಡುವಲ್ಲಿ ವಿಫಲವಾಗಿದೆ ಎಂದರೆ ತಪ್ಪಾಗಲ್ಲ. ಅಲ್ಲಿಂದ ಕೊನೆಗೆ ಕಾವೇರಿಯ ಬಗ್ಗೆ ಬರುತ್ತಿದ್ದೇನೆ. ಕಾವೇರಿಯ ಬಗ್ಗೆ ನಾನು ಇಲ್ಲಿ ಮಾತನಾಡಬೇಕೆಂದು ಹೋದಸಲ ಬಹಳ ಪ್ರಯತ್ನ ಮಾಡಿದೆ. ಆದರೆ ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಕಾವೇರಿಯ ಬಗ್ಗೆ ಪಾರ್ಟಿಗೆ ಒಬ್ಬೊಬ್ಬರು ಮಾತನಾಡಬೇಕು ಎಂದು ನಿರ್ಣಯವಾಯಿತು ಎಂದು ಹೇಳಿದರು. ಆದುದರಿಂದ ನಾನು ಬರಲಿಲ್ಲ. ನಾನು ಬೆಂಗಳೂರಿನಲ್ಲಿ ಇದ್ದರೂ ಕೂಡ ಬರಲಿಲ್ಲ. ಏಕೆಂದರೆ ನನಗೆ ಮಾತನಾಡಲು ಅವಕಾಶವಿಲ್ಲದಿದ್ದರೆ ಏಕೆ ಬರಬೇಕು ಎಂದು ನಾನು ಬರಲಿಲ್ಲ. ಅದು ಆ ವೇಳೆಗೆ ಆಯಿತು. ಕಾವೇರಿಯಂಥ ಮುಖ್ಯವಾದ ಪ್ರಶ್ನೆಯ ಬಗ್ಗೆ ಪಾರ್ಟಿಗೆ ಒಬ್ಬರು ಮಾತನಾಡಬೇಕು ಎನ್ನುವುದು ತಪ್ಪಾಗುತ್ತದೆಂದು ನನಗನ್ನಿಸುತ್ತದೆ. ಯಾರ‍್ಯಾರು ಮಾತನಾಡುತ್ತಾರೋ ಅವರೆಲ್ಲರಿಗೂ ಅವಕಾಶವಿರಬೇಕು. ಏಕೆಂದರೆ ಇಲ್ಲಿ ಒಂದು ಫೋರಂ ಇದೆ, ಇದನ್ನು ಬಿಟ್ಟರೆ ಹೊರಗಡೆ ಮಾತನಾಡಲಾಗುವುದಿಲ್ಲ. ಅನೇಕ ಜನ ಹೊರಗಡೆ ಮಾತನಾಡುತ್ತಾರೆ ಆದರೆ ಅದು ಪ್ರೆಸ್‌ನಲ್ಲಿ, ಪೇಪರ್‌ನಲ್ಲಿ ಬರುವುದಕ್ಕಾಗುವುದಿಲ್ಲ. ಆದುದರಿಂದ ಪಾರ್ಟಿಗೆ ಒಬ್ಬರು ಮಾತನಾಡಬೇಕು ಎನ್ನುವ ಪದ್ಧತಿಯನ್ನು ನಿಲ್ಲಿಸಬೇಕು.

ಈ ವಿಷಯವನ್ನು ನಾವು ಬಿಸ್‌ನೆಸ್ ಅಡ್ವೈಸರಿ ಕಮಿಟಿಯವರಿಗೆ ಅಪೀಲ್ ಮಾಡಿಕೊಳ್ಳುತ್ತಿದ್ದೇನೆ. ಕಾವೇರಿಯಂಥ ಮುಖ್ಯವಾದ ಇಷ್ಯೂ ಮೇಲೆ ಪಾರ್ಟಿಗೆ

ಒಬ್ಬರು ಮಾತನಾಡಬೇಕು ತಪ್ಪು. ನಿಮ್ಮ ಪಾರ್ಟಿಯಿಂದ ಮುಖ್ಯಮಂತ್ರಿಗಳು ಮಾತನಾಡುತ್ತಾರೆ, ನೀವು ಬಂದು ಅವರ ಭಾಷಣವನ್ನು ಕೇಳಬಹುದು, ನಿಮಗೆ ಮಾತನಾಡಲು ಅಧಿಕಾರವಿಲ್ಲವೆಂದರೆ ಹೇಗೆ? ನನಗೆ ಮಾತನಾಡಲು ಅವಕಾಶವಿಲ್ಲವೆಂದು ನಾನು ಏಕೆ ಇಲ್ಲಿ ಬರಬೇಕು. ಆದುದರಿಂದ ನಾನು ಬರಲಿಲ್ಲ, ಆಗ ನಾನು ಬೆಂಗಳೂರಿನಲ್ಲೇ ಇದ್ದೆ. ಮಾತನಾಡಲು ಅವಕಾಶವಿಲ್ಲದಿದ್ದರೆ ಏಕೆ ಬರಬೇಕು ಎಂದು ನಾನು ಬರಲಿಲ್ಲ. ಅಂದು ನಾನು ಬಂದು ಏನು ಹೇಳುತ್ತಿದ್ದೆನೊ ಅದನ್ನು ಇವತ್ತು ಹೇಳುವಂತಿಲ್ಲ. ಆದರೆ ಕಾವೇರಿಯ ಬಗ್ಗೆ ನನಗೆ ತಿಳಿದಿರತಕ್ಕ ಕೆಲವು ವಿಚಾರಗಳನ್ನು ಹೇಳುತ್ತಿದ್ದೇನೆ. ಪ್ರತಿ ವಿಷಯದಲ್ಲೂ ನಾವಾಗಲಿ, ಜನರಾಗಲಿ, ಕಾವೇರಿ ಬೇಸಿನ್‌ನಲ್ಲಿರತಕ್ಕ ಜನತೆಯಾಗಲಿ ಅವರು ನೋಡುವುದೇನೆಂದರೆ ಸರ್ಕಾರದ ಕಡೆ, ಅವರು ಸರ್ಕಾರದ ಕಡೆ ನೋಡುತ್ತಾರೆ. ಏಕೆಂದರೆ Government represents the entire population of the State....

ಅದರ ಸಲುವಾಗಿ ನಾವು ಅಂದರೆ ಸರ್ಕಾರವನ್ನು ಯಾರು ನಡೆಸುತ್ತಿದ್ದಾರೋ ಅವರು ಸಿಕ್ಕಾಪಟ್ಟೆ ಭರವಸೆಗಳನ್ನು ಕೊಡಬಾರದು. ಪ್ರಶ್ನೆ ಬಗೆಹರಿಯುತ್ತದೆ ಎಂಬ ಬಗ್ಗೆ ವಿಶ್ವಾಸವನ್ನು ನಾವು ಕೊಡಬಾರದು. ನಾವು ಪ್ರಯತ್ನ ಮಾಡುತ್ತೇವೆಂದು ಹೇಳಬೇಕೆ ಹೊರತು ಅದಕ್ಕಿಂತ ಹೆಚ್ಚು ಹೇಳಲು ಆಗುವುದಿಲ್ಲ. ಏಕೆಂದರೆ ಇದು ನಮ್ಮ ಕೈಯಲ್ಲಿರತಕ್ಕ ವಿಚಾರವಲ್ಲ. ಅದರ ಸಲುವಾಗಿ ಸರ್ಕಾರ ಹೆಚ್ಚು ಭರವಸೆಯನ್ನು ಕೊಡಬಾರದು ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಬೇಕು. ಸುದೈವದಿಂದ ಪ್ರಧಾನ ಮಂತ್ರಿಗಳು ಈ ವಿಷಯದಲ್ಲಿ ಮುಂದಾಗಿದ್ದಾರೆ, ಅವರು ಈ ಇಶ್ಯೂವನ್ನು ತೆಗೆದುಕೊಂಡಿದ್ದಾರೆ ಇವತ್ತು ನಮ್ಮ ಪ್ರಧಾನ ಮಂತ್ರಿಗಳ ಬಗ್ಗೆ ಪೂರ್ತಿ ವಿಶ್ವಾಸವಿದೆ, ಪ್ರಧಾನ ಮಂತ್ರಿಗಳು ಹೇಳಿದಂತೆ ನಾವೂ ಕೇಳಬೇಕು, ತಮಿಳುನಾಡಿನವರೂ ಕೇಳಬೇಕು, ಸಂಸತ್ತಿನ ಸದಸ್ಯರೆಲ್ಲರೂ ಕೇಳಬೇಕೆಂದು ಹೇಳಬೇಕೆ ಹೊರತು ನೀವು ನಿಶ್ಚಿಂತೆಯಾಗಿರಿ ನಾವೆಲ್ಲವನ್ನು ಸರಿಮಾಡುತ್ತೇವೆಂದು ಹೇಳುವುದಕ್ಕೆ ನಾವು ಹೋಗಬಾರದೆಂದು ನನಗನ್ನಿಸುತ್ತದೆ.

ಮೊನ್ನೆ ದೆಹಲಿಯಲ್ಲಿ ಮಾತುಕತೆ ಆಯಿತು, ಮಾತುಕತೆಯಾದಾಗ ನಾನು ಮೊದಲು ಅಲ್ಲಿ ನೋಡಿದೆ, ಟಾಕ್ಸ್ ಹ್ಯಾವ್ ಫೇಲ್ಡ್ ಅಂತ, ಯಾರೋ ಒಂದಿಬ್ಬರು ನನ್ನನ್ನು ಇದರ ಬಗ್ಗೆ ರಿಯಾಕ್ಷನ್ ಕೇಳಿದರು ಅದಕ್ಕೆ ನಾನು talks have not failed... ಅಂತ ಹೇಳಿದೆ. ಏಕೆಂದರೆ ಈ ಪ್ರಶ್ನೆ ಮತ್ತು ಈ ಡಿಸ್‌ಪ್ಯೂಟ್ ೧೦೦ ವರ್ಷ ಹಿಂದಿನದು. ಅದಕ್ಕೋಸ್ಕರ ೧೦೦ ವರ್ಷದ ಹಳೆಯ ಡಿಸ್‌ಪ್ಯೂಟನ್ನು ಒಂದೇ ಮೀಟಿಂಗ್‌ನಲ್ಲಿ ಬಗೆಹರಿಸುವುದಕ್ಕೆ ಆಗುವುದಿಲ್ಲ. ಅದರ ಸಲುವಾಗಿ ಯಾರಾದರೂ ಟಾಕ್ಸ್ ಹ್ಯಾವ್ ಫೈಲ್ಡ್ ಎಂದು ಹೇಳಿದರೆ ಅದನ್ನು ನಾನು ಒಪ್ಪುವುದಕ್ಕೆ ಆಗುವುದಿಲ್ಲ. ಆದರೆ ಪ್ರಧಾನಮಂತ್ರಿಗಳು ಹೇಳಿದ ಹಾಗೆ talks have come to deadlock I cannot do anything ಅದು ಬೇರೆ ಮಾತು,

ಎಲ್ಲಿಯವರೆಗೆ ಪ್ರಧಾನ ಮಂತ್ರಿಗಳು ಈ ಬಗ್ಗೆ ಹೇಳುವುದಿಲ್ಲ ಅಲ್ಲಿಯವರೆಗೆ ನಾವು ಫೇಲ್ ಆದೆವು ಎಂದು ಹೇಳಬಾರದು ಎಂದು ನನಗನ್ನಿಸುತ್ತಿದೆ. ಅದರ ಸಲುವಾಗಿ ಪೇಪರ್‌ನಲ್ಲಿ ಬಂದಿದೆ ಟಾಕ್ಸ್ ಹ್ಯಾವ್ ಫೇಲ್ಡ್‌ಅಂತ. ಅದು ನಿಜವಾದ ಚಿತ್ರವೆಂದು ನನಗನ್ನಿಸುವುದಿಲ್ಲ. ಆದರೆ ಇಲ್ಲಿ ಹೇಳಬೇಕಾದದ್ದು ಕರ್ನಾಟಕದ ಹಿತದಲ್ಲಿ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಪ್ರಧಾನ ಮಂತ್ರಿಗಳು ಕರೆದಾಗ ನಾವು ದೆಹಲಿಗೆ ಹೋಗಿದ್ದೆವು. ಪ್ರಧಾನಮಂತ್ರಿಗಳು ಡಿಸ್‌ಕಷನ್‌ಗೆ ಈ ವಿಷಯಗಳನ್ನು

ತೆಗೆದುಕೊಂಡರು. ಅವರು ಹೇಳಿದರು ನೀವು ಹೇಳಿದ ಮೇಲೆ ಒಂದು ಒಳ್ಳೆಯ ಪ್ರಯತ್ನ ಮಾಡುತ್ತೇನೆಂದು. ಅಲ್ಲಿಯವರೆಗೆ ಟಾಕ್ಸ್ ಹ್ಯಾವ್ ಫೇಲ್ಡ್ ಎಂದು ಹೇಳುವ ಹಾಗೆ ಇಲ್ಲ. ಅಲ್ಲಿಯವರೆಗೆ ನಾವು ಟಾಕ್ಸ್ ಹ್ಯಾವ್ ಫೇಲ್ಡ್ ಎಂದು ತಿಳಿದುಕೊಳ್ಳಬಾರದು. ಏಕೆಂದರೆ ಪ್ರಧಾನಮಂತ್ರಿಗಳು ಕರೆದುದಕ್ಕೆ ನಾವು ಹೋಗಿದ್ದೆವು. ಇದರಲ್ಲಿ ನನ್ನ ಪ್ರಯತ್ನ ಮಾಡಿದ್ದೇನೆ.

ಇಂದು ಇದರ ಬಗ್ಗೆ ಪ್ರಧಾನ ಮಂತ್ರಿಯವರು ಹೇಳಬೇಕೇ ಹೊರತು ತಮಿಳುನಾಡು ಮುಖ್ಯಮಂತ್ರಿಗಳಾಗಲಿ ಹೆಗ್ಗಡೆ ಮುಖ್ಯಮಂತ್ರಿಗಳಾಗಲಿ ಅಥವಾ ಇನ್ನಿತರ ಯಾರೇ ಹೇಳಿದರೂ ಅದರ ಮೇಲೆ ನಾವು ವಿಶ್ವಾಸ ಇಡಬಾರದೆಂದು ನನಗನ್ನಿಸುತ್ತದೆ. ಈಗ ನಾವು ನೆಗೋಷಿಯೇಷನ್ಸ್ ಟೇಬಲ್‌ಗೆ ಹೋಗಿದ್ದೆವು. ಕರ್ನಾಟಕ ಮತ್ತು ತಮಿಳುನಾಡು ಈ ಎರಡು ರಾಜ್ಯಗಳಲ್ಲಿ ಕಾವೇರಿ ನೀರಿನ ಹಂಚಿಕೆ ಬಗ್ಗೆ ವಿವಾದ ಉಂಟಾದುದರಿಂದ ಅದರ ಬಗ್ಗೆ ಚರ್ಚೆಮಾಡಬೇಕೆಂದು ನಾವು ಹೋಗಿದ್ದೆವು. ಆದ್ದರಿಂದ ನಾವು ಏಕೆ ಹೋಗಿದ್ದೆವೆಂದು ನಾನು ವಿರೋಧಪಕ್ಷದ ನಾಯಕರಿಗೆ ಹೇಳುತ್ತಿದ್ದೇನೆ. ನಾವು ನೆಗೋಷಿಯೇಷನ್ ಟೇಬಲ್‌ಗೆ ಹೋಗಿದ್ದು with weakness ನಾವು ಹೋಗಿದ್ದೆವು. ಏಕೆಂದರೆ ಟ್ರಿಬ್ಯುನಲ್ ನಮ್ಮ ವಿರುದ್ಧ ಜಡ್ಜ್‌ಮೆಂಟ್ ಕೊಟ್ಟಿದೆ. ಮತ್ತೆ ಈ ಸದನದಲ್ಲಿ ನಿರ್ಣಯ ಪಾಸ್ ಮಾಡಿದರೂ ಕೂಡ ಕೇಂದ್ರಸರ್ಕಾರದವರು ಗೆಜೆಟ್ ನೋಟಿಫಿಕೇಶನ್ ಮಾಡಿದ್ದಾರೆ. ಅಂದರೆ ಆ ಮೂರು ರೀತಿಯಿಂದಲೂ ನಾವು ಫೇಲ್ಯೂರ್ ಆಗಿದ್ದೇವೆ. ಕೇಂದ್ರ ಸರ್ಕಾರಕ್ಕೆ ನಾವು ಇವತ್ತು ಏಕೆ ಹೋಗಿದ್ದೇವೆ ಎಂಬುದು ಗೊತ್ತಿದೆ.. we went to the negotiating table with weak position... ಎಂಬುದನ್ನು ನಾವು ಮರೆಯಬಾರದು ಮತ್ತು ತಮಿಳುನಾಡು ಪೊಸಿಷನ್ ಏನು ಇದೆ, Tamil nadu has gone to negotiating table with position of strength. ಏಕೆಂದರೆ ಟ್ರಿಬ್ಯುನಲ್ ಆರ್ಡರ್ ಹೋಗಿದೆ. ಅಲ್ಲಿಂದ ಸುಪ್ರೀಂ ಕೋರ್ಟ್ ಟ್ರಿಬ್ಯುನಲ್ ಡಿಸಿಷನ್ ಕೊಟ್ಟಿದೆ. ಮತ್ತು ಗೌರ್ನಮೆಂಟ್ ಆಫ್ ಇಂಡಿಯಾ ಕೂಡ ಟ್ರಿಬ್ಯುನಲ್ ಇಂಟೀರಿಯಂ ಡಿಸಿಷನ್ ಗೆಜೆಟ್ ಮಾಡಿದ್ದಾರೆ. ಅದರ ಸಲುವಾಗಿ ಈ ಮೂರು ಸಹ ನಮ್ಮ ವಿರುದ್ಧವಾಗಿಯೇ ಇವೆ. they have gone to the negotiating table with position of strength and we have gone to the negotiating table with position of weakness. ಇದನ್ನು ನಾವು ಮರೆಯಬಾರದೆಂದು ವಿರೋಧಪಕ್ಷದ ನಾಯಕರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈಗ ತಮಿಳುನಾಡು ಚೀಫ್ ಮಿನಿಸ್ಟರ್‌ರವರು ನಮಗೆ ಹೆದರಿಲ್ಲ, ಮತ್ತು ಕೇಂದ್ರ ಸರ್ಕಾರಕ್ಕೂ ಹೆದರಿಲ್ಲ, ಅವರು ಹೆದರುವುದು ಡಿಎಂಕೆ ಒಬ್ಬರಿಗೆ ಮಾತ್ರ. ಅದನ್ನು ಸ್ಪಷ್ಟವಾಗಿ ಹೇಳುತ್ತೇನೆ. ನೀವು ತಿಳಿದುಕೊಂಡಿರಬಹುದು ಅವರು ಡಿಎಂಕೆ ಯಿಂದ ಅಧಿಕಾರವನ್ನು ಕಸಿದುಕೊಂಡಿದ್ದಾರೆಂದು. ಆದರೆ ಇವತ್ತು ಎದುರಿಗೆ ನಾವು ಜಾರಿ ಬಿದ್ದರೆ ಡಿಎಂಕೆ ಮತ್ತೆ ಎಲ್ಲಿ ಅಧಿಕಾರಕ್ಕೆ ಬರುತ್ತದೆಯೋ ಎನ್ನುವಂತದ್ದು ತಮಿಳುನಾಡು ಮುಖ್ಯಮಂತ್ರಿಗಳಿಗೆ ಹೆದರಿಕೆಯಿದೆ. ನಮಗೆ ಹೆದರುವುದು ಅಥವಾ ಕೇಂದ್ರಸರ್ಕಾರಕ್ಕೆ ಹೆದರುವುದು ಎನ್ನುವಂತಹ ಮಾತನ್ನು ಆಡುವುದರಲ್ಲಿ ಏನೂ ಅರ್ಥವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ತಮಿಳ್ನಾಡಿನ ಮುಖ್ಯಮಂತ್ರಿಗಳು ಮತ್ತು ತಮಿಳ್ನಾಡು ಸರ್ಕಾರ ನಮಗೆ ಬೇಕೇ ಹೊರತು ತಮಿಳ್ನಾಡು ಮುಖ್ಯಮಂತ್ರಿಗಳಿಗೆ, ತಮಿಳ್ನಾಡು ಸರ್ಕಾರಕ್ಕೆ

ಕೇಂದ್ರ ಸರ್ಕಾರದ ಸಹಾಯ ಬೇಕಾಗಿಲ್ಲ. ಇದನ್ನು ನಾವು ತಿಳಿದುಕೊಳ್ಳಬೇಕು. ಇದನ್ನು ನಾವು ತಿಳಿದುಕೊಳ್ಳದಿದ್ದರೆ ಕಣ್ಣುಮುಚ್ಚಿಕೊಂಡು ಹಾಲು ಕುಡಿದಂತೆ ನಮ್ಮ ಕಥೆಯಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ತಮಿಳ್ನಾಡು ಮುಖ್ಯಮಂತ್ರಿಗಳು ಡಿ.ಎಂ.ಕೆ. ಯವರಿಂದ ಹೆದರುತ್ತಿದ್ದಾರೆಯೇ ಹೊರತು ಬೇರೆಯವರಿಂದ ಹೆದರುತ್ತಿಲ್ಲ. ಎಂಬುದನ್ನು ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ನಮ್ಮ ಕರ್ನಾಟಕ ಸರ್ಕಾರ ಕಾವೇರಿ ವಿವಾದದ ಬಗ್ಗೆ ಟ್ರಿಬ್ಯುನಲ್ ಮುಂದೆ ಸರಿಯಾಗಿ ರೆಪ್ರೆಸೆಂಟ್ ಮಾಡಿಲ್ಲ ಎನ್ನತಕ್ಕ ವಿಚಾರ ಇಲ್ಲಿ ಬರುತ್ತದೆ. ನಮ್ಮ ಅಧಿಕಾರಿಗಳು ಯಾರಿದ್ದಾರೆ. ವಕೀಲರು ಯಾರಿದ್ದಾರೆ. ಅವರು ನಮ್ಮ ಸರ್ಕಾರದ ಧೋರಣೆ ಏನಿದೆ ಎಂಬುದನ್ನು ಯಾರಿದ್ದಾರೆ, ವಕೀಲರು ಯಾರಿದ್ದಾರೆ ಅವರು ನಮ್ಮ ಸರ್ಕಾರದ ಧೋರಣೆ ಏನಿದೆ ಎಂಬುದನ್ನು ಟ್ರಿಬ್ಯುನಲ್ ಮುಂದೆ ಸರಿಯಾಗಿ ಹೇಳಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಕೇಸು ಸರಿಯಾಗಿ ರೆಪ್ರೆಸೆಂಟ್ ಆಗದೇ ಹೋಗಿದ್ದರಿಂದ ನಾವು ನಮ್ಮ ಕೇಸನ್ನು ಕಳೆದುಕೊಂಡಿದ್ದೇನೆ. ನಮ್ಮದು ಫಾಲ್ಟ್ ಇದೆ ಎಂದು ಹೇಳಬಯಸುತ್ತೇನೆ. ಇದು ನನ್ನ ವೈಯುಕ್ತಿಕ ವಿಚಾರ. ಇಲ್ಲಿಗೆ ಟ್ರಿಬ್ಯುನಲ್ ಮೆಂಬರ್ಸ್ ಬಂದಾಗ ನಮ್ಮಲ್ಲಿ ಡಿಸ್ಕ್ರಿಪ್ಷನ್ ಏನಿತ್ತು. ಮತ್ತು ತಮಿಳ್ನಾಡಿನಲ್ಲಿ ಏನು ಡಿಸ್ಕ್ರಿಪ್ಷನ್ ಇತ್ತು, ಅದು ಬಹಳ ಅಂತರ ಇದೆ. ತಮಿಳ್ನಾಡಿನವರು ಒಳ್ಳೆಯ ಡಿಸ್ಕ್ರಿಪ್ಷನ್‌ನಲ್ಲಿ ಬಂದಿದ್ದನ್ನು ನಾವು ಮರೆಯಬಾರದು. ಪೇಪರ್ ನಲ್ಲಿ ಬಂದಿದ್ದುದನ್ನು ನಾನು ಹೇಳುತ್ತಿದ್ದೇನೆ. ಟ್ರಿಬ್ಯುನಲ್ ಮೀಂಟಿಗ್‌ಗೆ ನಮ್ಮ ಅಡ್ವೋಕೇಟ್ ಜನರಲ್‌ರವರು ಹೋಗಲಿಲ್ಲ. ಟ್ರಿಬ್ಯುನಲ್ ಮುಂದೆ ಸರಿಯಾಗಿ ರೆಪ್ರೆಸೆಂಟ್ ಮಾಡತಕ್ಕಂಥ ನಮ್ಮ ವಕೀಲರೇ ಹೋಗಲಿಲ್ಲ. ಎಂದರೆ ಇನ್ನು ಯಾವ ರೀತಿ ಇದರಲ್ಲಿ ನಮಗೆ ಅನುಕೂಲವಾಗುತ್ತದೆಂದು ನಾವು ತಿಳಿದುಕೊಳ್ಳಬೇಕು. ಟ್ರಿಬ್ಯುನಲ್ ನವರು ಇಲ್ಲಿಗೆ ಪ್ರವಾಸ ಬಂದಾಗ ಅವರಿಗೆ ನಾವು ಏನು ಟ್ರೀಟ್‌ಮೆಂಟ್‌ನ್ನು ಕೊಟ್ಟಿದ್ದೇವೆ ಅದನ್ನು ನೋಡಿದರೆ ತಮಿಳ್ನಾಡಿನವರು ಕೊಟ್ಟಂಥ ಟ್ರೀಟ್‌ಮೆಂಟ್‌ಗಿಂತ ಒಳ್ಳೆಯ ಟ್ರೀಟ್‌ಮೆಂಟ್‌ನ್ನು ಕೊಡುವುದಕ್ಕೆ ನಮಗೆ ಆಗಿಲ್ಲ.ತಮಿಳ್ನಾಡಿನವರು ಒಳ್ಳೆಯ ರೀತಿಯಲ್ಲಿ ಟ್ರೀಟ್‌ಮೆಂಟ್ ಕೊಟ್ಟಿದ್ದಾರೆ ಎಂಬುದನ್ನು ನಾನು ಪೇಪರ್‌ನಲ್ಲಿ ಓದಿದ್ದೇನೆ. ತಮಿಳ್ನಾಡಿನವರು ಫೋಟೋ ಹಿಡಿದುಕೊಂಡು ಟ್ರಿಬ್ಯುನಲ್ ಮುಂದೆ ಹೋಗಿ ನಿಂತು ಕರ್ನಾಟಕ ರಾಜ್ಯದವರು ನಮಗೆ ಕುಡಿಯುವುದಕ್ಕೂ ನೀರನ್ನು ಕೊಡುತ್ತಿಲ್ಲ. ನಮಗೆ ಈಗ ಈ ಪರಿಸ್ಥಿತಿ ಬಂದಿದೆ ಎಂದು ಹೇಳಿದರು, ಓಹೋ, ಹೀಗೆ ಮಾಡಿದ್ದಾರೆಯೇ ಎಂದು ಅವರು ತಿಳಿದುಕೊಂಡರು. ಏಕೆಂದರೆ ಅವರೂ ಕೂಡ ಹ್ಯೂಮನ್ ಬೀಯಿಂಗ್ಸ್ ಟ್ರಿಬ್ಯುನಲ್ ಸದಸ್ಯರೇ ಇರಬಹುದು. ಅಥವಾ ಜ್ಯುಡಿಷಿಯಲ್ ಸದಸ್ಯರೇ ಇರಬಹುದು. ಅವರೂ ಕೂಡ ನಮ್ಮಂತೆಯೇ ಮನುಷ್ಯರು ನಮಗೆ ಕುಡಿಯುವುದಕ್ಕೆ ನೀರಿಲ್ಲ.ನಮಗೆ ನೀರನ್ನು ಬಿಡದೇ ಕರ್ನಾಟಕದವರು ಅನ್ಯಾಯ ಮಾಡುತ್ತಿದ್ದಾರೆಂದು ಅವರ ಮನಸ್ಸನ್ನು ಬದಲಾವಣೆ ಮಾಡುವುದಕ್ಕೆ ಖಾಲಿ ಕೊಡಗಳನ್ನು ಹೊತ್ತು ಕೊಂಡು ಹೋಗಿ ಅವರ ಮುಂದೆ ನಿಂತಿದ್ದರು. ಆದರೆ ನಮ್ಮ ವಕೀಲರು ಸರಿಯಾಗಿ ರೆಪ್ರೆಸೆಂಟ್ ಮಾಡದೇ ಹೋಗಿದ್ದರಿಂದ ನಮ್ಮ ಕೇಸನ್ನು ನಾವು ಕಳೆದುಕೊಂಡಿದ್ದೇವೆಂದು ನನಗೆ ಅನಿಸುತ್ತಿದೆ. ಇದನ್ನು ನಾನು ತಮ್ಮ ಮುಂದೆ ಹೇಳುತ್ತಿದ್ದೇನೆ. ಬಹುಶಃ ವಾಟರ್ ಟ್ರಿಬ್ಯುನಲ್ ನವರು ಒಂದು ಡಿಸಿಷನ್ ಕೊಟ್ಟಿದ್ದರು.

ಅನಂತರ ತಮಿಳ್ನಾಡಿನವರು ಇಟ್ಟಿರತಕ್ಕ ಕ್ರಾಪ್ಸ್ ಏನಿದೆ ಅದು ಒಣಗಿ ಹೋಗುತ್ತಿರುವುದರಿಂದ ಅವರಿಗೆ 10 ಟಿ.ಎಂ.ಸಿ.ನೀರನ್ನು ಬಿಡುವಂತೆ ಕೇಳಿದ್ದಾರೆಂದು ನಾನು ಕೇಳಿದ್ದೇನೆ. ಆ ವೇಳೆಗೆ ನಮ್ಮ ಸರ್ಕಾರದವರು We will persuade

that Government of Karnataka and prevail upon the Government of Karnataka to release 20 TMC ft of Water.

ಅನಂತರ ಮುಂದಿನ ಮೀಟಿಂಗ್‌ನಲ್ಲಿ ಹೇಳಿದರು we havedone our best but the Government of Karnataka has not agreed, therefore we are sortಟತಿ ಎಂದು ಹೇಳಿದ್ದಾರೆ. ಇದು ನನಗೆ ತಿಳಿದಿರತಕ್ಕದ್ದು, ಇದು ನಿಜವೋ, ಅಲ್ಲವೋ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಬಯುಸುತ್ತೇನೆ. ಒಂದು ವೇಳೆ ಅವರಿಗೆ ನಾವು 10 ಟಿ.ಎಂ.ಸಿ. ನೀರನ್ನು ಬಿಡಬಹುದಿತ್ತು. ನಾವು ಬಿಡದೇ ಹೋಗಿದ್ದರಿಂದ ಟ್ರಿಬ್ಯುನಲ್‌ನ ಸದಸ್ಯರು ಈ ರೀತಿ ಬರೆದಿದ್ದಾರೆನಿಸುತ್ತದೆ. ನಿಮಗೆ ಹೇಳಬೇಕಾದರೆ ಅವರ ಜಡ್ಜ್‌ಮೆಂಟ್‌ನ್ನು ನೋಡಬೇಕು. ಆ ಜಡ್ಜ್‌ಮೆಂಟ್‌ನಲ್ಲಿ ಫ್ಲಡ್ ವಾಟರ್‌ನ ಬಗ್ಗೆ ಏನೂ ಇಲ್ಲ ನಾವು ರಿಸರ್ವಾಯಿರ್ ನಿಂದ ನೀರನ್ನು ಕೊಡಬೇಕಾದರೆ ಫ್ಲಡ್ ವಾಟರ್ ಬಂದರೆ ಅದಕ್ಕೆ ಲೆಕ್ಕ ಇಲ್ಲ ಎಂದು ತಮಿಳ್ನಾಡು ಮುಖ್ಯಮಂತ್ರಿಗಳು ಹೇಳಿದ್ದಾರೆ. ಫ್ಲಡ್ ವಾಟರ್ ನಮಗೆ ಬಂದಿದೆಯೇ ಹೊರತು ಕರ್ನಾಟಕದವರ ರಿಸರ್ವಾಯಿರ್ ನಿಂದ ಒಂದು ಟಿ.ಎಂ.ಸಿ ನೀರು ಕೂಡ ನಮಗೆ ಬಂದಿಲ್ಲ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ.

6.15 ಪಿ.ಎಂ.

ಅದಕ್ಕೆ ನಾನು ಹೇಳುವುದೇನೆಂದರೆ ಅವರು ಏನು ಜಡ್ಜ್ ಮೆಂಟ್ ತೆಗೆದುಕೊಳ್ಳುತ್ತಾರೆ. ಹೇಗೆ ತೆಗೆದುಕೊಳ್ಳುತ್ತಾರೆ. ಆ ಜಡ್ಜ್‌ಮೆಂಟ್ ನಿಂದ ಕರ್ನಾಟಕಕ್ಕೆ ಅನುಕೂಲವಾಗುತ್ತದೆಯೇಎನ್ನುವ ವಿಚಾರ ಅದಕ್ಕೆ ಮೊನ್ನೆಯೂ ಕೂಡ ಹೇಳಿದ್ದೇನೆ. ಮತ್ತೆ ಇವತ್ತೂ ಕೂಡ ಹೇಳುತ್ತಿದ್ದೇನೆ. ಇದರ ಬಗ್ಗೆ ಎರಡನೇ ವಿಚಾರವಿಲ್ಲ.ಇಲ್ಲಿ ಆರ್ಡಿನೆನ್ಸ್ ಮತ್ತು ರೆಸಲ್ಯೂಷನ್ ಮಾಡಿ ಆರ್ಡಿನೆನ್ಸ್ ಫಾಲೋ ಅಪ್‌ಗೆ ಒಂದು ಬಿಲ್ಲನ್ನು ತಂದು ಇಲ್ಲಿಪಾಸ್ ಮಾಡಿದರು. ರೆಸಲ್ಯೂಷನ್ ಮಾಡಿದಾಗ ನಾನು ಇಲ್ಲಿಯೇ ಇದ್ದೆ. ಆದರೆ ಆರ್ಡಿನೆನ್ಸ್ ಮಾಡಿದಾಗ ನಾನು ಗುಲ್ಬರ್ಗಾದಲ್ಲಿ ಇದ್ದೆ. ನಾನು ಆ ವೇಳೆಯಲ್ಲಿ ಇಲ್ಲಿಗೆ ಬರಲಿಕ್ಕೆ ಆಗಲಿಲ್ಲ. ಕೆಲವು ಮಾನ್ಯ ಸದಸ್ಯರನ್ನು ನಾನು ಅಲ್ಲಿ ಕೇಳಿದೆ. ಏತಕ್ಕೆ ನೀವು ಆರ್ಡಿನೆನ್ಸ್ ತಂದಿರಿ ಎಂದು. ಆರ್ಡಿನೆನ್ಸ್‌ಗೆ ಕೈ ಎತ್ತಿರಿ ಎಂದರು ನಾವು ಕೈ ಎತ್ತಿದೆವು. ನಾವು ಕೈ ಎತ್ತಲಾರದೆ ಹೋಗಿದ್ದರೆ ನಮ್ಮ ಮೇಲೆ ಗೂಬೆ ಕೂರಿಸುತ್ತಿದ್ದರು. ಈ ಸರ್ಕಾರದವರು. ಇಲ್ಲದಿದ್ದರೆ ಆಮೇಲೆ ನೀವು ಕೈ ಎತ್ತಲಿಲ್ಲ ಅದರ ಸಲುವಾಗಿ ನಮಗೆ ಬರುವ ನೀರು ಬರಲಿಲ್ಲವೆಂದು ಹೇಳುತ್ತಿದ್ದರು. ಅದಕ್ಕೆ ನಮ್ಮದೇನೂ ಇಲ್ಲ. ಅವರು ಎಲ್ಲಿ ಕೈ ಎತ್ತಿ ಎಂದು – ಹೇಳುತ್ತಾರೋ ಅಲ್ಲಿ ಕೈ ಎತ್ತುತ್ತೇವೆ. ಕೈ ಇಳಿಸಿ ಎಂದರೆ ಇಳಿಸುತ್ತೇವೆ. ಮಲಗು ಎಂದರೆ ಮಲಗುತ್ತೇವೆ. ನಿಂದರು ಎಂದರೆ ನಿಲ್ಲುತ್ತೇವೆ. ಕೊಡಿರಿ, ಎಂದರೆ ಕೊಡುತ್ತೇವೆ. ಸರ್ಕಾರ ಏನು ಹೇಳುತ್ತಾರೆ ಅದರಂತೆ ಮಾಡುತ್ತೇವೆ. ನಿಮ್ಮ ಆರ್ಡಿನೆನ್ಸ್ ಕಥೆ ಏನು? ನಮ್ಮ ಮನಸ್ಸಿಗೆ ಬಹಳ ನೋವಾಗಿ ಹೇಳುತ್ತಿದ್ದೇವೆ.

The entire Legislature has become a laughingstock. We have become a laughingstock.

Mr. Speaker : Is it the first instance where a resolution or an ordinance passed by either the State Legislature or the Loksabha has been struckdown by the supreme Court or whether there are any such instances?

Sri Veerendra patil : There may be a number of instances.

(Interruptions)

Sri Veerendra patil : You please read the judgement of the supreme Court.

Mr. Speaker : Even the decision on the anti-defection law has been partially struck down by the supreme court.

Then, has the parliament become a laughing stock? There are number of instances.

Sri Veerendra patil : on so many account they might have passed judgements. Here, we have become a laughing stock so far as this case is concerned the supreme court has said that if we accept the contention of the state Legislature and state government it will lead to the disintegration of the country and therefore we cannot accept. They have said like that. I request you to read the judgement of the supreme Court. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಸುಪ್ರೀಮ್ ಕೋರ್ಟ್ ಜಡ್ಜ್‌ಮೆಂಟ್ ಕೊಟ್ಟರೆ ಏನಾಗುತ್ತದೆಂದು ಅನೇಕರು ಹೇಳಿದರು ನಮಗೆ ಅಧಿಕಾರವಿದೆ, ನಾವು ಏನು ಬೇಕಾದರೂ ಮಾಡಬಹುದೆಂದು ಅದು ಆಗುವಂತಿಲ್ಲ.

We are one country. we are not different from the entire India. We cannot say that Karnataka is not a part of India or something like that. If we say that Karnataka is not a part of India tomorrow Andhra pradesh will say that we do not give our coal to Raichur Thermal plant and Gujarath or Maharastra will say we don't give our oil or gas.

ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದರ ಬಗ್ಗೆ ಅನೇಕರು ನನ್ನ ಜೊತೆಯಲ್ಲಿ ಮಾತನಾಡಿದರು. ಅವರು ಹೇಳಿದರು ನೋಡಿ ಈ ರೀತಿ ಆರ್ಡಿನೆನ್ಸ್ ಫಾಲೋಅಪ್ ಬಿಲ್ಲನ್ನು ಏತಕ್ಕೆ ಮಾಡಿದರು. ಬಿಲ್ ಮಾಡದಿದ್ದರೆ ಗೌವರ್ನ್‌ಮೆಂಟ್ ಆಫ್ ಇಂಡಿಯಾ ಸುಪ್ರೀಮ್ ಕೋರ್ಟಿಗೆ ರೆಫರ್ ಮಾಡುತ್ತಿರಲಿಲ್ಲ, ಬಿಲ್ ರೆಫರ್ ಮಾಡಿದ್ದರಿಂದಲೇ ಸುಪ್ರೀಮ್ ಕೋರ್ಟಿಗೆ ರೆಫರ್ ಮಾಡಿದರು.

ಈ ಬಿಲ್ ಮಾಡಿರುವುದರಿಂದ ಈ ಕೇಸನ್ನು ರೆಫರ್ ಮಾಡುತ್ತಾ ಕುಳುತು ಕೊಳ್ಳುತ್ತಾರೆ. We have put govt. of India in a very embarrassing position by passing this Bill. ಎಂದು ಏನಾದರೂ ಹೇಳಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಸದನದಲ್ಲಿ ನಾವು ಕಾಯಿದೆ ಮಾಡಿದಾಗ ಆದಕ್ಕೆ ಪೂರ್ವಭಾವಿಯಾಗಿ ಯಾರೂ ತಮ್ಮಂಥ ಹಿರಿಯರು ಈ ಸಲಹೆಯನ್ನು ಕೊಡಲಿಲ್ಲವಲ್ಲ. ಆರ್ಡಿನೆನ್ಸ್ ತಂದ ಕಾಲಕ್ಕೆ ಶಾಸನ ಮಾಡಿದಾಗ ಆಗಲಿ

ಯಾರೂ ಇಂಥ ಸಲಹೆಯನ್ನು ಕೊಡಲಿಲ್ಲ. ಸುಪ್ರೀಂ ಕೋರ್ಟಿನವರು ಹೊಡೆದುಹಾಕಿದ ಮೇಲೆ ಚರ್ಚೆ ಮಾಡಿದರೇ ಹೊರತು ಪೂರ್ವಭಾವಿಯಾಗಿ ಮಾಡಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್: ಆಗ ನಾನು ಇರಲಿಲ್ಲ. ಇದ್ದಿದ್ದರೆ ಏನು ಮಾಡುತ್ತಿದ್ದೆ ಎಂದು ಗೊತ್ತಿಲ್ಲ.

Mr. Speaker : I will have to be very fair to the Honble Member Shri Veerendra patil. He did say, that the records may be put straight. He did send a message to me that he wanted to come and participate in that particular debate because of the decision which we took in the Business Advisory Committee, that we just pass a one paragraph resolution unanimously that much of the debate shri Veerendrapatil did not attend the House. I will have to put that straight and I will have to be very fair to Mr. Patil.

ಶ್ರೀ ವೀರೇಂದ್ರ ಪಾಟೀಲ್ : ನಾನು ಇನ್ನೂ ಆ ತೀರ್ಮಾನಕ್ಕೆ ಬಂದಿಲ್ಲ. ಅದರ ಬಗ್ಗೆ ಹೇಳುತ್ತಿದ್ದೆ ಅಷ್ಟೆ.

ಶ್ರೀ ಎಸ್. ಬಂಗಾರಪ್ಪ : ಸುಪ್ರೀಂ ಕೋರ್ಟಿನ ರಿಟೈರ್ಡ್ ಚೀಫ್‌ಜಸ್ಟೀಸ್ ಇ.ಹೆಚ್. ವೆಂಕಟರಾಮಯ್ಯನವರು ಒಂದು ಹೇಳಿಕೆ ನೀಡಿ, ನಾವು ಏನು ಆರ್ಡಿನೆನ್ಸ್ ಮಾಡಿದ್ದೇವೆ ಅದು ಕಾನೂನು ಪ್ರಕಾರ ಮತ್ತು ರಾಜ್ಯದ ಹಿತದೃಷ್ಟಿಯಿಂದ ಸರಿ ಎಂದು ಹೇಳಿದ್ದಾರೆ.

ಶ್ರೀ ಸಿ.ಬೈರೇಗೌಡ : ಸುಪ್ರೀಂ ಕೋರ್ಟ್ ಅಭಿಪ್ರಾಯ ಕೊಟ್ಟಿದೆ. ಅಷ್ಟೇ

ಶ್ರೀ ಎಸ್. ಬಂಗಾರಪ್ಪ ಅವರ ಅಭಿಪ್ರಾಯದಲ್ಲಿ ಸ್ಟ್ರಕ್‌ಡೌನ್ ಆಗಿದೆ ಎಂದು ಹೇಳುತ್ತಿದ್ದಾರೆ. ಅವರ ಮಾತಿನಲ್ಲಿ ಹೇಳಿದರು. it is just an opinion, opinion given under Article 143 of the Constitution of India.

ನನಗೆ ಗೊತ್ತಿರುವ ಹಾಗೆ ಒಪೀನಿಯನ್ ಕೊಟ್ಟಿದೆ. ಆ ದೃಷ್ಟಿಯಿಂದ ನಾವು ಮಾಡಿರತಕ್ಕದ್ದು ಸರಿ ಇದೆ ಎಂದು ಜ: ವೆಂಕಟರಾಮಯ್ಯನವರು ಹೇಳಿದ್ದಾರೆ. ಈ ಮನೆಯ ಹಿರಿಯ ಸದಸ್ಯರು ಮಾಜಿ ಮುಖ್ಯ ಮಂತ್ರಿಗಳು ಆದ ಶ್ರೀಮಾನ್ ವೀರೇಂದ್ರ ಪಾಟೀಲರ ಬಗ್ಗೆ ನಮಗೆ ಗೌರವ ಇದೆ. ಅವರು ಈ ವಿಷಯವನ್ನು ಗಮನದಲ್ಲಿಟ್ಟರೆ ಒಳ್ಳೆಯದು, ಕಾವೇರಿ ವಿಚಾರದಲ್ಲಿ ನಾವು ಹೆಚ್ಚು ಚರ್ಚೆ ಮಾಡದೇ ಅವರ ಕಾಲದಲ್ಲಿ ಮತ್ತು ಅವರ ಹಿಂದೆ ಇದ್ದ ಸರ್ಕಾರ ಕಾಲದಲ್ಲಿ ಕೂಡ ನಡೆಸಿಕೊಂಡು ಬಂದಿದ್ದೇವೆ. ಆಮೇಲೆ ಟ್ರಿಬ್ಯುನಲ್‌ಗೆ ವಿರೋಧ ಮಾಡಿರತಕ್ಕದ್ದು. ಈ ಬಗ್ಗೆ ತಮ್ಮ ಅಡ್ವೈಸ್ ತೆಗೆದುಕೊಂಡಿದ್ದೇವೆ. ಮತ್ತೊಬ್ಬರದನ್ನು ತೆಗೆದುಕೊಂಡಿದ್ದೇವೆ. ಯಾವುದೇ ಮಾಡಿದರೂ ಲೀಗಲ್ ಎಕ್ಸ್‌ಪರ್ಟ್ಸ್ ಏನಿದ್ದಾರೆ ಅವರ ಅಭಿಪ್ರಾಯಗಳನ್ನು ತೆಗೆದುಕೊಂಡೇ ಹೋಗಿದ್ದೇವೆ. ಇಂಥ ಬೇಕಾದಷ್ಟು ಜಡ್ಜ್‌ಮೆಂಟ್‌ಗಳು ಪರ, ವಿರೋಧ ಇರುತ್ತವೆ. ನಮ್ಮ ಕೇಸ್ ಹೇಗಿದೆ ಎಂಬ ಬಗ್ಗೆ ಅನುಮಾನ ಇಟ್ಟುಕೊಂಡು ಮಾತನಾಡತಕ್ಕ ಅವಶ್ಯಕತೆ ಇಲ್ಲವೆಂದು ಶ್ರೀ ವೀರೇಂದ್ರ ಪಾಟೀಲರ ಗಮನಕ್ಕೆ ತರುತ್ತಿದ್ದೇನೆ. ಟೆಂಪರರಿ ಆರ್ಡರ್ ಬಗ್ಗೆ ಟ್ರಿಬ್ಯುನಲ್‌ನಲ್ಲಿ ಪೆಂಡಿಂಗ್ ಇದೆ. ಆರ್ಗ್ಯುಮೆಂಟ್ಸ್ ನಡೆಯುತ್ತಿದೆ. 28ಕ್ಕೆ ಕೇಸ್ ಹಿಯರಿಂಗ್‌ಗೆ ಬರಲಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಆ ಕಾರಣಕ್ಕಾಗಿ ನಾನು ಕಾವೇರಿ ವಿಚಾರವನ್ನು ಮಾತನಾಡಲಿಲ್ಲ. It is not an interruption.

ಶ್ರೀ ಎಸ್. ಬಂಗಾರಪ್ಪ ಅದಕ್ಕಾಗಿ ನಾನು ಸದನದ ಅಭಿಪ್ರಾಯವನ್ನು ಮಾನ್ಯ ವೀರೇಂದ್ರ ಪಾಟೀಲರ ಗಮನಕ್ಕೆ ತರುವುದು. ಈ ರೀತಿ ಕೆಲವು ಅಭಿಪ್ರಾಯಗಳಿರುವುದರಿಂದ ಹೆಚ್ಚು ಯಾರೂ ಮಾತನಾಡದೆ ಸರ್ವಪಕ್ಷಗಳು ಏಕಾಭಿಪ್ರಾಯಕ್ಕೆ ಬಂದಿವೆ. ತಮ್ಮ ಅಭಿಪ್ರಾಯ ಪ್ರತ್ಯೇಕವಾಗಿ ಹೋಗುತ್ತದೆ. ಎಂಬ ಅಭಿಪ್ರಾಯ ಬಂದೀತೇನೋ ಎಂಬ ಶಂಕೆ ನನ್ನದು. ಆ ರೀತಿ ಅಭಿಪ್ರಾಯ ಬರುವುದಿಲ್ಲವೆಂದರೆ ನಾನು ಸಂತೋಷಪಡುತ್ತೇನೆ. ಶಂಕೆಯ ವಾತಾವರಣ ಕಂಡು ಬರುತ್ತಿದೆ. ಅದನ್ನು ಆದಷ್ಟು ಆವಾಯ್ಡ್ ಮಾಡಿದರೆ ಒಳ್ಳೆಯದು. ತಮ್ಮ ಮಾತಿಗೆ ನಾನು ಅಡ್ಡಿ ಬರುತ್ತಿಲ್ಲ.

ಅದು ಈ ಸದನದ ಒಂದು ಅಭಿಪ್ರಾಯ ಎಂಬುದನ್ನು ಮಾತ್ರ ಅಧ್ಯಕ್ಷರ ಅಪ್ಪಣೆ ಪಡೆದು ನಾನು ಇಟ್ಟಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸದನದ ಅಭಿಪ್ರಾಯ ನಮ್ಮ ಅಭಿಪ್ರಾಯ ಮತ್ತು ವೀರೇಂದ್ರ ಪಾಟೀಲರು ಹೇಳಿದಂಥ ಬಹುತೇಕ ಮಾತುಗಳಿಗೆ ಒಮ್ಮತ ಇದೆ. ನಾವು ಅನೇಕ ಸಂದರ್ಭದಲ್ಲಿ ರಾಜ್ಯದ ಹಿತದೃಷ್ಟಿಯಿಂದ ಮಾತನಾಡದೇ ಇದ್ದರೂ ಸಹ ಜನರಿಗೆ ಈ ಸತ್ಯಸಂಗತಿಯನ್ನು ತಿಳಿಸುವಂಥ ಅಗತ್ಯ ಇದೆ. ಅವರು ತಿಳಿಸುತ್ತಿದ್ದಾರೆ. ನಾಳೆ ನಾವು ಮಾತನಾಡಬೇಕಾದರೆ ಅನೇಕ ಸಂಗತಿಗಳನ್ನು ತಿಳಿಸುವಂಥದ್ದು ಅಗತ್ಯವಿದೆ. ಇಲ್ಲದೇ ಇದ್ದರೆ ಜನ ನಾಳೆ ಛೀಮಾರಿ ಹಾಕುವಂಥ ಕಾಲ ಬರಬಹುದು. ಅದಕ್ಕೋಸ್ಕರ ತಪ್ಪುಗಳೇನಾಗಿದೆ ಸರ್ಕಾರ ಕಡೆಯಿಂದ, ಎಲ್ಲಾ ಹಂತದಲ್ಲಿ ಎಡವಿದ್ದಾರೆ,ಅದನ್ನು ಅವರು ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ಈಗ ಒಂದೇ ಒಂದು ವಿಷಯ. ಮಾತನಾಡತಕ್ಕ, ಅಭಿಪ್ರಾಯ ತಿಳಿಸತಕ್ಕ ನಿಮ್ಮ ಹಕ್ಕನ್ನು ಮೊಟಕು ಮಾಡಿ ನಾನು ಮಾತನಾಡುತ್ತಿಲ್ಲ. ರಾಜ್ಯದ ಹಿತದೃಷ್ಟಿಯಿಂದ ನೀವು ಮಾತನಾಡತಕ್ಕ ಸಂದರ್ಭ ಬಂದಾಗ ನೀವು ಮಾತನಾಡಿ. ಎಲ್ಲರೂ ಸ್ವಾಗತ ಮಾಡೋಣ. ಆದರೆ ಮಾತನಾಡತಕ್ಕದ್ದು ರಾಜ್ಯದ ಹಿತದೃಷ್ಟಿಗೆ ಮಾರಕವಾಗಬಹುದು ಅಥವಾ ತೊಂದರೆಯಾಗಬಹುದು. ಭವಿಷ್ಯದಲ್ಲಿ ನಾಳೆಇದೇ ವಿಚಾರ ತೊಂದರೆಯಾಗಬಹುದು. ಎಂಬ ವಿಚಾರ ಮತ್ತೊಂದು ತಮ್ಮ ಗಮನದಲ್ಲಿದ್ದರೆ, ಯಾವುದು ಒಳ್ಳೆಯದು ಎಂಬುದನ್ನು ತುಲನೆ ಮಾಡಿ ಬೇಕಾದರೆ ತಾವು ಮಾತನಾಡಿ. ಅದನ್ನು ನೋಡಿ, ನಾನು ನಿಮಗೇ ಬಿಡುತ್ತೇನೆ. ನಾನು ಏತಕ್ಕೆ ಹೇಳುತ್ತೇನೆ ಎಂದರೆ ಯಾವುದೇ ಮಾತನಾಡಿದರೂ ಕೂಡ ಬಹಳ ಹಿಡಿತದಲ್ಲಿ ಇಟ್ಟು ಎಷ್ಟೇ ಭಾವನೆಗಳಿದ್ದರೂ ಅದುಮಿ ನಾವಾಗಲೀ ತಾವಾಗಲೀ ಮತ್ತೊಬ್ಬರಾಗಲೀ ಇಲ್ಲಿಯವರೆಗೆ ನಾವು ಏಕ ವ್ಯಕ್ತಿಯಾಗಿ ಸರ್ವಪಕ್ಷಗಳೂ ಬಂದಿವೆ, ಅದಕ್ಕೆ ಸ್ವಲ್ಪ ಕೂಡ ವ್ಯತಿರಿಕ್ತ ಬರದಹಾಗೆ ನೋಡಿಕೊಳ್ಳತಕ್ಕ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂಬುದು ನನ್ನ ಭಾವನೆ. ನಾನು ಆ ದೃಷ್ಟಿಯಿಂದ ಹೇಳಿದ್ದೇನೆ. ಮಾತನಾಡಿದರೆ ಒಳ್ಳೆಯದಾಗುತ್ತದೆ ಎಂದಿದ್ದರೆ ಮಾತನಾಡಿ, ನನ್ನದೇನೂ ಇಲ್ಲ. ಆದರೆ ಮಾತನಾಡಿದರೆ ಹಿತಕ್ಕೆ ತೊಂದರೆ ಆದೀತು ಎಂದಿದ್ದರೆ ಅದನ್ನು ತಮಗೇ ಬಿಡುತ್ತೇನೆ ಮಾತನಾಡಬೇಕೋ ಬಿಡಬೇಕೋ ಎಂದು ನನಗೂ ಕೂಡ ಅನ್ವಯ ಮಾಡಿಕೊಂಡೇ ನಾನು ಈ ಮಾತನ್ನು ಆಡುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಆ ಕಾರಣಕ್ಕೇ ನಾವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನು ನಿರ್ಣಯಕ್ಕೆ ಬಂದಿದ್ದೇವೆ. ಎಂದರೆ 22ನೇ ತಾರೀಖು ಕಳೆದ ಮೇಲೆ ಕಾವೇರಿ ಬಗ್ಗೆ ಚರ್ಚೆ ಮಾಡಬೇಕು ಎಂಬ ನಿರ್ಧಾರ ಮಾಡಿದ್ದೇವೆ. ಆ ದೃಷ್ಟಿಯಿಂದಲೇ ನಾನು ಇವತ್ತು ಆ ವಿಚಾರ ಪ್ರಸ್ತಾಪ ಮಾಡಲಿಲ್ಲ ಎಂಬುದನ್ನು ನಾನು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ವಿಶೇಷವಾಗಿ ಟ್ರಿಬ್ಯುನಲ್ ಆರ್ಡರನ್ನು ಗೆಜೆಟ್‌ನಲ್ಲಿನೋಟಿಫೈ ಮಾಡಬಾರದು ಎಂಬ ಬಗ್ಗೆ ಒಂದು ರೆಸಲ್ಯೂಷನ್ ಪಾಸ್ ಮಾಡುವ ಸಂದರ್ಭ ಬಂದಾಗ ಬೆಳಿಗ್ಗೆ 11 ಗಂಟೆಗೆ ಸೇರಬೇಕಾದರೆ ತಮ್ಮ ಕೊಠಡಿಯಲ್ಲಿ ತುಂಬಾ ಚರ್ಚೆಯಾಗಿ ಮೂರು ಗಂಟೆಗೆ ನಾವು ಕುಳಿತೆವು. ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವ ಸಂದರ್ಭದಲ್ಲಿ ನಾನು ಮಧ್ಯಪ್ರವೇಶ ಮಾಡಿ ಆವತ್ತು ನಾವು ರೆಸಲ್ಯೂಷನ್ ಪಾಸ್ ಮಾಡಬೇಕಾದರೆ ಯಾವುದೇ ಕಾರಣಕ್ಕೆ ಇಂಟೇರಿಯಂ ಆರ್ಡರನ್ನು ಗೆಜೆಟ್‌ನಲ್ಲಿ ನೋಟಿಫೈ ಮಾಡುವುದಾದರೆ ಇಡೀ ಸದನ ಒಂದಾಗಿ ನಾವು ರಾಜೀನಾಮೆ ಕೊಡುತ್ತೇವೆ ಎಂಬ ಶಬ್ದವನ್ನು ಸೇರಿಸಬೇಕು ಎಂದು ನಾನು ಮಧ್ಯಪ್ರವೇಶ ಮಾಡಿ ಹೇಳಿದಾಗ ಬಹಳ ಅವಮಾನಕರವಾಗಿ ನಾನು ನಡೆದುಕೊಂಡೆ, ನನ್ನ ನಡವಳಿಕೆ ಸರಿಯಿಲ್ಲ ಎಂದು ನಾನು ಛೀಮಾರಿ ಹಾಕಿಸಿಕೊಂಡೆ. ಸನ್ಮಾನ್ಯ ವೀರಪ್ಪ ಮೊಯಿಲಿಯವರು ನನ್ನ ಬಗ್ಗೆ ಒಂದು ರೆಸಲ್ಯೂಷನ್ ಮೂವ್ ಮಾಡುವಂಥ ಸಂದರ್ಭ ಬಂತು. ಮಧ್ಯದಲ್ಲಿ ಇಂಟರ್‌ಫಿಯರ್ ಆದೆ ಮುಖ್ಯಮಂತ್ರಿಗಳು ಮಾತನಾಡುವಾಗ. ಇದೆಲ್ಲಾ ಬಂತು. ಆದರೆ ಆವತ್ತು ತಮ್ಮ ಕೊಠಡಿಯಲ್ಲಿ ಚರ್ಚೆ ಆದಾಗ ಒಂದೇ ಒಂದು ನನ್ನ ಹಠ ಏನಿತ್ತು ಎಂದರೆ ನಾವು ಯಾರೂ ಮಾತನಾಡುವುದಿಲ್ಲ. ಜನರ ಹಿತದೃಷ್ಟಿಯಿಂದ ಮುಖ್ಯಮಂತ್ರಿಗಳು ನಾವೆಲ್ಲಾ ವಿರೋಧ ಪಕ್ಷದವರು ಕೂತು ತಮ್ಮ ಕೊಠಡಿಯಲ್ಲಿ ಮಾತನಾಡಿದಾಗ ನಾನು ಏನು ಒತ್ತಾಯ ಮಾಡಿದೆ ಎಂದರೆ ಒಂದು ರೆಸಲ್ಯೂಷನ್ ನಾವು ಕಳುಹಿಸಬೇಕಾದರೆ ಟ್ರಿಬ್ಯುನಲ್ ಆರ್ಡರ್ ಗೆಜೆಟ್ ನೋಟಿಫೈ ಮಾಡಿದ ಮೇಲೆ ಚಿಂತನೆ ಮಾಡುವುದರ ಬದಲಾಗಿ ಈಗಲೇ ಒಕ್ಕೊರಲಿನಿಂದ ನಾವು ರಾಜೀನಾಮೆ ಕೊಡುತ್ತೇವೆ ಎನ್ನುವ ಒತ್ತಡವನ್ನು ಮಾಡೋಣ, ಆಗ ಗೆಜೆಟ್ ನೋಟಿಫೈ ಆಗುವುದಿಲ್ಲ ಎಂಬ ಮಾತನ್ನು ಹೇಳಿದಾಗ ಏನಾಯಿತೋ ನನಗೆ ಗೊತ್ತಿಲ್ಲ. ಅದಕ್ಕೋಸ್ಕರ ನಾನು ಏನು ಹೇಳುವುದಕ್ಕೆ ಹೊರಟೆ ಎಂದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳುವುದು ಸರಿ ಇದೆ. ನಮ್ಮ ಅಭಿಪ್ರಾಯಗಳು ಬೇರೆ ಇರಬಹುದು. ಆದರೆ ಜನರ ಹಿತದೃಷ್ಟಿಯಿಂದ ಇದು ಸರಿ ಇದೆ ಎಂದು ಮುಂದೆ ಹೋಗಿದ್ದರೆ ಅದು ತಪ್ಪಾಗಿದ್ದರೆ ಅದಕ್ಕೆ ಯಾರೋ ಕೆಲವರು ಮಾತ್ರ ಜವಾಬ್ದಾರರು ಎಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಅನೇಕ ಸಂದರ್ಭದಲ್ಲಿ ನಾವು ನಮ್ಮ ಸರ್ಕಾರ ಇದರ ಬಗ್ಗೆ ಜನಹಿತ ಕಾಪಾಡುವುದಲ್ಲಿ ಕಾವೇರಿ ಟ್ರಿಬ್ಯುನಲ್ ವಿಷಯ ಬಂದಾಗ ಟ್ರಿಬ್ಯುನಲ್ ಮುಂದೆ ಸರಿಯಾಗಿ ವಾದ ಮಂಡನೆ ಮಾಡಿಲ್ಲ. ಆ ಒಂದು ಪರಿಸ್ಥಿತಿ ತಂದುಕೊಂಡು ಇವತ್ತು ನಮ್ಮ ತಲೆಮೇಲೆ ಕಲ್ಲು ಹಾಕಿಕೊಳ್ಳುವಂಥ ಪರಿಸ್ಥಿತಿ ಬಂದಿರುವುದು ಎಲ್ಲರಿಗೂ ಗೊತ್ತಿರುವ ಸತ್ಯ ಸಂಗತಿ.

ಶ್ರೀ ವೀರೇಂದ್ರ ಪಾಟೀಲ್ : ಸಭಾಧ್ಯಕ್ಷರೆ, ನಾವು ಏನಾದರೂ ತಪ್ಪು ಮಾಡಿದ್ದರೆ ತಪ್ಪು ಒಪ್ಪಿಕೊಳ್ಳುವುದರಲ್ಲಿ ಏನೂ ತಪ್ಪಿಲ್ಲ. ನೀವು ಹೇಳುತ್ತಿದ್ದೀರಿ ನಾನು ಕೇಳಿದೆ, ಅನೇಕ ಬಿಲ್‌ಗಳು ಪಾಸಾಗಿದ್ದು ಸುಪ್ರೀಂಕೋರ್ಟಿನವರು ಅದನ್ನು ಹೊಡೆದುಹಾಕಿದ್ದಾರೆ ಎಂದು ಹೊಡೆದುಹಾಕುವುದು ಬೇರೆ. ಆದರೆ ಇದರಲ್ಲಿ

ಏನು ಮಾಡಿದ್ದಾರೆ? ತಮಗೆ ವಿನಂತಿಸಿಕೊಳ್ಳುವುದೇನೆಂದರೆ ಸುಪ್ರೀಂಕೋರ್ಟ್ ಜಡ್ಜ್‌ಮೆಂಟನ್ನು ಎಲ್ಲರಿಗೂ ಓದುವುದಕ್ಕೆ ಕೊಡಿ. ಅವರು ಬಹಳ ಸ್ಟ್ರಾಂಗ್‌ಆಗಿ ಹೇಳಿದ್ದಾರೆ. ಹೇಳಬಹುದು. ಸುಪ್ರೀಂ ಕೋರ್ಟಿನವರು ಏನಾದರೂ ಹೇಳಲಿ, ನಾವು ಕರ್ನಾಟಕದಲ್ಲಿದ್ದೇವೆ. ನಮ್ಮ ಮನಸ್ಸಿಗೆ ಬಂದ ಹಾಗೆ ಮಾಡುತ್ತೇವೆ ಎಂದರೆ, ಅದು ಆಗುವ ಹಾಗಿಲ್ಲ, ಆ ರೀತಿ ಮಾಡುವುದಕ್ಕೆ ಬರುವುದಿಲ್ಲ, ಮತ್ತು ಆ ರೀತಿ ನಾವು ಪಾರ್ಟಿ ಆಗುವುದಕ್ಕಾಗುವುದಿಲ್ಲ. ಈಗ ಹೇಳುತ್ತಿದ್ದರು ಪಾರ್ಟಿಗೊಬ್ಬರು ಮಾತನಾಡಬೇಕೆಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಬಂತು. ಕರ್ನಾಟಕದ ಹಿತದೃಷ್ಟಿಯಿಂದ ಒಪ್ಪಿಕೊಂಡಿದ್ದೇವೆ ಎಂದು. ಮೇಲ್ಮನೆಯಲ್ಲಿ ಪಾರ್ಟಿಗೊಬ್ಬರು ಮಾತನಾಡಿದ್ದಾರೆಯೇ? ಎಲ್ಲರೂ ಮಾತನಾಡಿದ್ದಾರೆ.

ನನಗೆ ಗೊತ್ತಿರುವ ಹಾಗೆ ಮೇಲ್ಮನೆಯಲ್ಲಿ ಎಲ್ಲರೂ ಮಾತಾಡಿದ್ದಾರೆ. ಈ ಪಾರ್ಟಿಯವರೂ ಮಾತನಾಡಿದ್ದಾರೆ, ಆ ಪಾರ್ಟಿಯವರೂ ಮಾತನಾಡಿದ್ದಾರೆ. ಯಾವುದೋ ಒಂದು ಪಕ್ಷದ ದೃಷ್ಟಿಯಿಂದ ಮಾತನಾಡಲಿಲ್ಲ, ಏಕೆಂದರೆ ನೀರಾವರಿ ವಿಷಯ ಪಾರ್ಟಿ ಇಷ್ಯೂ ಅಲ್ಲ. ಅದು ಸ್ಟೇಟ್‌ಇಷ್ಯೂ ಯಾರ್‍ಯಾರು ಮಾತನಾಡುತ್ತಾರೋ ಅವರೆಲ್ಲರಿಗೂ ಅವಕಾಶ ಕೊಡಬೇಕೇ ಹೊರತು ಪಾರ್ಟಿಗೆ ಒಬ್ಬರು ಮಾತನಾಡುತ್ತೇವೆ ಅದಕ್ಕಿಂತಾ ಹೆಚ್ಚು ಮಾತನಾಡಬಾರದು ಎಂದು ಅಲ್ಲ. ಮೇಲ್ಮನೆಯಲ್ಲಿ ಪಾರ್ಟಿಗೆ ಒಬ್ಬರು ಮಾತನಾಡಿದರೇ? ವಿರೋಧ ಪಕ್ಷದವರೂ ಹೇಳಬೇಕಾಗುತ್ತದೆ. ಅಲ್ಲಿ ಪಾರ್ಟಿಗೆ ಒಬ್ಬರೇ ಮಾತನಾಡಲಿಲ್ಲ. ವಿಧಾನ ಪರಿಷತ್ತಿನಲ್ಲಿ ಬೇಕಾದಷ್ಟು ಸದಸ್ಯರು ಮಾತನಾಡಿದ್ದಾರೆ. ಯಾವರೀತಿಯಿಂದ ಕಾವೇರಿ ಬಗ್ಗೆ ಕರ್ನಾಟಕ ರಾಜ್ಯಕ್ಕೆ ಧಕ್ಕೆ ಆಗಿದೆ ಎಂದು ನನಗೆ ಗೊತ್ತಿಲ್ಲ. ನಾವು ಇಲ್ಲಿ ಮಾತನಾಡುತ್ತೇವೆ, ಹೋಗುತ್ತೇವೆ. ಆದರೆ ಸರ್ಕಾರ ಏನು ಮಾತನಾಡುತ್ತದೆ. ಮುಖ್ಯಮಂತ್ರಿಗಳು ಏನು ಮಾತನಾಡುತ್ತಾರೆ. ಎಂಬುದನ್ನು ನೋಡಬೇಕು. ಹಿಂದೆ ನಾನು ಹೇಳಿದ್ದೆ. He represents the entire people.

ಅವರು ಮಾತನಾಡುವುದರಲ್ಲಿ ನಾವು ಮಾತನಾಡುವುದರಲ್ಲಿ ಬಹಳವ್ಯತ್ಯಾಸ ಇದೆ. ಅದರ ಸಲುವಾಗಿ ನಾವು ಏನಾದರೂ - ಮಾತನಾಡಿ ಜಾರಿಕೊಂಡು ಹೋಗಬಹುದು. ಆದರೆ ಇವರು ಜಾರಿಕೊಂಡು ಹೋಗುವುದಕ್ಕಾಗುವುದಿಲ್ಲ. ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ನಾನು ಇನ್ನು ಮೊನ್ನೆಯ ರೆಸಲ್ಯೂಷನ್ ಬಗ್ಗೆ ಬರುತ್ತಿದ್ದೇನೆ. ಮೊನ್ನೆ ರೆಸಲ್ಯೂಷನ್ ಪಾಸ್ ಮಾಡಿದಿರಿ. ಯಾವ ಕಾನೂನಿನಲ್ಲಿ ಪಾಸ್ ಮಾಡಿದಿರಿ? ಇವತ್ತು ಅದರಲ್ಲಿ ತಪ್ಪು ಇದೆ ಎಂದು ನಾನು ಹೇಳುತ್ತೇನೆ. ಅದರಲ್ಲಿ ನೀವು ತಪ್ಪು ಮಾಡಿದ್ದೀರಿ ನಾನು ಬಂದಿದ್ದರೆ ಈ ರೆಸಲ್ಯೂಷನ್ ಇರುತ್ತದೋ ಇಲ್ಲವೋ ಎಂದು ಮಾತನಾಡುತ್ತಾ ಇದ್ದೆ. ಇವತ್ತು ತಾವು ಆ ರೆಸಲ್ಯೂಷನ್‌ನ್ನು ತೆಗೆದು ನೋಡಿ ಅದರಲ್ಲಿ ಏನಿದೆ ಎಂದರೆ you should not gazette according to the verdit of the supreme Court. ಎಂದು ಹೇಳಿದ್ದೀರಿ. ಕೇಂದ್ರ ಸರ್ಕಾರದವರು ಏನು ಮಾಡಬೇಕು? ನೋಡಪ್ಪ, ನಾವು ರಿವಿಷನ್‌ಗೆ ಹಾಕಿದ್ದೇವೆ. ರಿವಿಷನ್‌ಗೆ ಹೋಗುವವರೆಗೆ ತಡೆಹಿಡಿಯಬೇಕೆಂದು ತಾವು ರೆಸಲ್ಯೂಷನ್ ಪಾಸ್ ಮಾಡಬೇಕಾಗಿತ್ತು. ಅದು ಏನೂ ಇಲ್ಲ. ನೀವು ಗೆಜೆಟ್ ಆಗಬಾರದು ಎಂದರೆ ಎಷ್ಟು ದಿವಸದವರೆಗೆ ಆಗಬಾರದು? ಏಕೆಂದರೆ ನಾವು ಏನು ಈ ಮನೆಯಲ್ಲಿ ಇದ್ದೇವೆ, ನಾವು ಕೈ ಎತ್ತಿ ಏನು ಬೇಕಾದರೂ ಕಾನೂನು ಪಾಸ್ ಮಾಡುತ್ತೇವೆಂದರೆ ಆಗುವುದಿಲ್ಲ. ಏಕೆಂದರೆ ನಾವು ಸರಿಯಾಗಿ ಮಾಡುತ್ತಿಲ್ಲ, ಹೈಕೋರ್ಟ್‌ನವರು, ಸುಪ್ರೀಮ್‌ಕೋರ್ಟ್‌ನವರು ನೋಡುತ್ತಾರೆ, ಸುಪ್ರೀಮ್‌ಕೋರ್ಟ್‌ನಲ್ಲಿ ಏನೇ ಬರಲಿ, ಹೈಕೋರ್ಟ್‌ನಲ್ಲಿ ಏನೇ

ಬರಲಿ ನಾವು ಮಾತ್ರ ಮಾಡುವುದು ಮಾಡುತ್ತೇವೆಂದು ಹೇಳಿದರೆ ಆಗುವುದಿಲ್ಲ. ಆ ಸಲುವಾಗಿ ನಾನು ಹೇಳುವುದು ಏನೆಂದರೆ ರೆಸಲ್ಯೂಷನ್ ಏನು ಮಾಡಿದ್ದೀರಿ ಅದು ಕಾನೂನು ಪ್ರಕಾರ ಇಲ್ಲ, ಒಂದೇ ಕಾನೂನು ಇದ್ದೇ ಇದೆ. ಯಾವುದು ಎಂದರೆ ಇಂಟರ್ ಸ್ಟೇಟ್ ರಿವರ್ ವಾಟರ್ ಡಿಸ್‌ಪ್ಯೂಟ್. ಅದರ ಪ್ರಕಾರ ಯಾವಾಗ ಗೆಜೆಟ್ ಮಾಡಬೇಕೆಂದು ಅದರಲ್ಲಿ ಬಂದಿಲ್ಲ. ಗೆಜೆಟ್ ಮಾಡಬೇಕು. ಗೌರ್ನಮೆಂಟ್ ಆಫ್ ಇಂಡಿಯಾ has no option but to gazette ಎಂದು ಹೇಳಿದೆ. When it should be gazetted ಎಂದು ಹೇಳಿಲ್ಲ, ಅದನ್ನು ಹೇಳಬಹುದಾಗಿತ್ತು.

ನಾವು ಟ್ರಿಬ್ಯುನಲ್ಸ್ ಮುಂದೆ ರೆವ್ಯೂ ಪಿಟಿಷನ್ ಹಾಕಿದ್ದೇವೆ. ಅದು ನಿಖಾಲಿ ಆಗುವವರೆಗೆ ನೀವು ಗೆಜೆಟ್ ಮಾಡಬೇಡಿ ಎಂದು ಹೇಳಿದ್ದೀರಾ? ಯಾವ ಕಾನೂನು ಕೆಳಗೆ ರೆಸಲ್ಯೂಷನ್ ಪಾಸ್ ಮಾಡಿದ್ದೀರಿ? ಈ ಸಭೆಗೆ ಸುಪ್ರೀಮ್ ಇದೆಎಂದು ಹೇಳಿ ನಾವು ಏನೆಲ್ಲಾ ಮಾಡುತ್ತೇವೆಂದು ಹೇಳುವುದಕ್ಕಾಗುತ್ತದೆಯೇ? ನೀವು ಸುಪ್ರೀಮ್ ಎಂದು ಏನು ಬೇಕಾದರೂ ಮಾತನಾಡಬಹುದು. ಹೈಕೋರ್ಟ್‌ನವರು ನಮ್ಮ ಬಿಲ್ ಹೊಡೆದು ಹಾಕಿದ್ದು ಇದೆ. ಸುಪ್ರೀಮ್ ಕೋರ್ಟ್‌ನವರು ಬಿಲ್ ಹೊಡೆದು ಹಾಕಿದ್ದು ಇದೆ. ಸುಪ್ರೀಮ್ ಕೋರ್ಟಿನಲ್ಲಿ ಪಾರ್ಲಿಮೆಂಟಿನ ಬಿಲ್ಲನ್ನು ನೀತಿ ನಿರ್ದಾಕ್ಷಿಣ್ಯ ಇಲ್ಲದೆ ಹೊಡೆದುಹಾಕಿದೆ. ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ, ಹೋದ ಸಲ ಏನು ರೆಸಲ್ಯೂಷನ್ ಪಾಸ್ ಮಾಡಿದ್ದೀರೋ ಅದನ್ನು ಪಾಸ್ ಮಾಡಿ ಏನು ಮಾಡಿದ್ದೀರಿ? ಕೇಂದ್ರಕ್ಕೆ ಹೋದಿರಿ. ಕೇಂದ್ರಕ್ಕೆ ಹೋಗಿಪ್ರಧಾನ ಮಂತ್ರಿಗಳನ್ನು ಭೇಟಿ ಆದಿರಿ. You used your good offices. ನಿಮ್ಮ ರೆಸಲ್ಯೂಷನ್ ಕೊಟ್ಟಿರಿ. ಅವರು ಏನು ಮಾಡಿದರು?We will do our best ಎಂದು ಹೇಳಿದರು. ಆಮೇಲೆ ನೀವು ಬೆಂಗಳೂರಿಗೆ ಬಂದ 3-4ದಿವಸಗಳಲ್ಲಿ ಅದನ್ನು ಗೆಜೆಟ್‌ನಲ್ಲಿ ಪಬ್ಲಿಷ್ ಮಾಡಿದರು. ನಿಮ್ಮ ರೆಸಲ್ಯೂಷನ್ ಕಿಮ್ಮತ್ತು ಏನು? ಏಕೆ ಇಂತಹ ರೆಸಲ್ಯೂಷನ್ ಮಾಡುತ್ತೀರಿ? ನಾವು ನಿಮ್ಮ ಹಿತರಕ್ಷಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಜನರಿಗೆ ಹೇಳಿದರೆ ಅವರು ಕನ್ವಿನ್ಸ್ ಆಗುತ್ತಾರೆಯೇ ನೀವು ತಪ್ಪು ಮಾಡಿದ್ದೀರಿ. ಮತ್ತು ಜನರ ಮುಂದೆ ಹೋಗಿ ತಪ್ಪು ಮಾಡಿದ್ದೇವೆಂದು ಒಪ್ಪಿಕೊಳ್ಳುವುದಕ್ಕೆ ತಯಾರು ಇಲ್ಲ ಎಂದರೆ ನೀವು ಯಾವ ರೀತಿ ಜನರ ಮುಂದೆ ಹೋಗುವುದಕ್ಕೆ ಸಾಧ್ಯವಾಗುತ್ತದೆಂದು ವಿಚಾರ ಮಾಡಿ ನಿಮ್ಮ ರೆಸಲ್ಯೂಷನ್ ನಿಂತಿಲ್ಲ. ಕಾನೂನು ಪ್ರಕಾರ ರೆಸಲ್ಯೂಷನ್ ಇಲ್ಲ. ನೀವು ಹೇಳಬಹುದು, ನಮ್ಮ ಹೌಸ್ ಸುಪ್ರೀಮ್ ಇದೆ ಎಂದು. ಕಾನೂನು ಇರಲಿ ಇಲ್ಲದಿರಲಿ ನಾವು ಬೇಕಾದ್ದು ಮಾಡುತ್ತೇವೆಂದು ನೀವು ಹೇಳಬಹುದು. ಅದೇ ರೀತಿಯಿಂದ ಒಂದು ವೇಳೆ ತಮಿಳುನಾಡಿನವರೂ ಹೇಳಿದರೆ ಏನು ಗತಿ ಆಗುತ್ತದೆ? ನಾವು ವಿಚಾರ ಮಾಡಬೇಕಾಗುತ್ತದೆ. ಎಲ್ಲಿಯವರೆಗೆ ನಾವು ಒಂದೇ ಎಂದು ಹೇಳುತ್ತೇವೆ. ಅಲ್ಲಿಯವರೆಗೆ ನಾವು ಒಂದೇ ಕಂಟ್ರಿಯೆಂದು ವಿಚಾರ ಮಾಡಬೇಕು. ಮತ್ತು ನಾವು ಯಾವುದೇ ರೀತಿಯಲ್ಲಿ ತಪ್ಪು ಮಾಡಬಾರದು. ನಾವು ಇಡುವ ಪ್ರತಿಯೊಂದು ಹೆಜ್ಜೆಯನ್ನು ಕಾನೂನು ಪ್ರಕಾರ ಇಡಬೇಕೆನ್ನುವ ಮಾತನ್ನು ನಾನು ತಮ್ಮ ಮುಂದೆ ಹೇಳುತ್ತಿದ್ದೇನೆ. ಅಲ್ಲಿಂದ ಆರ್ಡಿನೆನ್ಸ್ ಬಗ್ಗೆ ಹೇಳುವುದಾದರೆ, ಆರ್ಡಿನೆನ್ಸ್ ಮತ್ತು ಇಲ್ಲೊಂದು ಬಿಲ್ ಪಾಸಾಯಿತು. ಅದಕ್ಕೆ ಎಲ್ಲಾರೂ ಕೈ ಎತ್ತಿದರು ಅದು ಪಾಸಾಯಿತು. ಏಕೆಂದರೆ ಕರ್ನಾಟಕದ ಹಿತರಕ್ಷಣೆಯಾಗುತ್ತದೆಂದರೆ ಸರ್ಕಾರ ಹೇಳಿದ ಮೇಲೆ ಈ ರೀತಿ ಮಾಡಲೇಬೇಕು. ನಾನು ಆಗಲೇ ಹೇಳಿದ್ದೇನೆ. ಸರ್ಕಾರವಿದ್ದಾಗ ಹೇಳುತ್ತಾರೆ. ಸರ್ಕಾರದ ಹಿಂದಿರುತ್ತೇವೆ ಏನು ಬೇಕಾದರೂ ಮಾಡುವುದಕ್ಕೆ ತಯಾರಾಗಿದ್ದೇವೆ.

ಕಾವೇರಿ ಹಿತರಕ್ಷಣೆಯ ಜವಾಬ್ದಾರಿ ಅವರದು. ನಮ್ಮ ಜವಾಬ್ದಾರಿ ಸ್ವಲ್ಪವಿರಬಹುದು. ಆದರೆ ಹೆಚ್ಚಿನ ಜವಾಬ್ದಾರಿ ಅವರದು. ಈಗ ಮುಖ್ಯಮಂತ್ರಿಗಳು ಸುಪ್ರೀಂಕೋರ್ಟ್ ಜಡ್ಜಮೆಂಟ್‌ಯೆಂದು ಹೇಳಿದರು. ಅದಕ್ಕೆ ನಾನು ಹೇಳಿದೆ ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್ ಏನು ಇದೆ. ಅದನ್ನು ಸರ್ಕ್ಯುಲೇಟ್ ಮಾಡಿ.ಸುಪ್ರೀಂಕೋರ್ಟ್‌ನಲ್ಲಿ ಏನು ನಡೆಯಿತು ಎಂಬುದು ನಮಗೆ ಗೊತ್ತಾಗಬೇಕು. ಅದನ್ನು ಇಟ್ಟರೆ ನಮಗೆ ಗೊತ್ತಾಗುತ್ತದೆ. ಸುಪ್ರೀಂಕೋರ್ಟಿನ ಜಡ್ಜಮೆಂಟ್‌ನಲ್ಲಿ ಅಕ್ಯುಸಸ್ ಇಲ್ಲವೆಂದು ಹೇಳುವ ಹಾಗೆ ಇಲ್ಲ. ಆದರೆ ಸುಪ್ರೀಂ ಕೋರ್ಟಿನಲ್ಲಿ ಅಕ್ಯುಸಸ್ ಬಗ್ಗೆ ಏನು ಹೇಳಿದ್ದಾರೆ ಗೊತ್ತಾ? ನನ್ನ ಹತ್ತಿರ ಪೇಪರ್ಸ್ ಕಟಿಂಗ್ಸ್ ಇದೆ ಅದನ್ನು ನಾನು ಈಗ ತಂದಿಲ್ಲ. ಅಕ್ಯುಸಸ್ ಬಗ್ಗೆ ಹೇಳಿದ್ದಾರೆ, ಸುಪ್ರೀಂಕೋರ್ಟಿನವರು ನಮ್ಮ ಮೇಲೆ ಗೂಬೆ ಕೂರಿಸುವುದಕ್ಕೆ ಕೇಸಸ್ ಹಾಕಿದ್ದಾರೆ ಕರ್ನಾಟಕ ಸರ್ಕಾರದವರು they are not serious about the cases.

ಪೇಪರ್ಸ್ ಕಟಿಂಗ್ಸ್ ತಂದು ನಿಮ್ಮ ಕಡೆ ಕೊಡುತ್ತೇನೆ. ನೀವುಓದಿ. ಆದರೆ ಸುಪ್ರೀಂ ಕೋರ್ಟ್‌ನಲ್ಲಿ ಏನು ಮಾಡುತ್ತಾರೆ ಅದು ನನಗೆ ಗೊತ್ತಿಲ್ಲ. ಅಲ್ಲಿಂದ 28ಕ್ಕೆ ಟ್ರಿಬ್ಯುನಲ್ ಇದೆ ಟ್ರಿಬ್ಯುನಲ್‌ನವರು ಏನು ಮಾಡುತ್ತಾರೋ ನನಗೆ ಗೊತ್ತಿಲ್ಲ. ಆದ್ದರಿಂದ ನಾನು ಕೇಳುತ್ತೇನೆ. ಟ್ರಿಬ್ಯುನಲ್ ಬಗ್ಗೆ ಒಂದು ಶಬ್ದವಾದರೂ ಈ ಸದನದಲ್ಲಿ ಪಾಸ್ ಮಾಡಿದ್ದುದು ಇಲ್ಲ. ಒಂದು ರೆಸಲ್ಯೂಷನ್ ಅನ್ನು ಸಹ ಪಾಸ್ ಮಾಡಲಿಲ್ಲ. On the other hand we have tried our best to rub the Tribunal ಇಂಟರ್ ಸ್ಟೇಟ್ ಟ್ರಿಬ್ಯುನಲ್ ವಾಟರ್ ಆಕ್ಟ್‌ನಲ್ಲಿ ವಾಟರ್ ಅಲೋಕೇಷನ್ ಮಾಡುವ ಜವಾಬ್ದಾರಿ ಬರೀ ಟ್ರಿಬ್ಯುನಲ್ ಇದೆ. ಕೇಂದ್ರಸರ್ಕಾರಕ್ಕೆ ಜವಾಬ್ದಾರಿಯಿಲ್ಲ. ಮತ್ತು ಸುಪ್ರೀಂಕೋರ್ಟಿಗೆ ಜವಾಬ್ದಾರಿ ಇಲ್ಲ. ಕೇಂದ್ರ ಸರ್ಕಾರಕ್ಕೆ ಕಾವೇರಿಯಲ್ಲಿ ಇಷ್ಟು ಟಿಎಂಸಿ ನೀರು ಕೊಡಬೇಕೆಂದು ಹೇಳುವ ಜವಾಬ್ದಾರಿ ಇದೆ. ಜವಾಬ್ದಾರಿ ಕೇವಲ ಆ ಟ್ರಿಬ್ಯುನಲ್‌ಗೆ ಇದೆ. ಅದನ್ನು ನೀವು ನೋಡಿಕೊಂಡು ಆಕ್ಟ್ ನೋಡಿಕೊಂಡು ಒಂದು ವಿಚಾರವನ್ನು ಟ್ರಿಬ್ಯುನಲ್‌ಗೆ ಬರೆದಿದ್ದೀರಾ? ಅದಕ್ಕೆ ನಾನು ಹೇಳಿದ್ದೇನೆ. ನೀವು ಮೊದಲಿಂದಲೂ ಟ್ರಿಬ್ಯುನಲ್ ಅನ್ನು ರಬ್ ಮಾಡಿಕೊಂಡು ಬಂದಿದ್ದೀರಿ. ಅದರಿಂದ ನಮ್ಮ ಗತಿ ಈ ಸ್ಥಿತಿಗೆ ಬಂದಿದೆ. ನಾವು ರಬ್ ಮಾಡಬಹುದು. ಅದರಿಂದ ವೈಯಕ್ತಿಕವಾಗಿ ನಮಗೇನೂ ಇಲ್ಲ. What about those people who are in the Cauvery belt area and what about those people are also inthis House?

ಯಾವರೀತಿ ಸೇಪ್ ಗಾರ್ಡ್ ಮಾಡಿದ್ದೀರಿ. ಅದನ್ನು ನೀವು ಹೇಳಿ. ಟ್ರಿಬ್ಯುನಲ್ ಏನೆಂದರೆ ವಾಟರ್ ಡಿಸ್‌ಪ್ಯೂಟ್‌ಗೆ ಅವರು ನಿರ್ಣಯ ಮಾಡಿಕೊಂಡು ಕೇಂದ್ರಸರ್ಕಾರದವರು ಒಪ್ಪಿಸಿದ್ದಾರೆ. ಆಗ ನಾನು ಇವರಿಗೆ ಕರೆದುಕೊಂಡು ಹೋಗಿದ್ದೇನೆ. ಅನೇಕ ವಿರೋಧ ಪಕ್ಷದ ನಾಯಕರುಗಳನ್ನು ದೆಹಲಿಗೆ ಕರೆದುಕೊಂಡು ಹೋಗಿದ್ದೇನೆ. ಆಗ ಹೇಳಿದೆ ನಾನು, ನಿಮ್ಮ ಪ್ರಧಾನಮಂತ್ರಿಗಳು ತಮಿಳು ನಾಡಿನ ಮುಖ್ಯಮಂತ್ರಿಗಳನ್ನು ಪ್ಲೀಸ್ ಮಾಡುವುದಕ್ಕೆ ಇದನ್ನು ಟ್ರಿಬ್ಯುನಲ್‌ಗೆ ರೆಫರ್ ಮಾಡುತ್ತಿದ್ದಾರೆಂದು Iam not afraidof the Tribunal but the case is not fit enough to go before the Tribunal. Therefore, we asked not to rrefer this matter to the Tribunal.

ಮರುದಿವಸ ಹೋಗಿ ಏನು ಮಾಡಿದರು. ಸುಪ್ರೀಂಕೋರ್ಟ್‌ನವರು ಹೇಳಿದರು. ನೀವೇನು ಮುಂದೆಪ್ರಯತ್ನ ಮಾಡುವ ಹಾಗೆ ಇಲ್ಲ ನಾವೇನು ಡೈರೆಕ್ಷನ್

ಕೊಡುತ್ತೇವೆ. ಆ ಪ್ರಕಾರ ಕೊಡಬೇಕೆಂದು ಹೇಳಿದರು. ನಿಮಗೆ ಹೇಳುತ್ತೇನೆ, ನಮ್ಮಲ್ಲಿ ಪೇಪರ್ ಕಟಿಂಗ್ಸ್ ಇದೆ. ಇದು ಯಾರೂ ಹೇಳುವ ಹಾಗೆ ಇಲ್ಲ, ನಾವು ಕೂಡ ಸ್ಪಷ್ಟವಾಗಿ ಹೇಳಿದ್ದೇವೆ. ನೀವು ಸ್ಪಷ್ಟವಾಗಿ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಆವೊತ್ತು ಕೂಡ ಮೇ ನಾಲ್ಕನೇ ತಾರೀಖು ಸುಪ್ರೀಂಕೋರ್ಟ್‌ನವರು ಡೈರೆಕ್ಷನ್ ಕೊಟ್ಟರು. ಕಾರಣ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಮನ್ನಣೆ ಮಾಡಿ ಸರ್ಕಾರ ಜೂನ್ 2ನೇ ತಾರೀಖು ಟ್ರಿಬ್ಯುನಲ್ ರಚನೆ ಮಾಡಿತು. ಈಗ ತಾವೇನು ಹೇಳುತ್ತಾ ಇದ್ದೀರಿ ಸುಪ್ರೀಂಕೋರ್ಟ್‌ನವರು ಆದೇಶ ಕೊಟ್ಟಿದ್ದಾರೆಂದು ಅದೇ ಆದೇಶದ ಮೇಲೆ ಆಗ ಇದ್ದ ವಿ.ಪಿ. ಸಿಂಗ್‌ರವರ ಸರ್ಕಾರ ಟ್ರಿಬ್ಯುನಲ್ ರಚನೆ ಮಾಡಿದೆ.

ಶ್ರೀ ವೀರೇಂದ ್ರಪಾಟೀಲ್ : ಅಲ್ಲ, ಸುಪ್ರೀಂಕೋರ್ಟ್‌ಗೆ ಹೋಗಿಯೆಂದು ಗೌರ್ನಮೆಂಟ್ ಆಫ್ ಇಂಡಿಯಾದವರು ಹೇಳಿದ್ದಾರೆ. We are not prepared to negotiate.

ಶ್ರೀ ಡಿ.ಬಿ. ಚಂದ್ರೇಗೌಡ : ಇಲ್ಲ. ತಾವೇ ಮುಖ್ಯಮಂತ್ರಿಗಳಾಗಿದ್ದಾಗ, ನಾವೆಲ್ಲ ನಿಮ್ಮ ಜೊತೆಯಲ್ಲಿ ಹೋಗಿ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದ್ದೇವೆ. ಸಂಬಂಧಪಟ್ಟ ನೀರಾವರಿ ಮಂತ್ರಿಗಳನ್ನು ಭೇಟಿ ಮಾಡಿದ್ದೇವೆ. ಅಡಿಷನಲ್ ಸಾಲಿಸೀಟರ್ ಅವರನ್ನು ಬದಲಾವಣೆ ಮಾಡಬೇಕೆಂದು ಹೇಳಿದರು, ಅದನ್ನು ಬದಲಾವಣೆ ಮಾಡಿಕೊಟ್ಟರು.

ಇಷ್ಟಾದರೂ ಅಡಿಷಲ್ ಸಾಲಿಸಿಟರ್ ಜನರಲ್ ಅವರು ತಮಿಳುನಾಡಿನವರು ಇದ್ದರು, ಅವರನ್ನು ಬದಲಾವಣೆ ಮಾಡಬೇಕೆಂದು ಒತ್ತಾಯ ತಂದಿದ್ದನ್ನು ತಮ್ಮ ನೆನಪಿಗೆ ಹೇಳುತ್ತಾ ಇದ್ದೇನೆ. 27ಕ್ಕೆ........

ಶ್ರೀ ವೀರೇಂದ್ರ ಪಾಟೀಲ್ : ನೀವು ಹೇಳಿ ಬೇಕಾದರೆ........

ಶ್ರೀ ಡಿ.ಬಿ. ಚಂದ್ರೇಗೌಡ : ಸುಪ್ರೀಂ ಕೋರ್ಟಿನಿಂದ ಎರಡು ಡೈರೆಕ್ಷನ್ಸ್ ಇತ್ತು ಮೇ 4ನೇ ತಾರೀಖಿನ ಜಡ್ಜಮೆಂಟ್‌ನಲ್ಲಿ ಎರಡು ಡೈರೆಕ್ಷನ್ಸ್. No. 1 The central Govt. is directed to constitute theTribunal and No. 2 They have to constitute the Tribunal with in 30 days from the date of pronouncement of the Judgement.

ಶ್ರೀ ವೀರೇಂದ್ರ ಪಾಟೀಲ್ : ಯಾರು ಕೊಟ್ಟರು?

ಶ್ರೀ ಡಿ.ಬಿ. ಚಂದ್ರೇಗೌಡ : ಸುಪ್ರೀಂ ಕೋರ್ಟಿನವರು ಕೊಟ್ಟರು. ಆಗ ನೀವು ಮುಖ್ಯಮಂತ್ರಿಯಾಗಿದ್ದೀರಿ.

(ಗೊಂದಲ)

ಶ್ರೀ ವೀರೇಂದ್ರ ಪಾಟೀಲ್ : ಸುಪ್ರೀಂ ಕೋರ್ಟಿಗೆ ಗವರ್ನಮೆಂಟ್ ಆಫ್ ಇಂಡಿಯಾದವರು ಏನು ಹೇಳಿದ್ದಾರೆ? ನಾವು ನೆಗೋಷಿಯೇಟ್ ಮಾಡಕ್ಕಿಲ್ಲ, ನೀವು ಏನು ಡೈರೆಕ್ಷನ್ ಕೊಡುತ್ತೀರಿ, ನಾವು ಅದನ್ನು ಪಾಲನೆ ಮಾಡುತ್ತೇವೆ ಎಂದು ಬಹುಶಃ ಇದು ಚಂದ್ರೇಗೌಡರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಅದಕ್ಕೇ ಅವರು ಮಾತನಾಡುತ್ತಿದ್ದಾರೆ. ಇದನ್ನು ಹೇಳಬೇಕಾದ ಅವಶ್ಯಕತೆ ಇದೆ. ಅವರು ಹೇಳ್ತಾ ಇದಾರಲ್ಲ, The case is not right for referring to the Tribunal.

Wait for some time. The supreme Court they don't want to negotiate further.....

ಶ್ರೀ ಎಸ್. ಬಂಗಾರಪ್ಪ : ಸೆಂಟ್ರಲ್ ಗೌರ್ನಮೆಂಟ್‌ನವರು ಆ ರೀತಿ ಹೇಳಿದ್ರುಂತಲ್ಲ. ಅಷ್ಟೇ ಅಲ್ಲ ರೆಫರ್ ಮಾಡಿದಂಥ ಕಾಲದಲ್ಲಿ....

(ಗೊಂದಲ)

ಶ್ರೀ ಎಸ್.ಬಂಗಾರಪ್ಪ : ನಮ್ಮ ಕೇಸನ್ನು ಕೂಡ ಸುಪ್ರೀಂ ಕೋರ್ಟಿನಲ್ಲಿ ನಡೆಸಿದ್ದೇವೆ. ಆವಾಗ ತಾವೇ ಚೀಫ್ ಮಿನಿಸ್ಟರ್ ಕೂಡ ಆಗಿದ್ದಿರಿ. ಇಷ್ಟಾದರೂ ನಮ್ಮ ಕೇಸ್ ಫೇಲ್ ಆದವು ಆ ಪ್ರೊಸಿಡಿಂಗ್ಸ್‌ಗೆ ಕೇರಳ ಮತ್ತು ನಾವೆಲ್ಲ ಪಾರ್ಟಿಗಳಾಗಿದ್ದೆವು ಒಂದೊಂದು ಸಾರಿ ಕೇಸ್ ಗೆಲ್ಲುತ್ತೇವೆ. ಒಂದೊಂದು ಸಾರಿ ಕೇಸುಗಳನ್ನು ಸೋಲುತ್ತೇವೆ. ಕೆಲವು ಸಾರಿ ಹಾಗೆ ಆಗುತ್ತದೆ. ಆಗ ಏನೂ ಮಾಡುವುದಕ್ಕೆ ಆಗುವುದಿಲ್ಲ. ಕಾನೂನು ವಿಚಾರ ಬಂದಾಗ ಎರಡೂ ಫಲಿತಾಂಶಗಳನ್ನು ಆ ರೀತಿ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್ : ನಾನು ಹೇಳಿದ್ದನ್ನು ಮುಖ್ಯಮಂತ್ರಿಗಳು ತಿಳಿದು ಕೊಂಡಹಾಗೆ ಕಾಣುತ್ತಿಲ್ಲ, ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ ಕೇಸು ಕಾನೂನು ಪ್ರಕಾರ ಇಂಟರ್ ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ To refer the the matter to tribunal If they opine that this particular dispute connot be decided by negotiation ....

ಆವಾಗ ಅವರು ಏನು ಮಾಡಿದರು ಎಂದರೆ ಸುಪ್ರೀಂ ಕೋರ್ಟಿಗೆ ಒಂದು ಅಫಿಡವಿಟ್ ಕೊಟ್ಟರು. ಏನು ಎಂದರೆ ಇಲ್ಲ... We do not want further negotiation we will decide. we will go by your direction.

ಎಂದು ಬೇಕಾದರೆ ನನ್ನ ಹತ್ತಿರ ಕಟಿಂಗ್ಸ್ ಇದೆ. ಗವರ್ನಮೆಂಟ್ ಆಫ್ ಇಂಡಿಯಾದವರು ಸುಪ್ರೀಂ ಕೋರ್ಟಿಗೆ ಅಫಿಡವಿಟ್ ಕೊಟ್ಟಿದ್ದಾರೆ. ಈ ರೀತಿ ಅಂಡರ್ ಟೇಕಿಂಗ್ ಕೊಟ್ಟಿದ್ದಾರೆ ಎನ್ನುವುದು ಪೇಪರ್‌ನಲ್ಲಿ ಬಂದಿದೆ. ನಾನು ಹೇಳುವುದಾದರೂ ಏನು ಎಂದರೆ, ರಿವ್ಯೂ ಪಿಟಿಶನ್‌ಗೆ ಸ್ಕೋಪ್ ಇಲ್ಲ, ನಾನು ನಿಮಗೆ ಹೇಳುತ್ತೇನೆ. ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಆಕ್ಟ್‌ನಲ್ಲಿ ರಿವ್ಯೂ ಪಿಟಿಶನ್ ಎನ್ನತಕ್ಕಂಥ ಪದ ಉಪಯೋಗ ಮಾಡಿಲ್ಲ, ಅವರು ಏನು ಹೇಳಿದ್ದಾರೆ ಎಂದರೆ.......

ಶ್ರೀ ಎಂ. ನಾರಾಯಣಸ್ವಾಮಿ : ನನ್ನದು ಪಾಯಿಂಟ್ ಅಫ್ ಆರ್ಡರ್ ಇದೆ. ಈಗ ಮೆರಿಟ್ ಡಿಮೆರಿಟ್ ಬಗ್ಗೆ ಚರ್ಚೆ ಮಾಡತಕ್ಕಂಥ ಅವಧಿ ಮುಗಿದುಹೋಗಿದೆ. ನಮ್ಮ ನಾಯಕರಾದ ಹೆಗಡೆಯವರು ಹೇಳಿದ ರೀತಿಯಲ್ಲಿ 29ನೇ ತಾರೀಖು ಟ್ರಿಬ್ಯುನಲ್ ಇರುವುದರಿಂದ ಈಗ ಚರ್ಚೆ ಮಾಡುವುದರಿಂದ ಪ್ರಯೋಜನ ಇಲ್ಲ, ಶ್ರೀ ವೀರೇಂದ್ರ ಪಾಟೀಲರ ಹಠಮಾರಿತನದಿಂದ ಈ ಪರಿಸ್ಥಿತಿಗೆ ರಾಜ್ಯ ಬಂದುಮುಟ್ಟಿದೆ. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಕಾರಣ ಏನೆಂದರೆ....

ಅಧ್ಯಕ್ಷರು : ಇದು ಪಾಯಿಂಟ್ ಆಫ್ ಆರ್ಡರ್ ಹೇಗೆ ಆಗುತ್ತದೆ?

6.45. ಪಿ.ಎಂ.

ಈಗ ಈ ಸಭೆಯಲ್ಲಿ ಹೆಚ್ಚಾಗಿ ಮಾತನಾಡುವುದು ಬೇಡ ಎಂದು ಹೇಳುತ್ತಿದ್ದೇನೆ.

Sir D.B. Chandregowda : Sir, I have a point of order, The Case is pending before theTribunal for adjudication and the matter is slated for final judgement on Review petition on 29th of this month. At this point, there is no scope for Review petition. If it goes for records. are we trying to argue the case before the Tribunal here and opine that the Tribunal has no jurisdiction, It amounts to the judicial interference. May Irequest the Hon. Leader of the House to consider this question? I seek your guidance also in this matter.

ಶ್ರೀ ವೀರೇಂದ್ರ ಪಾಟೀಲ್ : ನಾನು ಹೇಳಿದ್ದು ಆ ವಿಚಾರ ಅಲ್ಲ. ಆಕ್ಟ್ ಏನಿದೆ ಅದನ್ನು ನಾನು ಹೇಳಿದ್ದೇನೆ. ಬೇಕಾದರೆ, ನೀವು ಆಕ್ಟ್ ತರಿಸಿ ನೋಡಿ. ಓದಿದರೆ ಗೊತ್ತಾಗುತ್ತದೆ.

ಶ್ರೀ ಡಿ. ಬಿ.ಚಂದ್ರೇಗೌಡ : ಹಿಂದೆ ಶಾಸನ ಮಾಡಿದಾಗ, ನಾವು ನಗೆಪಾಟಲಿಗೆ ಗುರಿ ಆದೆವು ಎಂದು ಹೇಳಿದಿರಿ. At that point of time, under schedule 7 of the list of the Constiution, Entry -17 we are well within the legislative competence of issue an ordinance.We may be right or worng, but we are well with in the competence of legislation you are saying that it is wrong. Howver. it is a debatable point. I donot want to go into the merits of the case since the matter is before the Tribunal and slated for final judgement on 29 th of this month.

ನಾವು ಆ ಕಾರಣಕ್ಕಾಗಿ, ಇವತ್ತು ಚರ್ಚೆ ಮಾಡುವುದು ಬೇಡವೆಂದು ಹೇಳಿ, ಸೂಕ್ಷ್ಮವಾಗಿ ತಮ್ಮ ಗಮನಕ್ಕೆ ತಂದೆ. ಬಿಸಿನೆಸ್ ಅಡ್ವೈಸರಿಕಮಿಟಿಯಲ್ಲೂ ಕೂಡ, ಇದನ್ನು ಪ್ರತ್ಯೇಕವಾಗಿ ಚರ್ಚೆ ಮಾಡೋಣ, ಕಾವೇರಿಯನ್ನೇ ಒಂದು ಇಷ್ಯೂ ಆಗಿ ಚರ್ಚೆ ಮಾಡೋಣ ಎಂದು ಹೇಳಿದೆ.ಇದನ್ನು ಈ ಭಾಷಣದಲ್ಲಿ ಸೇರಿಸಿದರೆ, ಎಷ್ಟು ಎತ್ತರಕ್ಕೆ ಎತ್ತಿಕೊಂಡು ಹೋಗಬಹುದೋ, ರಾಷ್ಟ್ರೀಯವಾಗಿ ಅಷ್ಟು ಎತ್ತರ ಇರುವುದಿಲ್ಲ, ಅದಕ್ಕಾಗಿ ಪ್ರತ್ಯೇಕವಾಗಿ ಚರ್ಚೆ ಮಾಡೋಣ ಎನ್ನತಕ್ಕ ನಿರ್ಣಯಕ್ಕೆ ಬಂದು ಪ್ರಸ್ತಾಪ ಮಾಡಲಿಲ್ಲ ಎಂಬ ಮಾತನ್ನು ಹೇಳಿದೆ.ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ಕೇಸ್ ಕೋರ್ಟಿನಲ್ಲಿರುವಾಗ ಕೋರ್ಟಿಗೆ ಅಧಿಕಾರ ಇಲ್ಲ ಎಂದು ತಮ್ಮಂಥ ಹಿರಿಯರು, ಮಾಜಿ ಮುಖ್ಯಮಂತ್ರಿಗಳು ಹೇಳಿದರೆ, ಇದರ ಪರಿಣಾಮ ಏನು ಎಂಬುದನ್ನು ತಮ್ಮ ಅಭಿಪ್ರಾಯಕ್ಕೇ ಬಿಡುತ್ತೇನೆ. ಅದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್ : ನಾನು ಹೇಳಿದ್ದು, ಅವರಿಗೆ ಅರ್ಥವಾಗಲಿಲ್ಲವೆಂದು ಅನಿಸುತ್ತದೆ. ನನ್ನ ಒಪೀನಿಯನ್ ಹೇಳಲಿಲ್ಲ. ಆಕ್ಟ್‌ನಲ್ಲಿ ಏನಿದೆ ಅದನ್ನು ಹೇಳಿದೆ, ಬೇಕಾದರೆ ಆಕ್ಟ್ ತರಿಸಿ ಓದಿನೋಡಿ. ನಮ್ಮ ಲಾಯರ್ಸ್ ರಿವ್ಯೂ ಪಿಟಿಷನ್ ಎಂದುಹಾಕಿರಲಿಲ್ಲ. ಅಥವಾ ಅದಕ್ಕೆ ರಿವ್ಯೂ ಪಿಟಿಷನ್ ಎಂದು ಹೇಳಿರಲಿಕ್ಕಿಲ್ಲ. ... ಸ್ಟೇಟ್‌ರಿವರ್ ವಾಟರ್ ಡಿಸ್‌ಪ್ಯೂಟ್

ಆಕ್ಟನ್ನು ತಾವು ತರಿಸಿ ಓದಿ ನೋಡಿ ರಿವ್ಯೂ ಪಿಟಿಷನ್ ಹಾಕುವುದಕ್ಕೆ ಸ್ಕೋಪ್ ಇಲ್ಲ ನಾನು ಹೇಳುವುದೇನೆಂದರೆ ನಮ್ಮ ಲಾಯರ್ಸ್ ರಿವ್ಯೂಎನ್ನುವ ಪದ ಉಪಯೋಗ ಮಾಡಿರಲಿಕ್ಕಿಲ್ಲವೆಂದು ನನಗನಿಸುತ್ತದೆ. ಏಕೆಂದರೆ ಕಾನೂನನ್ನು ನೋಡಿರುತ್ತಾರೆ. ಕಾನೂನಿನಲ್ಲಿ ರಿವ್ಯೂ ಪಿಟಿಷನ್ ಹಾಕುವುದಕ್ಕೆ ಸ್ಕೋಪ್‌ಇಲ್ಲ.

Mr. Speaker :The fact remains that theTribunal is hearing further arguments on behalf of the state of Karnataka on 29th of this month. There fore, the arguments are yet to be concluded and a particular Act can be interpreted

ಏಕೆಂದರೆ ಲಾಯರ್ಸ್ ಪರಾನೂ ಹೇಳುತ್ತಾರೆ. ವಿರೋಧಾನೂ ಹೇಳುತ್ತಾರೆ.

Sri Veerendra Patil : I am not giving my opinion. I just mentioned whatever is in the Act.

Sri D.B. Chandregowa : Iseek your guidance. If we discuss other matters, it becomes subjudice.

Mr. Speaker : It is not Mr. Veerendra patil's case that we have no case at all.

Sri Veerendra patil : I did not say so.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ವೀರೇಂದ್ರ ಪಾಟೀಲರು ಮಾತನಾಡತಕ್ಕ ಕಾಲದಲ್ಲಿ ಇಂಟರ್ ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಆಕ್ಟನಲ್ಲಿ ರಿವ್ಯೂಮಾಡುವುದಕ್ಕೆ ಪ್ರಾವಿಷನ್ ಇಲ್ಲವೆಂದು ಹೇಳುತ್ತಾರೆ. ಈ ಮಾತನ್ನು ಹೇಳುವಾಗ,ಇಲ್ಲಿ ಇನ್ ಫರೆನ್ಸ್ ಏನಿದೆ ಜೂರಿಸ್‌ಡಿಕ್ಷನ್ ಪವರ್ ಇಲ್ಲವೆಂದು, ಅಂತಹ ಕಡೆ ಕ್ರಿಟಿಸೈಸ್ ಮಾಡಿದ ಹಾಗೆ ಆಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್ : ನಮ್ಮ ಲಾಯರ್ಸ್ ರಿವ್ಯೂ ಎನ್ನುವ ಪದ ಉಪಯೋಗ ಮಾಡಿರಲಿಕ್ಕಿಲ್ಲ. ಎಂದು ನಾನು ಹೇಳುತ್ತೇನೆ. ಅದಕ್ಕೆ ಬೇಕಾದರೆ ಮಾನ್ಯ ಮಂತ್ರಿಗಳು ಇದ್ದಾರೆ. ಅವರು ಹೇಳಲಿ, ನನ್ನ ವಿಚಾರ ನಾನು ಹೇಳುತ್ತೇನೆ. ರಿವ್ಯೂಗೆ ಸ್ಕೋಪ್ ಇಲ್ಲ ಎಂದು ನಾನು ಹೇಳಲಿಲ್ಲ. ಇದನ್ನು ಒಪ್ಪುವುದಕ್ಕೆ ಸಾಧ್ಯ ಇಲ್ಲ ಎಂದೂ ನಾನು ಹೇಳಿಲ್ಲ.

ಅಧ್ಯಕ್ಷರು : ಹೇಳಿಲ್ಲ ಎಂದು ಹೇಳುತ್ತಿದ್ದಾರಲ್ಲ.

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಮಂತ್ರಿಗಳು ಇಲ್ಲೇ ಇದ್ದಾರೆ, ಅವರು ಸಭೆಗೆ ಹೇಳಲಿ, ಏನು ಪಿಟಿಷನ್ ಹಾಕಿದ್ದಾರೆ. ಆ ಪಿಟಿಷನ್‌ನ್ನು ಏನೆಂದು ನಂಬರ್ ಮಾಡಿರುತ್ತಾರೆ. Whether it is numbered as Review petitionor ಏನೆಂದು ಮಾಡಿರುತ್ತಾರೆ. ಅದನ್ನಾದರೂ ಹೇಳಲಿ. ಗೊತ್ತಿಲ್ಲ ಎಂದು ಹೇಳುವಾಗ ಅದನ್ನು ತಿಳಿದುಕೊಳ್ಳುವುದರಲ್ಲಿ ತಪ್ಪೇನಾಗುತ್ತದೆ.

Sri M. Rajashekara Murthy: I would like to clarify the situation. In the Inter state River water Disputes Act under Section5, the word 'review'is not mentioned. What has been stated there is either the stateGovernment

or the Central Government may call for explanation or detail from the Tribunal. The Tribunal may revise their orders. That is what has been stated.Mr.Veerendra patil did not say that the Review petition not maintainable. He did not say that. He only said.

Shri Kagodu Thimmappa : What is the inference then?

Shri M. Rajashekhara Murthy : He only said, the word Review petition is not there.

Mr. Speaker : Mr. Kogodu Thimmappa, let us not get excited about it.

ಶ್ರೀ ಕಾಗೋಡು ತಿಮ್ಮಪ್ಪ : ನಾವು ಅಷ್ಟು ದಡ್ಡರೇನೂ ಅಲ್ಲ, ತಾವು ಹೇಳಿದ ಮಾತನ್ನು ಅರ್ಥಮಾಡಿಕೊಳ್ಳುವುದಕ್ಕೆ ಆಗದಿರುವಷ್ಟು ದಡ್ಡರಲ್ಲ ನಾವು.

ಅಧ್ಯಕ್ಷರು : ನಿಮಗಿಂತ ಬುದ್ಧಿವಂತರು ನನಗೆ ಸಿಕ್ಕಿಲ್ಲ, ಅದು ಬೇರೆ ವಿಚಾರ

Mr. Speaker : I am trying to help the situation.I am sure you will kindly appreciate my gesture. Shri Rajashekhara Murthy has also come to our rescue. Shri Veerendra patil was making out facts. He was quoting verbatim what section 5 of the Interr state River water Disputes Act says. That is all. was passed by the Tribunal cannot be reviewed.He has said it. So, let us leave it at that.

Sir.D.B.Chandregowda : My point is not clarified. My point was, at this point of time speaking about the law which is before the Tibunal for adjudiciation and the case is slated for 29 th, is it right on our part to question that? Does it not influence the judgement? If it is a case, is it not sub-judices? I want a considered opintion on this question from the chair.

Mr. Speaker : Let us hear the Parliamentary Affairs Minsiter.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ ಈಗ ಪ್ರಶ್ನೆ ಇರತಕ್ಕಂಥಾದ್ದು ಇಂಟರ್‌ಸ್ಟೇಟ್ ವಾಟರ್ ಡಿಸ್ಪೂಟ್ ಆಕ್ಟ್ ಸೆಕ್ಷನ್ 5 (3) ಪ್ರಕಾರ ಯಾವುದಾದರೂ ಕೇಂದ್ರ ಸರಕಾರ ಅಥವಾ ರಾಜ್ಯಸರಕಾರ ಯಾವ ಒಂದು ಆರ್ಡರ್ ಮಾಡಿರುತ್ತದೆ ಅದರ ಬಗ್ಗೆ ಟ್ರಿಬ್ಯೂನಲ್‌ನವರು ಹೇಳಿದ ಪ್ರಕಾರ ಕ್ಲಾರಿಫಿಕೇಷನ್ ಅಥವಾ ಮಾಡಿಫಿಕೇಷನ್ ಅಥವಾ revision, that amounts, ultimately which all put together, comes to a review of an order. Review can be interpreted clarification, modification or some interpretation of the order also. So that is pending. Not just for enquiry. Even with regard to maintainablity also that matter has not been settled yet. Even

on the maintainability of the State Government's petition under Section 5 (3) one part, and the merit, of it, both are pending before the Tribunal and listed for further argument on 28th. ಇಂತಹ ಸಂದರ್ಭದಲ್ಲಿ ಒಂದು ರಿವ್ಯೂ ಪಿಟೀಶನ್‌ಗೆ ಟೈಟಲ್ ಹಾಕದೆ ಇರಬಹುದು because the petition is under Section 5 (3). We may not say review but ultimately what is the net result? Either they will review it, review is a sum total of treminology used. Section 5 (3) may not specifically

ಶ್ರೀ ಕೆ.ಹೆಚ್. ರಂಗನಾಥ್ : ಅದು ರಿವ್ಯೂ ಪಿಟೀಶನ್ The only fact that was pressed here was the Section of the Act does not say review. That is all.

SHRI M.VEERAPPA MOILY : No Not necessary. It has not said. It is a review or revision or anything like this but the question is before the Supreme Court, it is there. Our petition for a review it is there. SLP is pending before the Supreme Court on the very same issue. Before the Tribunal under Section 5 (3) ultimate result is we are asking is for the modification ofthe order. We are asking for the interpretation of the order, we are asking for the review of the order. That is the gist of it. Clarification of the order, modification of the order also the review of the whole order. That is also there. Our prayer is there under section 5 (3). Under these circumstances. one message from this House by a most senior and most revered leader like Veerendra Patilji, if that kind of a message goes out, saying that since ther is no competence for the Tribunal to review......

(INTERRUPTIONS)

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಹೇಳಿಲ್ಲವೋ ಅದನ್ನು ಅವರ ಬಾಯಿಂದ ಹೇಳಿಸತಕ್ಕಂಥಾದಕ್ಕೆ ಪ್ರಯತ್ನ ತಾವು ಏತಕ್ಕೆ ಮಾಡುತ್ತೀರಿ?

SHRI M. VEERAPPA MOILY : ರಿವ್ಯೂಕೆ ಅವಕಾಶ ಇಲ್ಲ That he said.

MR. SPEAKER : At best it can be interpreted as some kind of a lacuna in the Parliamentary enactment itself.

SHRI. M VEERAPPA MOILY: that is another part of it. That is a question of interpretation. But according to us the Tribunal is fully, under Section 5 (3) of the Inter State River water Disputes Act, empowered to review to review its own order.

MR. SPEAKER : That is our case.

SHRI M. VEERAPPA MOILY : That is our case before the Tribunal.

ಈ ಸದನದಲ್ಲಿ ಅವಕಾಶ ಕೊಟ್ಟರೆ ಏನಾಗುತ್ತದೆಂದು ತಮಗೆ ಗೊತ್ತಿದೆ. ಒಂದು ವಿಚಾರ ನಾನು ತಮ್ಮ ಗಮನಕ್ಕೆ ತರುತ್ತೇನೆ ಈಗ ಮೊದಲನೆಯದಾಗಿ ಇಂಟೀರಿಯಂ ಆರ್ಡರ್ ಕೇಳಿದಾಗ the case of Tamilnadu failed before the Tribunal. It failed. All the four CMPs before the Tribunal were dismissed. They went in SLP before the Supreme Court. In between the dismissal of the four CMPs and the order of the Supreme Court, take out one sentence from any opposition party from Tamilnadu which criticised the advocates. It has not criticised the advocates appearing for Tamil Nadu or the Government or any leader. ಏಕೆಂದರೆ ಅವರಿಗೆ ಗೊತ್ತಿದೆ. ಒಗ್ಗಟ್ಟಾಗಿದ್ದರೆ ಮಾತ್ರ ಇದು ಸಾಧ್ಯ. But what is the kind of demonstration of unity we are making? I am not referring to today's debates. Just because we failed one time, we criticised the advocates, we criticised the Government. Does it serve anybody's politics? Why should we mix up politics in Cauvery? Let us leave it to our seniormost advocates. Mr. Justice E.S. Venkataramaiah is our advisor on the cauvery issue. If Justice E.S. Venkataramaiah could go wrong or Mr. Justice Ranganath Mishra could go right, is it a platform to discuss about it? Mr. Justice Ranganath Mishra succeeded Mr. Justice E.S. Venkataramaiah. If Tamil Nadu, even under the worst circumstances and even under most adverse circumstances, can unite, why not? And we are united. I am not just putting. We are united. Let us demonstrate it.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದುವರೆಗೂ ಒಂದೂ ಆಗಿಲ್ಲ ಎನ್ನುವಂಥ ಅಪಶಬ್ದ ಇಲ್ಲಿ ತೋರಿಸಿ? ಆದರೆ ಪ್ರಶ್ನೆ ಟ್ರಿಬ್ಯುನಲ್ ಇಂಟರೀಮ್ ಆರ್ಡರ್ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳಿದರೂ ಸಹಾ ಇಂಟರೀವರ್ ಆರ್ಡರ್ ಕೊಡಬಹುದೆಂದು ಹೇಳಲಾಗಿದೆ.

ಶ್ರೀ ಕೆ.ಹೆಚ್. ರಂಗನಾಥ್ : ಯಾರು ಅಂದಿದ್ದಾರೆ ಇಲ್ಲಿ? Show me a Member here in this House, who raised any objection? ಆಗಿದೆಯೇ ಇಲ್ಲಿ? ಆಗದೇ ಇರುವುದನ್ನು ಏಕೆ ಮಾತನಾಡುತ್ತಿದ್ದೀರಿ ತಾವು? It goes on record.

ವಿಷಯ ಏನು ಬಂತು? ಯಾರು ಅಂದಿದ್ದಾರೆ.? ವಿರೋಧ ಪಕ್ಷದವರೂ ಅನ್ನಲಿಲ್ಲ. ಈ ಪಕ್ಷದವರೂ ಅನ್ನಲಿಲ್ಲ. ಮತ್ತೆ ಏಕೆ ಮಾತು?

ಶ್ರೀ ಬಿ.ಎಸ್ ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇದುವರೆಗೂ ಕಾವೇರಿ ವಿವಾದದ ಬಗ್ಗೆ ಒಂದು ಅಪಶಬ್ದ ಎರಡೂ ಕಡೆಯಿಂದ ಯಾರೂ ಮಾತನಾಡಿಲ್ಲ. ಆದರೆ ಟ್ರಿಬ್ಯೂನಲ್ ಇಂಟರೀವರ್ ಆರ್ಡರ್ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳಿದಾಗ, ಸುಪ್ರೀಮ್ ಕೋರ್ಟ್ ಮುಂದೆ ಇಂಟರೀಮ್ ಆರ್ಡರ್ ಕೊಡಬಹುದೆಂದು ಅಪ್ಲಿಕೆಷನ್‌ನ್ನು ನಮ್ಮ ಸರ್ಕಾರದ ಅಡ್ವೋಕೇಟ್ ಮೂಲಕ ಹಾಕಿಸಲಾಯಿತು. ಆ ಮೂರ್ಖತೆಯ ತಪ್ಪಿನಿಂದ ಈ ಪರಿಸ್ಥಿತಿ ಒದಗಿ ಬಂದು. ಟ್ರಿಬ್ಯೂನಲ್‌ಗೆ ಇಂಟರೀಮ್ ಆರ್ಡರ್ ಕೊಡುವುದಕ್ಕೆ ಅಧಿಕಾರವಿಲ್ಲವೆಂದು ಸುಪ್ರೀಮ್ ಕೋರ್ಟ್ ಮುಂದೆ ತಮಿಳುನಾಡು ಹೋದಾಗ ವಾದ ಮಾಡುವಂಥ ಸಂದರ್ಭದಲ್ಲಿ ಕೊನೆಯ

ವಾದ ಮಾಡಿಕೊಂಡು ಬಂದಂಥ ನಮ್ಮ ಅಡ್ವೋಕೇಟ್ ನಮ್ಮ ಕೌನ್ಸಿಲ್ ಕೊನೆ ಘಳಿಗೆಯಲ್ಲಿ ಇಂಟರೀಮ್ ಆರ್ಡರ್ ಕೊಡುವುದಕ್ಕೆ ನಮ್ಮ ಅಬ್ಜೆಕ್ಷನ್ ಇಲ್ಲವೆಂದು ಅರ್ಜಿ ಹಾಕಿದ ಮೇಲೆ ಸುಪ್ರೀಮ್ ಕೋರ್ಟ್ ಬೇರೆ ದಾರಿ ಇಲ್ಲದೆ ಮತ್ತೆ ಟ್ರಿಬ್ಯುನಲ್‌ಗೆ ಕಳುಹಿಸಿಕೊಟ್ಟರು. ಆ ಮೂರ್ಖತೆಯ ಪರವಾವಧಿ ತಪ್ಪಿನಿಂದ ಇವತ್ತು ನಮ್ಮ ರಾಜ್ಯದಲ್ಲಿ ಕಣ್ಣೀರು ಹಾಕುವಂಥ ಸ್ಥಿತಿ ಬಂತು. ಕೊನೆಯ ಸ್ಥಿತಿವರೆಗೂ ನಿಮ್ಮನ್ನು ನಂಬಿಕೊಂಡು ಬಂದಿದ್ದೇವೆ. ಮುಖ್ಯ ಮಂತ್ರಿಗಳು ಹೇಳಿರುವುದು. ಸದನದ ಒಳಗೆ ಇರಬಹುದು ಅಥವಾ ಹೊರಗಡೆ ಇರಬಹುದು ನಮ್ಮ ಜೊತೆ ಚರ್ಚೆಯಾದಾಗ ನೀವು ತೆಗೆದುಕೊಂಡಂಥ ತೀರ್ಮಾನಕ್ಕೆ ನಾವು ಎಂದಾದರೂ ವಿರೋಧವಾಗಿ ನಡೆದುಕೊಂಡಿದ್ದೇವೇನೂ? ಇರದ ಪರಿಣಾಮ ಇವತ್ತು ಈ ಸ್ಥಿತಿಗೆ ಬಂತು. ಅದಕ್ಕೋಸ್ಕರ ನಾನು ಹೇಳುತ್ತಿರುವುದು, ಮಾನ್ಯ ವೀರಪ್ಪಮೊಯಿಲಿಯವರು ಏತಕ್ಕೋಸ್ಕರ ಆ ಮಾತನ್ನು ಹೇಳಿದರೋ ಯಾರ ಮೇಲೆ ಕುರಿತು ಮಾತನಾಡಿದರೋ ಗೊತ್ತಿಲ್ಲ, ದಯಮಾಡಿ ವಿರೋಧ ಪಕ್ಷದವರ ಮೇಲೂ ಈ ತರಹ ಮಾತನಾಡುವುದು ಸರಿಯಲ್ಲ ಎನ್ನುವುದನ್ನು ಮಾತ್ರ ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಬೇಸಿಕ್ ಕೊಶ್ಚನ್‌ನ್ನು ತಮ್ಮ ಗಮನಕ್ಕೆ ತಂದಿದ್ದೇವೆ. I will leave it to your wisdom to decide.

ಶ್ರೀ ಆರ್. ದಯಾನಂದರಾವ್ : ನಿಮ್ಮ ಕಾಲದಲ್ಲಿ ಹೆಗಡೆಯವರು ಮಾಡಿಲ್ಲವೇ?

ಅಧ್ಯಕ್ಷರು : ದಯಾನಂದ ರಾವ್ ನಿಮ್ಮನ್ನು ಕರೆಯುತ್ತೇನೆ ಆಮೇಲೆ ಕೊನೆಯಲ್ಲಿ ಇಂಟರ್ ಸ್ಟೇಟ್ ರಿವರ್ ಆಕ್ಟ್ ತರಿಸಿಕೊಳ್ಳಿ ನೀವು. ದಯಾನಂದರಾವ್, ಲೈಬ್ರರಿಯಿಂದ ಕಾಪಿ ತರಿಸಿಕೊಂಡು ಓದಿ. ಆಮೇಲೆ ಕರೆಯುತ್ತೇನೆ ನಿಮ್ಮನ್ನು.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ವಿಷಯದ ಸೂಕ್ಷ್ಮತೆಯನ್ನು ಗಮನಿಸಿ, ಈ ಸೂಕ್ಷ್ಮ ಸಂದರ್ಭದಲ್ಲಿ ಈ ಚರ್ಚೆ ನಮ್ಮ ರೈತರಿಗೆ ಹಿತ ಆಗುವಂತಿದ್ದರೆ ಎಷ್ಟಾದರೂ ಮಾತನಾಡೋಣ. ನಾವು ಎಷ್ಟು ಹೊತ್ತು ಕೂರುವುದಕ್ಕೆ ಸಿದ್ಧವಿದ್ದೇವೆ. ಮುಂದಕ್ಕೆ ಹೋಗಬೇಕು ಇವತ್ತು. ಬೇಡ ಅನ್ನುತಕ್ಕಂಥ ನಿರ್ಣಯವನ್ನು ಅಲ್ಲಿ ನಾವು ಮಾಡಿಕೊಂಡು ಎಲ್ಲಾ ಈ ಚರ್ಚೆಯನ್ನು ಮಾಡುವುದೇ? ಮತ್ತು ಮಾಡತಕ್ಕಂಥ ಸಂದರ್ಭದಲ್ಲಿ ನಮ್ಮ ಕೇಸಿಗೆ ತೊಂದರೆ ಆಗದ ರೀತಿಯಲ್ಲಿ ಸೂಕ್ಷ್ಮವಾಗಿ ಬಗೆಹರಿಸತಕ್ಕಂಥ ಒಂದು ವಿಚಾರವನ್ನು ತಮ್ಮ ಗಮನದಲ್ಲಿ ಇಟ್ಟುಕೊಂಡು ನೀವು ಯಾವುದೇ ತೀರ್ಮಾನ ತೆಗೆದುಕೊಂಡರೂ I leave it to your good sense and wisdom to guide the House and to what extent. ಈಗ ಗಂಟೆ 7 ಆಯಿತು. ಎಷ್ಟು ಹೊತ್ತಿನವರೆಗೆ ಕುಳಿತುಕೊಳ್ಳಬೇಕು ತೀರ್ಮಾನವಾಗಬೇಕು. ಈಗ 7 ಗಂಟೆಗೆ ಹೋಗಿದೆ.

ಶ್ರೀ ವೀರೇಂದ್ರ ಪಾಟೀಲ್ : ಮಾನ್ಯ ಸಭಾಧ್ಯಕ್ಷರೆ ಕಾನೂನು ಏನು ಹೇಳುತ್ತದೋ ಅದನ್ನು ನಾನು ಹೇಳಿದ್ದೇನೆಯೇ ಹೊರತು ನನ್ನ ವಿಚಾರ ಹೇಳಲಿಲ್ಲ, ತಾವು ಬೇಕಾದರೆ ಓದಿ. ನಮ್ಮ ಕೇಸಿನ ಬಗ್ಗೆ ನಾನು ಮತ್ತೊಂದು ಹೇಳಲಿಲ್ಲ. ಒಂದು ವೇಳೆ ತಪ್ಪು ಮಾಡಿದ್ದರೆ ತಪ್ಪು ಮಾಡಿದ್ದೇವೆಂದು ಒಪ್ಪಿಕೊಳ್ಳಲಿಕ್ಕಾಗುವುದಿಲ್ಲ, ಹಾಗೇ ಹೇಳಿದರೆ ಜನ ನಂಬುವುದಿಲ್ಲ. With good intention we have committed some mistakes, ತಪ್ಪು ಮಾಡಿದ್ದರೆ ತಪ್ಪು

ಮಾಡಿದ್ದೇವೆಂದು ಹೇಳಬಹುದು. ನಾನು ಮಾನ್ಯ ವೀರಪ್ಪ ಮೊಯಿಲಿಯವರನ್ನು ಕೇಳುತ್ತೇನೆ. ನಮ್ಮ ವಕೀಲರುಗಳು ಸುಪ್ರೀಮ್ ಕೋರ್ಟಿನಲ್ಲಿ ಅರ್ಜಿ ಹಾಕಿ ಇಂಟರೀವರ್ ಜಡ್ಜ್‌ಮೆಂಟ್‌ನ್ನು ಟ್ರಿಬ್ಯೂನಲ್‌ನವರು ಕೊಡಬಹುದೆಂದು ಹೇಳಿದ್ದರೆ ಅದನ್ನು ನಾವು ತಪ್ಪು ಮಾಡಿದ್ದೇವೆಂದು ಹೇಳಲಿಕ್ಕೆ ಏತಕ್ಕೆ ಹೆದರಬೇಕೆಂದು ನನಗೆ ಅರ್ಥವಾಗುತ್ತಿಲ್ಲ, ತಪ್ಪು ಮಾಡಿದ್ದರೆ ತಪ್ಪು ಮಾಡಿದ್ದೇವೆಂದು ಹೇಳಬೇಕು. ನಾವು ನಮ್ಮ ಜನರಿಗೆ ಹೇಳುತ್ತಿದ್ದೇವೆಯೇ ಹೊರತಾಗಿ ಎರಡನೇಯವರಿಗೆ ಹೇಳುತ್ತಾ ಇಲ್ಲ, ಈಗ ನಾವು ಏನು ಮಾತನಾಡುತ್ತಿದ್ದೇವೆ ನಮ್ಮ ಜನರ ಹಿತ ರಕ್ಷಣೆಗಾಗಿ ಮಾತನಾಡುತ್ತಿದ್ದೇವೆ. ಹೊರತು ನಮ್ಮ ಜನರ ಹಿತಕ್ಕೆ ವಿರೋಧವಾಗಿ ಮಾತನಾಡುತ್ತಾ ಇಲ್ಲ ಆದ್ದರಿಂದ ಒಪ್ಪಿಕೊಳ್ಳಬೇಕು. ಅದರ ಸಲುವಾಗಿ ಮಾನ್ಯ ಮೊಯಿಲಿಯವರನ್ನು ಪ್ರಶ್ನೆ ಹಾಕಿದ್ದು ಅವರು ಆವೇಶದಿಂದ ಹೇಳುತ್ತಿದ್ದಾರೆಂದು ನಮ್ಮ ಲಾಯರ್ಸ್ ಹೋಗಿ ಸುಪ್ರೀಂಕೋರ್ಟ್‌ನಲ್ಲಿ ಅಪ್ಲಿಕೇಶನ್ ಕೊಟ್ಟಿಲ್ಲ ನಿಮಗೆ ಬೇಕಾದರೆ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ಕೊಡುತ್ತೇನೆ ಮತ್ತು ಟ್ರಿಬ್ಯೂನಲ್‌ನ ಜಡ್ಜ್‌ಮೆಂಟ್ ಕೊಡುತ್ತೇನೆ. ನಮ್ಮ ಲಾಯರ್ಸ್ ಸುಪ್ರೀಂ ಕೋರ್ಟಿಗೆ ಹೋಗಿ ಈ ರೀತಿ ಇಂಟೀರಿಯಂ ಜಡ್ಜ್‌ಮೆಂಟ್ ಟ್ರಿಬ್ಯೂನಲ್ ಕೊಡಬಹುದು ಎಂದು ಹೇಳಿದ್ದಾರೆ. ಅದು ತಪ್ಪಲ್ಲವೇ ಅದು ತಪ್ಪು ಎಂದು ಒಪ್ಪಿಕೊಳ್ಳಿ

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಆ ವಿಚಾರ ಪ್ರಸ್ತಾಪ ಮಾಡುತ್ತಾ ಇಲ್ಲ, ನಾನು ಆ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗಲೇ ಇಲ್ಲ, I fully agree with you.

SRI VEERANDRA PATIL : I am not addressing you. I am saying that what Sri Yediyurappa said is a fact. Our lawyer to the Supereme Court. They gave in writing that Supereme Court can give a direction, and are agreeable for the Water Tribunal to give interim judgment. ಕೊಟ್ಟಿದ್ದು ಸುಳ್ಳು ಎಂದು ಬೇಕಾದರೆ ಹೇಳಲಿ. ಮಾನ್ಯ ಮೊಯಿಲಿಯವರು ಹೇಳಲಿ. ಏಕೆಂದರೆ ಅವರಿಗೆ ಗೊತ್ತಿದೆಯಲ್ಲ ಕೊಟ್ಟಿಲ್ಲವೆಂದು ಹೇಳಲಿ. ನನ್ನ ಹತ್ತಿರ ಜಡ್ಜ್‌ಮೆಂಟ್ ಕಾಪಿ ಇದೆ ಕೊಡುತ್ತೇನೆ. ಅದರ ಸಲುವಾಗಿ ನಮ್ಮದು ಕೇಸ್ ವೀಕ್ ಇದೆ ಎಂದು ನಾನು ಹೇಳಲಿಲ್ಲ.

MR SPEAKER : I will help you by quoting that particular section 5 (3) of Inter-State River water Disputes Act. You are referring to the aspect of review.

"If upon consideration of the decision of the traibunal

A decision has been given by the Tribunal.

"the Central Government or any State Government is of opinion that anything there in contained requires explanation or that guidance is needed upon any point not orginally referred to the Tribunal, the Central Government or the State Government as the case may be may, within 3 months from the date of the decision, again refer the matter to the Tribunal for further consideration."

we are right at this stage now for further consideration.

ಶ್ರೀ ವೀರೇಂದ್ರ ಪಾಟೀಲ್ : ನಾನು ಏನು ಹೇಳಿದೆ ಎಂದರೆ.

ಅಧ್ಯಕ್ಷರು : ನೀವು ಹೇಳಿದ್ದನ್ನೇ ನಾನು ಹೇಳುತ್ತಾ ಇರುವುದು.

You are quoting the Act. Right.

ಶ್ರೀ ವೀರೇಂದ್ರ ಪಾಟೀಲ್ : ನಾನು ಏನು ಹೇಳಿದೆ ಎಂದರೆ ಅದು ನನ್ನ ಒಪೀನಿಯನ್ ಅಲ್ಲ ಆಕ್ಟ್‌ನಲ್ಲಿ ಇದೆ. ನಾನು ಹೇಳಿದ್ದು ಅದನ್ನೇ ಎರಡನೇಯ ಅಭಿಪ್ರಾಯ ಇಲ್ಲ.

ಆಕ್ಟ್‌ನಲ್ಲಿ ಸ್ಪಷ್ಟವಾಗಿ within three months ಎಂದು ಇದೆ. ಮೂರು ತಿಂಗಳಲ್ಲಿ ಏಕೆ ಹೋಗಲಿಲ್ಲ? ತಪ್ಪು ಮಾಡಿಲ್ಲವೇ? ಮಾನ್ಯ ಮುಖ್ಯಮಂತ್ರಿಗಳು ಹೇಳಲಿ. ಮೂರು ತಿಂಗಳೊಳಗೆ ಏಕೆ ಹೋಗಲಿಲ್ಲ ಎಂಬುದನ್ನು ಹೇಳಬೇಕಲ್ಲ.

MR SPEAKER : And then if further says :

"And on such reference, the Tibunal may forward to the Central Government a further report giving such explanation or guidance as it deems fit and in such a case, the decision of the Tribunal shall be deemed to be modified accordingly."

We have taken. the State of Karnataka has taken care of it.

ಶ್ರೀ ವೀರೇಂದ್ರಪಾಟೀಲ್ : ಟ್ರಿಬ್ಯೂನಲ್ ಡಿಸಿಷನ್ ಫೈನಲ್ ಎಂದು ನಾನು ಹೇಳಲೇ ಇಲ್ಲ. ನಾನು ಏನು ಹೇಳಿದ್ದು ಏನು ಎಂದು ಕಡತ ತೆಗೆಸಿ ನೋಡಿ. ಈಗ ನಮ್ಮದು ಪಿಟೀಷನ್ ಏನು ಇದೆಯಲ್ಲಾ ಅದರ ಮೇಲೆ ಅವರು ಏನು ನಿರ್ಣಯ ಕೊಡುತ್ತಾರೆ ಅದು ಫೈನಲ್ ಆಗುತ್ತದೆಯೇ ಹೊರತಾಗಿ ಈಗ ಏನು ಡಿಸಿಷನ್ ಕೊಟ್ಟಿದ್ದಾರೆ ಅದು ಫೈನಲ್ ಆಗುವ ಹಾಗೆ ಇಲ್ಲ ಎಂದು ನಾನು ಒಪ್ಪಿಕೊಳ್ಳುತ್ತೇವೆ. ಆದರೆ ಮೂರು ತಿಂಗಳೊಳಗೆ ಪಿಟೀಷನ್ ಕೊಡಬೇಕಿತ್ತು. ಸುಪ್ರಿಂ ಕೋರ್ಟಿನ ರಿಟೈರ್ಡ್ ಚೀಫ್ ಜಸ್ಟೀಸ್ ಅವರು ಏನು ಹೇಳಿದ್ದಾರೆ ಎಂದರೆ ಇದು ಇಂಟೀರಿಯಮ್ ಜಡ್ಜ್‌ಮೆಂಟ್‌ಗೆ ಅಪ್ಲೈ ಆಗುವ ಹಾಗೆ ಇಲ್ಲ. ಇದು ಫೈನಲ್ ಜಡ್ಜ್‌ಮೆಂಟ್‌ಗೆ ಅಪ್ಲೈ ಆಗುತ್ತದೆ ಎಂದು ಹೇಳಿದ್ದಾರೆ. ಆದರೆ ಟ್ರಿಬ್ಯೂನಲ್‌ನವರು ಏನು ಡಿಸಿಷನ್ ತೆಗೆದುಕೊಳ್ಳುತ್ತಾರೆಂದು ನನಗೆ ಗೊತ್ತಿಲ್ಲ ಟ್ರಿಬ್ಯೂನಲ್‌ನ ಆಕ್ಟ್‌ನಲ್ಲಿ ಹೇಳಿದ್ದಾರೆ. ಮೂರು ತಿಂಗಳೊಳಗೆ ಎಕ್ಸಪ್ಲನೇಷನ್ ಅಥವಾ ಗೈಡೆನ್ಸ್ ಕೇಳಬಹುದು ಎಂದು ಅಂದರೆ ಇದರ ಅರ್ಥ ಗೈಡೆನ್ಸ್ ಕೇಳಬಹುದಿತ್ತು. ಮೂರು ತಿಂಗಳೊಳಗೆ ಕೇಳಲಿಲ್ಲ. ಏಕೆ ಕೇಳಲಿಲ್ಲ ಎಂಬುದು ಒಂದು ಪ್ರಶ್ನೆ ಕೇಳದೇ ಹೋದರೂ ಇವತ್ತು ನಾವು ಹೇಳಬಹುದು ಇದು ಇಂಟೀರಿಯಂ ಜಡ್ಜ್‌ಮೆಂಟ್ ಅದಕ್ಕೆ ನಾವು ಕೇಳಲಿಲ್ಲ ಫೈನಲ್ ಜಡ್ಜ್‌ಮೆಂಟ್ ಆಗಿದ್ದರೆ ಮೂರು ತಿಂಗಳೊಳಗೆ ಕೇಳುತ್ತಿದ್ದೆವು ಎಂಬ ಮಾತನ್ನು ಹೇಳಬಹುದು. ಇಲ್ಲವೆಂದು ಹೇಳುವ ಹಾಗೆ ಇಲ್ಲ. ಆದರೆ ಟ್ರಿಬ್ಯೂನಲ್‌ನವರು ಏನು ಡಿಸಿಷನ್ ತೆಗೆದುಕೊಳ್ಳುತ್ತಾರೆ ಅದು ನಮಗೆ ಗೊತ್ತಾ? ಇಲ್ಲ. 1956ರ ಆಕ್ಟ್ ಇದೆ ಅದನ್ನು ನೋಡಿ. ಆಗ ಪಂಡಿತ್ ನೆಹರೂ ಅವರು ಇದ್ದರು. 1956ರಿಂದ ಒಂದೇ ಸಲ ಆಕ್ಟ್ ಅಮೆಂಡ್ ಆಗಿರುವುದು ಆದರೆ ನಾವು ಟ್ರಿಬ್ಯೂನಲ್ ಡಿಸಿಷನ್ ತೆಗೆದುಕೊಂಡು ಮೇಲೆ ಅದಕ್ಕೆ ಅಪೀಲ್ ಹೋಗುವ ಪ್ರಶ್ನೆ ಇಲ್ಲ.

1956ರಿಂದ ಆಕ್ಟ್ ಆಗಿ ಉಳಿದುಕೊಂಡಿದೆ. ನಾನು ಆಕ್ಟ್‌ನ ವಿಚಾರ ಹೇಳುತ್ತಾ ಇದ್ದೇನೆ ಹೊರತಾಗಿ ನನ್ನ ವಿಚಾರವನ್ನು ಹೇಳುತ್ತಾ ಇಲ್ಲ ಆದರೆ ಮಾನ್ಯ ಚಂದ್ರೇಗೌಡರು ನನ್ನ ವಿಚಾರವನ್ನೇ ಹೇಳುತ್ತಾ ಇದ್ದೇನೆ ಎಂದು ತಿಳಿದುಕೊಂಡಿದ್ದಾರೆ ಎಂದು ಕಾಣುತ್ತದೆ. ನಾನು ನನ್ನ ವಿಚಾರ ಹೇಳುತ್ತಾ ಇಲ್ಲ.

MR SPEAKER : We now understand Sri Veerandra Patil. He never meant that the Tribunal don't have the power to review its own orders. That was not what he wanted to convey. Yes, Sir. You can proceed further.

SRI D.B. CHANDRE GOWDA : In the proceedings

MR. SPEAKER : He has made the clarification. So, there is no problem.

ಶ್ರೀ ವೀರೇಂದ್ರ ಪಾಟೀಲ್ : ಮೊನ್ನೆ ಮಂಡ್ಯದಲ್ಲಿ ಮತ್ತು ಹೊರಗಡೆಯಲ್ಲಿಯೂ ಕೂಡ ನಾಯಕರುಗಳು ಮತ್ತು ಸದಸ್ಯರುಗಳು ಹೇಳಿದ್ದಾರೆ. ರಾಜಿನಾಮೆ ಕೊಡುವ ವಿಚಾರದಲ್ಲಿ ಹೇಳಿದ್ದಾರೆ. ಹಾಗೆ ನಾವು ರೆಸಿಗ್ನೇಷನ್ ಕೊಡುವುದರಿಂದ ಏನು ಆಗುತ್ತದೆ. ಈಗ ಕಾವೇರಿ ಸಂಬಂಧದ ಜಗಳ ಇರುವುದು ನಮ್ಮ ಮತ್ತು ಕೇಂದ್ರ ಸರಕಾರದ ನಡುವೆ ಅಲ್ಲ. ವಿವಾದ ಇರುವುದು ನಮಗೂ ತಮಿಳುನಾಡಿನ ನಡುವೆ. ನಾವು ಒಂದು ಕಡೆ ಇದ್ದೇನೆ ತಮಿಳುನಾಡಿನವರು ಒಂದು ಕಡೆ ಇದ್ದರೆ. We request the Central Government to use their discretion or their good offices. We can always go to the Prime Minister and ask him to use is good offices. ಅಂತ ಅವರಿಗೆ ಹೇಳಬಹುದು. ಆದರೆ ಜಗಳ ಇರುವುದು ನಮಗೆ ಮತ್ತು ತಮಿಳುನಾಡಿನವರ ಮಧ್ಯೆ ಹೊರತು ಸೆಂಟ್ರಲ್ ಗವರ್ನಮೆಂಟ್‌ನವರ ನಡುವೆ ಅಲ್ಲ. ಇದನ್ನು ತಿಳಿದುಕೊಳ್ಳಬೇಕಾಗುತ್ತದೆ. ನಾವು ನಮ್ಮ ರಾಜ್ಯದಿಂದ 28 ಜನ ಎಂ.ಪಿ.ಗಳು ಮತ್ತು 224 ಜನ ಎಂ.ಎಲ್.ಎ.ಗಳು ಇದ್ದೇವೆ. ಇಲ್ಲಿ ನಾವುಗಳು ರಾಜಿನಾಮೆ ಕೊಟ್ಟರೆ ಇಲ್ಲಿನ 28 ಜನ ಎಂ.ಪಿ. ಗಳಿದ್ದರೆ ತಮಿಳುನಾಡಿನ 40 ಜನ ಎಂ.ಪಿ.ಗಳು ಇದ್ದಾರೆ 224 ಜನ ಎಂ.ಎಲ್.ಎ ಗಳು ನಾವಿದ್ದರೆ ಅವರು ಸುಮಾರು 300 ಜನರಿದ್ದಾರೆ. ಅವರೂ ಕೂಡ ರಾಜಿನಾಮೆ ಕೊಟ್ಟರೆ ಯಾವುದೇ ರೀತಿಯಿಂದಾದರೂ ಸಮಸ್ಯೆ ಬಗೆಹರಿಯುತ್ತದೆಯೇ ಎಂಬುದನ್ನು ಹೇಳಬೇಕು? ಖಂಡಿತಾ ರಾಜಿನಾಮೆಯಿಂದ ಈ ಪ್ರಶ್ನೆ ಬಗೆಹರಿಯುವುದಿಲ್ಲ. ರಾಜಿನಾಮೆಯನ್ನು ನಾವುಗಳು ಕೊಟ್ಟರೆ ಇದ್ದಂಥ ಒಂದು ಫೋರಂನ್ನು ನಾವು ಕಳೆದುಕೊಳ್ಳುತ್ತೇವೆ ಅಷ್ಟೇ ಆದರ ಹೊರತು ರೆಸಿಗ್ನೇಷನ್‌ನಿಂದ ಪ್ರಶ್ನೆ ಬಗೆಹರಿಯುವುದಿಲ್ಲ. ನನ್ನ ವಿಚಾರದಲ್ಲಿ ಒಂದು ವೇಳೆ ಮಾನ್ಯ ಮುಖ್ಯಮಂತ್ರಿಯವರು ರಾಜಿನಾಮೆ ಕೊಡಿ ಎಂದು ಹೇಳಿದರೆ ನಾಳೆಯೇ ಕೊಡುತ್ತೇನೆ. ನಾನು ಈ ದಿವಸಗಳಲ್ಲಿ ಒಂದೆರಡು ಸಾರಿ ಮಾತ್ರ ಸದಸ್ಯಕ್ಕೆ ಬರುತ್ತೇನೆ. ಮುಖ್ಯಮಂತ್ರಿಯವರು ಹೇಳಿದರೆ ಆದರಂತೆ ನಾಳೆಯೇ ರೆಸಿಗ್ನೇಷನ್ ಕೊಡುತ್ತೇನೆ.

ಅಧ್ಯಕ್ಷರು : ಹಾಗೆ ರಾಜಿನಾಮೆಯನ್ನು ಕೇಳಿದರೇ ಬೇರೆ. ಇವರು ಯಾರ ರಾಜಿನಾಮೆಯನ್ನು ಕೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್ : ನಮ್ಮ ಲೀಡರ್ ಒಂದು ವೇಳೆ ಈ ಕುರಿತು ರಾಜಿನಾಮೆ ಕೇಳಿದಾಗ ನಾವು ಕೊಡಲಿಲ್ಲವಾದರೆ ಅದು ಇನ್‌ಡಿಸಿಪ್ಲಿನ್

ಆಗುತ್ತದೆ. ಆದರ ಸಲುವಾಗಿ ಲೀಡರ್ ಹತ್ತಿರ ಕಳುಹಿಸಿಕೊಡುತ್ತೇನೆ ಬೇಕಾದರೆ ಅವರು ನಿಮ್ಮ ಹತ್ತಿರ ಕಳುಹಿಸಲಿ. ನಾನು ಬೇಡ ಎಂದು ಹೇಳುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ : ರಾಜಿನಾಮೆ ವಿಚಾರ ಬಂದ ತತ್‌ಕ್ಷಣ ನಾನು ಒಂದು ಅಭಿಪ್ರಾಯ ಪಟ್ಟಿದ್ದೆ ಇವೊತ್ತು ನನ್ನ ಅಭಿಪ್ರಾಯವನ್ನು ತಾವುಗಳು ಕೂಡ ಇಟ್ಟುಕೊಂಡಿದ್ದೀರಿ. ಅಥವಾ ತಮ್ಮ ಅಭಿಪ್ರಾಯವನ್ನು ನಾನು ಇಟ್ಟುಕೊಂಡಿದ್ದೇನೆ. ಇದು ನನಗೆ ಬಹಳ ಸಂತೋಷದ ವಿಚಾರವಾಗಿದೆ. ನಮಗೆ ಇಲ್ಲಿ ರಾಜ್ಯದಲ್ಲಿ ಎರಡು ಫೋರಂಸ್ ಇದೆ. ಕೇಂದ್ರದಲ್ಲಿಯೂ ಎರಡು ಫೋರಂಸ್ ಇವೆ. ಮಾನ್ಯ ಸದಸ್ಯರುಗಳು ಯಾವುದೇ ಪಕ್ಷದವರಿದ್ದರೂ ಕೂಡ ಮಾನ್ಯ ಸದಸ್ಯರು ಯಾರೇ ಇದ್ದರೂ ಕೂಡ ಹೇಳತಕ್ಕಂಥ ಒಂದು ಸದಾವಕಾಶ ಕಾನೂನಿನ ಚೌಕಟ್ಟಿನಲ್ಲಿ ಇರತಕ್ಕಂಥದ್ದನ್ನು ನಾವು ಇಲ್ಲಿ ಹೇಳಿಕೊಳ್ಳಬಹುದು. ಇದು ನಮಗೆ ವಿಶೇಷವಾಗಿ ಜನರು ಪ್ರಜಾಪ್ರಭುತ್ವದಲ್ಲಿ ಕಲ್ಪಿಸಿ ಕೊಟ್ಟಿರುತ್ತಾರೆ. ಇದನ್ನು ನಾವು ಸದುಪಯೋಗ ಮಾಡಬೇಕು. ಅಂಥ ಒಂದು ಸ್ಪಷ್ಟವಾದ ಅಭಿಪ್ರಾಯವನ್ನು ಇಟ್ಟುಕೊಂಡಿರತಕ್ಕಂಥವರಲ್ಲಿ ನಾನೂ ಒಬ್ಬ. ಇವೊತ್ತು ನಾವುಗಳು ರಾಜಿನಾಮೆ ಕೊಡುತ್ತೇವೆ ಎಂದು ಇಟ್ಟುಕೊಳ್ಳೋಣ for the sake of argument.

ಆಗ ನಮಗೆ ಉಳಿಯುವುದು ಏನು ಇದೆ? ಎಲ್ಲರೂ ಈ ದೇಶದಲ್ಲಿ ಸದಸ್ಯರುಗಳು ಆಗಲಿಲ್ಲ. ಆದರೆ ಸದಸ್ಯರು ಅಲ್ಲದವರಿಗೆ ಏನು ಹಕ್ಕು ಇದೆ ಅದನ್ನು ನಾವು ಎಲ್ಲಾ ಪಕ್ಷದವರು ಕೂಡ ಒಗ್ಗಟ್ಟಾಗಿ ಪ್ರತಿಪಾದನೆ ಮಾಡತಕ್ಕಂಥಾದ್ದು ಇದೆ. ಸಂತೋಷದ ವಿಚಾರ ಅಂದರೆ ಈ ವಿಚಾರದಲ್ಲಿ ಎಲ್ಲಾ ರಾಜಕೀಯ ಪಕ್ಷಗಳವರೂ ಒಗ್ಗಟ್ಟಾಗಿ ಇದ್ದೇವೆ. ನಮ್ಮ ರಾಜ್ಯದ ಹಕ್ಕನ್ನು ಪ್ರತಿಪಾದಿಸಲು ನಾವುಗಳು ಎಲ್ಲರೂ ಒಗ್ಗಟ್ಟಾಗಿಯೇ ಇರಬೇಕು. ಇದನ್ನು ಇದೇ ರೀತಿಯಾಗಿಯೇ ಇಟ್ಟುಕೊಳ್ಳಬೇಕೆಂಬ ಅಭಿಪ್ರಾಯವು ನನ್ನದು. ತಾವುಗಳು ಕೂಡ ಇದೇ ಅಭಿಪ್ರಾಯವನ್ನು ಪಟ್ಟಿದ್ದೀರಿ ಸಂತೋಷ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದೇ ಒಮ್ಮತದ ಅಭಿಪ್ರಾಯವನ್ನು ನಾವೆಲ್ಲರೂ ಸಂಪೂರ್ಣವಾಗಿ ಇಟ್ಟುಕೊಂಡು ಹೋಗೋಣ ಇದರ ಸಂಪೂರ್ಣವಾದ ಸದುಪಯೋಗವನ್ನು ಪಡಿಸಿಕೊಳ್ಳೋಣ ತಮಗೆ ಅಭಿನಂದನೆಗಳು

ಶ್ರೀ ವೀರೇಂದ್ರ ಪಾಟೀಲ್ : ನಾನು ಇನ್ನೂ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ ಏಕೆಂದರೆ ಬಿ.ಎ.ಸಿ.ಯಲ್ಲಿ ನೀವು ಏನು ತೀರ್ಮಾನ ಮಾಡಿಕೊಂಡಿದ್ದೀರೋ ಅದು ನನಗೆ ಗೊತ್ತಿಲ್ಲ. ಒಂದು ವೇಳೆ ಕಾವೇರಿ ಬಗ್ಗೆ ಮಾತನಾಡಬೇಕೆಂದು ಹೇಳಿದ್ದರೆ ನಾನು ಇನ್ನೂ ಮಾತನಾಡುತ್ತಿದ್ದೆ ನಾನು ಮಾತನಾಡಿದ್ದು ಕಾವೇರಿ ತೀರದ ಜನರ ವಿಚಾರದಲ್ಲಿ. ಅವರ ಹಿತದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ಕರ್ನಾಟಕ ಜನರ ಹಿತದೃಷ್ಟಿಯಿಂದ ಮಾತನಾಡುತ್ತಾ ಇದ್ದೇನೆ. ನನ್ನ ಹಿತದೃಷ್ಟಿಯಿಂದ ಮಾತನಾಡುತ್ತಾ ಇಲ್ಲ ಎಂದು ಹೇಳ ಬಯಸುತ್ತೇನೆ ಇವರ ನಾಯಕರು ಮತ್ತು ಇವರು ಒಂದು ವಿಚಾರವನ್ನು ಹೇಳಿದ್ದಾರೆ. ಅದೇನೆಂದರೆ ವೀರೇಂದ್ರ ಪಾಟೀಲರು ಬೇಕಾದಷ್ಟು ತಪ್ಪು ಮಾಡಿದ್ದಾರೆ ಎಂಬುದು ಕಾವೇರಿಯ ಬಗ್ಗೆ ತಮಿಳುನಾಡಿನವರು ಮಂತ್ರಿಗಳು ಬಂದಿದ್ದರು ಅವರಿಗೆ ಒಂದು ಕಪ್ ಚಹಾ ಕಾಫಿ ಕೊಟ್ಟಿರಲಿಲ್ಲ ಎಂದು ಹೇಳಿದ್ದರು. ಆದರೆ ಇತ್ತೀಚೆಗೆ ಆ ಬಗ್ಗೆ ಏನೂ ಮಾತನಾಡುತ್ತಾ ಇಲ್ಲ.

ಅಧ್ಯಕ್ಷರು : ನೀವು ಬಂದವರಿಗೆ ಚಹಾ ಕೊಡುತ್ತಾ ಇದ್ದೀರಿ ಮುಖ್ಯಮಂತ್ರಿಗಳಾಗಿದ್ದಾಗಲೂ ಕೊಟ್ಟಿದ್ದೀರಿ ಖಾಸಗಿಯಾಗಿದ್ದಾಗಲೂ ಕೊಟ್ಟಿದ್ದೀರಿ.

ಶ್ರೀ ವೀರೇಂದ್ರ ಪಾಟೀಲ್ : ಮುಖ್ಯಮಂತ್ರಿಗಳಾಗಿದ್ದಾಗ ಕೊಟ್ಟಿಲ್ಲ ಎಂದು ಅವರು ಹೇಳಿದ್ದಾರೆ. ಇವರು ಒಂದೆರಡು ಸಲ ಹೇಳಿದರು ಆ ಮೇಲೆ ಸುಮ್ಮನಾದರು. ಆ ಮನೆಯ ಸದಸ್ಯರೊಬ್ಬರು ಇದ್ದಾರೆ ಮತ್ತೊಬ್ಬ ನಾಯಕರು ಇದ್ದಾರೆ ಅವರ ಹೆಸರು ಹೇಳಬಯಸುವುದಿಲ್ಲ. ಮತ್ತೊಬ್ಬರು ನಾಯಕರು ಡೆಲ್ಲಿಗೆ ಹೋಗಿದ್ದಾರೆ. ಜನತಾದಳದ ಅಧ್ಯಕ್ಷರಾಗಿದ್ದವರು ಅವರು ಕೂಡ ಮೊನ್ನೆ ಈ ಮಾತನ್ನು ಹೇಳಿದ್ದಾರೆ ಪಾಟೀಲರು ಅವರಿಗೆ ಒಂದು ಕಪ್ಪು ಚಹಾ ಕೊಟ್ಟಿಲ್ಲ ಸರಿಯಾಗಿ ಮಾತನಾಡಿಸಿಲ್ಲ ಅವರೊಂದಿಗೆ ಒರಟಾಗಿ ಬಿಹೇವ್ ಮಾಡಿದರು ಎಂದು ಹೇಳಿದ್ದಾರೆ. ನಾನು ಎಷ್ಟು ಸಲ ಈ ಬಗ್ಗೆ ಹೇಳಬೇಕೋ ಗೊತ್ತಾಗುತ್ತಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತೇನೆ. ಮೊನ್ನೆ ಸಲ ಅವರು ಬಂದಾಗ ನಾನು ಉತ್ತರ ಕರ್ನಾಟಕದ ಪ್ರವಾಸದಲ್ಲಿದ್ದೆ. ಆಗ ಇದ್ದಂಥ ಇರಿಗೇಶನ್ ಸಚಿವರು ಆರ್ಥಿಕ ಸಚಿವರು ಹೋಗಿ ಅವರನ್ನು ಭೇಟಿ ಮಾಡಿದ್ದಾರೆ. ಮುಖ್ಯಮಂತ್ರಿಗಳು ರಾಜ್ಯದಲ್ಲಿ ಪ್ರವಾಸದಲ್ಲಿದ್ದಾರೆ ದಯವಿಟ್ಟು ಮತ್ತೊಮ್ಮೆ ಆಗಮಿಸಬೇಕೆಂದು ಎಂದು ಅವರನ್ನು ಕೇಳಿಕೊಂಡಿದ್ದಕ್ಕೆ ಅವರು ಮತ್ತೊಮ್ಮೆ ಬಂದಿದ್ದರು. ಅವರು ಬಂದಾಗ ನಾನು ಅವರನ್ನು ಭೇಟಿಯಾಗಿದ್ದೇನೆ. ಅವರ ಹತ್ತಿರ ಮಾತನಾಡಿದ್ದೇನೆ. ಅವರಿಗೆ ನೀರು ಕೊಟ್ಟಿದ್ದೇನೆ ಎಲ್ಲಾ ಕೊಟ್ಟಿದ್ದೇನೆ.

ಅಧ್ಯಕ್ಷರು : ಕಾಫಿ ಒಂದು ಬಿಟ್ಟು ಕೊಟ್ಟಿದ್ದೀರಿ ಎಂದು ಕಾಣುತ್ತದೆ.

(ನಗು)

ಶ್ರೀ ವೀರೇಂದ್ರ ಪಾಟೀಲ್ : ಹಾಗೆಂದು ಅವರ ನಾಯಕರು ಹೇಳುತ್ತಾ ಇದ್ದಾರೆ. ನಾನು ಅವರ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ. ಇನ್ನು ಮುಂದಾದರೂ ಹೀಗೆ ಹೇಳುವುದನ್ನು ಸಂಬಂಧಪಟ್ಟವರು ನಿಲ್ಲಿಸಲಿ ಎಂದು ಹೇಳಬಯಸುತ್ತೇನೆ. ಇನ್ನು ಒಂದೆರಡು ನಿಮಿಷಗಳಲ್ಲಿ ನನ್ನ ಮಾತನ್ನು ಮುಗಿಸಲಿದ್ದೇನೆ. ನಾನು ಈ ವಿಚಾರದಲ್ಲಿ ತಮಿಳುನಾಡಿನವರಿಗೆ ಹೇಳಿದ್ದೇನೆ. ನೀರು ನಮ್ಮ ರಾಜ್ಯದಿಂದ ಹರಿದು ನಿಮ್ಮಲ್ಲಿಗೆ ಬರುತ್ತದೆ. ಅವರು ರಿಸರ್ವಾಯರನ್ನು ಮೆಟ್ಟೂರ್‌ನಲ್ಲಿ ಮಾತ್ರ ಕಟ್ಟಿದ್ದಾರೆ. ಉಳಿದುದು ಅಣೆಕಟ್ಟುಗಳು ಮಾತ್ರ ನೀವು ರಿಸರ್ವಾಯರನ್ನು ಕಟ್ಟಿಕೊಂಡು ಸಮುದ್ರಕ್ಕೆ ಹರಿದು ಹೋಗುವ ನೀರನ್ನು ಉಪಯೋಗ ಮಾಡಿಕೊಳ್ಳಿರಿ ನಿಮಗೆ ಈ ಬಗ್ಗೆ ಯಾರು ಬೇಡ ಎಂದು ಹೇಳುತ್ತಾರೆ? ನಮ್ಮಲ್ಲಿ ಹರಿಯುವ ನೀರನ್ನು ನೀವು ಉಪಯೋಗ ಮಾಡಬೇಕೆಂದು ಅದು ಹೇಗೆ ಸಾಧ್ಯ? ಅಲ್ಲಿ ಇರುವಂಥ ಅನೇಕ ಜನರು ಆಗ ಹೇಳಿದರು ಅವರ ಹೆಸರನ್ನು ಹೇಳ ಬಯಸುವುದಿಲ್ಲ ನಮಗೆ ಅದನ್ನು ಕಟ್ಟಲು ಭೂಮಿ ಇಲ್ಲ ಎಂದು ಹೇಳಿದರು. ಅಂದರೆ ರಿಸರ್ವಾಯರ್‌ನ್ನು ಭೂಮಿ ಬಿಟ್ಟು ಆಕಾಶದಲ್ಲಿ ಕೊಟ್ಟುವುದಕ್ಕೆ ಸಾಧ್ಯವಿದೆಯೇ ನಮ್ಮಲ್ಲಿರುವ ಭೂಮಿ ಎಲ್ಲಾ ಪರ್ಟೈಲ್ ಲ್ಯಾಂಡ್ ಅದರ ಸಲುವಾಗಿ ನಮ್ಮಲ್ಲಿ ಯಾರೂ ರಿಸರ್ವಾಯರ್‌ನ್ನು ಕಟ್ಟುವುದಕ್ಕೆ ಬಿಡುತ್ತಿಲ್ಲ ಎಂದು ಹೇಳಿದರು.

ನೀವು ನೀರು ಬಿಟ್ಟರೆ ಉಪಯೋಗ ಮಾಡುತ್ತೇವೆ ಹೊರತಾಗಿ ರಿಸರ್ವಾಯರ್ ಕಟ್ಟುವ ಪರಿಸ್ಥಿಯಲ್ಲಿ ನಾವು ಇಲ್ಲ ಎಂದು ಹೇಳಿದರು. ಆದ್ದರಿಂದ ಇವೊತ್ತು ನಮ್ಮ ಮುಖ್ಯಮಂತ್ರಿಗಳು ಅವರಿಗೆ ಹೇಳಬೇಕು ಅವರಿಗೆ ರಿಸರ್ವಾಯರ್‌ನ್ನು ಕಟ್ಟಿಕೊಳ್ಳುವಂತೆ ಒತ್ತಾಯ ಮಾಡಬೇಕು. ತಂಜಾವೂರು ಪಾಂಡಿಚೇರಿ ಕಲ್ಲಿಕೋಟೆ ಮುಂತಾದ ಕಡೆಗಳಲ್ಲಿ ಕಟ್ಟಿಕೊಳ್ಳಬಹುದು. ಅಲ್ಲಿ ಸಮುದ್ರಕ್ಕೆ ಹೋಗುವ ನೀರನ್ನು ಹಿಡಿದುಕೊಂಡು ಉಪಯೋಗ ಮಾಡಿದರೆ ಆಗುತ್ತದೆ. ಅದಕ್ಕೆ ಅಡ್ಡಿ ಇಲ್ಲ. ಅದನ್ನು ಬಿಟ್ಟು ನಿಮ್ಮ ರಿಸರ್ವಾಯರ್‌ನಿಂದ ನೀರು ಬಿಡಿ ಎಂದು ಹೇಳುತ್ತಿದ್ದಾರೆ

ಇದ ಸರಿಯಲ್ಲ, ಬಹುಶಃ ನಮ್ಮ ಜನರಿಗೆ ಅನ್ಯಾಯ ಮಾಡಿ ಅವರಿಗೆ ನಮ್ಮ ರಿಸರ್ವಾಯರ್‌ನಿಂದ ನೀರು ಬಿಡುವುದಕ್ಕೆ ಆಗುವುದಿಲ್ಲ. ಹೀಗೆ ಇನ್ನೂ ಅನೇಕ ವಿಚಾರಗಳನ್ನು ಹೇಳಬಹುದು. ಆದರೆ ನಾನು ಹೇಳುವುದಕ್ಕೆ ಹೋಗುವುದಿಲ್ಲ ಏಕೆಂದರೆ ನಾಳೆ ಬಿಟ್ಟು ನಾಡಿದ್ದು ಈ ಕುರಿತು ಕೇಸ್ ಇದೆ. ನಾನು ಹೇಳಿದ್ದೇನೆ ಎಂದು ಆ ಕಾರಣಕ್ಕಾಗಿ ಕೇಸ್ ನಮ್ಮ ಪರವಾಗಿ ಆಗಿಲ್ಲ ಎಂದು ಏನಾದರೂ ನನ್ನ ಪರವಾಗಿ ಗೂಬೆ ಕೂರಿಸುವುದು ಬೇಡ. ನಮ್ಮ ರಾಜ್ಯದ ಹಿತರಕ್ಷಣೆಯ ಜವಾಬ್ದಾರಿಯು ನಮ್ಮ ಸರಕಾರದ್ದು ಅದನ್ನು ಅವರು ಅರಿತು ನಡೆದುಕೊಳ್ಳುತ್ತಾರೆ.

ನಮ್ಮ ಕೆಲಸ ಇಷ್ಟೆ ಅದಕ್ಕಿಂತ ಹೆಚ್ಚು ಮಾಡಲಿಕ್ಕೆ ಆಗುವುದಿಲ್ಲ ಅದರ ಸಲುವಾಗಿ ಕಾವೇರಿ ಹಿತ ರಕ್ಷಣೆಯನ್ನು ಮಾಡಬೇಕು ಎಂದು ನಾನು ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಯಪೂರ್ವಕರಾಗಿ ಕೇಳಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸಭೆ ಮುಂದುವರಿದು ನಾಳೆ ಬೆಳಿಗ್ಗೆ 11 ಗಂಟೆಗೆ ಮತ್ತೆ ಸಮಾವೇಶವಾಗುತ್ತದೆ.

ಸದನವು 7-16ಕ್ಕೆ ಮುಕ್ತಾಯಗೊಂಡು ಮತ್ತೆ ಬೆಳಿಗ್ಗೆ ದಿನಾಂಕ 27-2-92ರಂದು ಗುರುವಾರ 11 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)